# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ
ಸೋಮವಾರ, ಮಾರ್ಚ್ 22, 2021

ಸಂಪುಟ : 47 ಸಂಚಿಕೆ : 322 ☎ 254736 91642 99999 RNI No: 27369/75, KA/SK/CTA-275/2021-2023. O/P @ J.D. Circle P.O. ಪುಟ : 6 ರೂ : 4.00 www.janathavani.com janathavani@mac.com


## ಗೋದಾಮಿಗೆ ಧಾನ್ಯ ತುಂಬಿ ಲಾಭಕೋರತನ

### ನಗರಕ್ಕೆ ಭೇಟಿ ನೀಡಿದ್ದ ರೈತ ಹೋರಾಟಗಾರ ರಾಕೇಶ್ ಟಿಕಾಯತ್ ಆಕ್ರೋಶ

ದಾವಣಗೆರೆ, ಮಾ. 21 – ಬಂಡವಾಳಶಾಹಿಗಳು ಧಾನ್ಯವನ್ನು ಕಡಿಮೆ ಬೆಲೆಗೆ ಖರೀದಿಸಿ, ದೊಡ್ಡ ದೊಡ್ಡ ಗೋದಾಮುಗಳಲ್ಲಿ ಧಾನ್ಯಗಳನ್ನು ತುಂಬಿಕೊಂಡು ಹೆಚ್ಚಿನ ಬೆಲೆಗೆ ಮಾರಾಟ ಮಾಡಿ ಲಾಭ ಮಾಡಿಕೊಡಲು ಕೇಂದ್ರ ಸರ್ಕಾರ ಮುಂದಾಗಿದೆ ಎಂದು ದೆಹಲಿಯಲ್ಲಿ ಹೋರಾಟ ಮುನ್ನಡೆಸುತ್ತಿರುವ ರೈತ ಮುಖಂಡ ರಾಕೇಶ್ ಟಿಕಾಯತ್ ಆಕ್ರೋಶ ವ್ಯಕ್ತಪಡಿಸಿದ್ದಾರೆ.



ರಾಜ್ಯದಲ್ಲಿ ರೈತರ ಮಹಾ ಪಂಚಾಯತ್‌ಗಳನ್ನು ನಡೆಸಲು ಆಗಮಿಸಿದ ವೇಳೆ ನಗರಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಶಿವಯೋಗ ಮಂದಿರದಲ್ಲಿ ಆಯೋಜಿಸಿದ್ದ ಸಭೆಯಲ್ಲಿ ಅವರು ಮಾತನಾಡುತ್ತಿದ್ದರು.

ಕೇಂದ್ರ ಸರ್ಕಾರದ ಕಾಯ್ದೆಯಿಂದ ಬಂಡವಾಳಶಾಹಿಗಳು ದೊಡ್ಡ ಗೋದಾಮುಗಳಲ್ಲಿ ಧಾನ್ಯವನ್ನು ಲಾಭಕ್ಕಾಗಿ ತುಂಬಿಕೊಳ್ಳಲು ದಾರಿ ಮಾಡಿಕೊಡಲಾಗುತ್ತದೆ. ಹೀಗಾದರೆ ಸಣ್ಣ ಅಂಗಡಿಯವರು ಎಲ್ಲಿಗೆ ಹೋಗಬೇಕು? ಇಂತಹ ಪ್ರಯತ್ನದ ವಿರುದ್ಧದ ಹೋರಾಟ ಸುದೀರ್ಘವಾಗಿರಲಿದೆ ಎಂದವರು ತಿಳಿಸಿದರು.

ದೆಹಲಿಯಲ್ಲಿ ರೈತರು ಹೋರಾಟ ನಡೆಸುತ್ತಿರುವ ಮಾದರಿಯಲ್ಲೇ, ಬೆಂಗಳೂರನ್ನೂ ನಾಲ್ಕೂ ದಿಕ್ಕುಗಳಿಂದ ಸುತ್ತುವರೆಯಬೇಕು. ಇದು ಬದುಕಿಗಾಗಿ ನಡೆಸುತ್ತಿರುವ ಹೋರಾಟ. ಹೀಗಾಗಿ ಜಾತಿ - ಧರ್ಮಗಳು, ಚಿಕ್ಕವರು - ದೊಡ್ಡವರೆಂಬ ಭೇದಗಳನ್ನು ಬಿಟ್ಟು ಸಾಗಬೇಕು ಎಂದವರು ಹೇಳಿದರು.

ಬಾಬಾ ಸಾಹೇಬ್ ಅಂಬೇಡ್ಕರ್ ಅವರ (2ನೇ ಪುಟಕ್ಕೆ)

#### ಘೋಷಣೆಗಳಲ್ಲಿ ಐಕ್ಯತೆ

ಜೈ ರಾಮ್, ಜೈ ಭೀಮ್, ಹರ್ ಹರ್ ಮಹಾದೇವ್ ಹಾಗೂ ಅಲ್ಲಾಹು ಅಕ್ಬರ್ ಎಂಬ ಘೋಷಣೆಗಳನ್ನು ಒಂದೇ ಸಾಲಿನಲ್ಲಿ ಹೇಳಿದ ರಾಷ್ಟ್ರೀಯ ರೈತ ಮುಖಂಡ ರಾಕೇಶ್ ಟಿಕಾಯತ್, ನಮ್ಮ ಭಾಷೆ ಬೇರೆಯಾದರೂ ಭಾವ ಒಂದೇ ಆಗಿರಬೇಕು (2ನೇ ಪುಟಕ್ಕೆ)

#### 'ಶಾದಿ'ಗೆ ಕಾನೂನು ಮಾಡುವವರು ಎಂ.ಎಸ್.ಪಿ.ಗೆ ಏಕೆ ಕಾನೂನು ಮಾಡುತ್ತಿಲ್ಲ?

ಉತ್ತರ ಪ್ರದೇಶದಲ್ಲಿ ಯೋಗಿ ಆದಿತ್ಯನಾಥ್ ನೇಉತ್ತರ ಪ್ರದೇಶದಲ್ಲಿ ಯೋಗಿ ಆದಿತ್ಯನಾಥ್ ನೇತೃತ್ವದ ಬಿಜೆಪಿ ಸರ್ಕಾರ ಮದುವೆಗೆ (ಲವ್ ಜಿಹಾದ್) ಹಾಗೂ ಆಹಾರಕ್ಕೂ ಕಾನೂನು ಮಾಡುತ್ತಿದೆ. ಆದರೆ, ಕೃಷಿ ಉತ್ಪನ್ನಗಳ ಕನಿಷ್ಠ ಬೆಂಬಲ ಬೆಲೆ (ಎಂ.ಎಸ್.ಪಿ.)ಗೆ (2ನೇ ಪುಟಕ್ಕೆ)

## ರಾಜ್ಯದಲ್ಲಿ ಕೊರೊನಾ ಎರಡನೇ ಅಲೆ ಶುರು

### ಸೋಂಕು ನಿಯಂತ್ರಣಕ್ಕೆ ಸಹಕರಿಸಲು ಕರೆ

ಬೆಂಗಳೂರು, ಮಾ. 21 – ರಾಜ್ಯದಲ್ಲಿ ಕೊರೊನಾದ ಎರಡನೇ ಅಲೆ ಆರಂಭವಾಗಿದೆ ಎಂದಿರುವ ಆರೋಗ್ಯ ಸಚಿವ ಡಾ. ಕೆ. ಸುಧಾಕರ್, ಸೋಂಕು ನಿಯಂತ್ರಣಕ್ಕಾಗಿ ಜನರ ಸಹಕಾರ ಬೇಕಿದೆ ಎಂದಿದ್ದಾರೆ.

ನಾವು ಕೊರೊನಾ ಎರಡನೇ ಅಲೆಯ ಆರಂಭದಲ್ಲಿದ್ದೇವೆ. ಮುಂದಿನ ಮೂರು ತಿಂಗಳು ಮಹತ್ವದ್ದಾಗಿದ್ದು, ನಾವು ನಿಯಂತ್ರಣಕ್ಕಾಗಿ ಕೈ ಜೋಡಿಸಬೇಕಿದೆ ಎಂದು ಪತ್ರಕರ್ತರೊಂದಿಗೆ ಮಾತನಾಡುತ್ತಿದ್ದ ಅವರು ಹೇಳಿದ್ದಾರೆ.

ಕೊರೊನಾ ಪರಿಸ್ಥಿತಿಯ ಬಗ್ಗೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಜೊತೆ ಚರ್ಚಿಸಿ ಕ್ರಮ ತೆಗೆದುಕೊಳ್ಳ



ಲಾಗುವುದು ಎಂದವರು ಹೇಳಿದ್ದಾರೆ.

ಕೆಲ ಚಟುವಟಿಕೆಗಳನ್ನು ನಿಯಂತ್ರಿಸದೇ ಇದ್ದರೆ ಜನರು ಸಮಸ್ಯೆಗೆ ಸಿಲುಕುತ್ತಾರೆ ಎಂದು ರಾಜ್ಯ ತಾಂತ್ರಿಕ ಸಲಹಾ ಸಮಿತಿ ತಿಳಿಸಿದೆ. ಪರಿಣಿತರ ಪರದಿಯಂತೆ ಕ್ರಮ ತೆಗೆದುಕೊಳ್ಳದೇ ಹೋದರೆ ಸರ್ಕಾರ ಹಾಗೂ ಜನರು ಹೊಣೆಗಾರರಾಗುತ್ತಾರೆ ಎಂದು ಸುಧಾಕರ್ ತಿಳಿಸಿದ್ದಾರೆ.

ಚುನಾವಣಾ ಸಂಬಂಧಿ ಚಟುವಟಿಕೆಗಳನ್ನು ನಿಯಂತ್ರಿಸಲಾಗುವುದೇ ? ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿರುವ ಅವರು, ಕೊರೊನಾ ವೈರಸ್‌ಗೆ ಯಾವುದೇ ಚಟುವಟಿಕೆ ನೆಪ ಹೇಳಬಹುದೇ? ಸೋಂಕು ಗಣ್ಯರು, ರಾಜಕೀಯ ಪಕ್ಷಗಳ ಇಲ್ಲವೇ ಧಾರ್ಮಿಕ ಸಮಾವೇಶಗಳನ್ನು ಬಿಡುತ್ತದೆಯೇ? ಎಂದು ಕೇಳಿದ್ದಾರೆ.

ಉಪ ಚುನಾವಣೆಗಳು ಸನಿಹದಲ್ಲಿರುವುದರಿಂದ ಕೊರೊನಾ ಪರಿಸ್ಥಿತಿ ಬಗ್ಗೆ ಸರ್ವ ಪಕ್ಷಗಳ ನಿಲುವು ಕೇಳಲಾಗುವುದು. ಎಲ್ಲಾ ಪಕ್ಷಗಳೂ ಈ ಸಭೆಯಲ್ಲಿ ಭಾಗವಹಿಸಲಿವೆ ಎಂದು ಸಚಿವರು ಹೇಳಿದ್ದಾರೆ.

## ಕ್ರೀಡಾಪಟುಗಳಿಗೆ ಪೊಲೀಸ್ ಇಲಾಖೆಯಲ್ಲಿ ಶೇ.2ರ ಮೀಸಲಾತಿಗೆ ಆದೇಶ

ಬೆಂಗಳೂರು, ಮಾ. 21- ಪ್ರತಿಭಾವಂತ ಕ್ರೀಡಾಪಟುಗಳಿಗೆ ಪೊಲೀಸ್ ಇಲಾಖೆಯಲ್ಲಿ ಶೇ.2ರಷ್ಟು ಮೀಸಲಾತಿ ಕಲ್ಪಿಸಲಾಗುವುದು ಎಂದು ರಾಜ್ಯ ಸರ್ಕಾರ ಅಂತಿಮ ಅಧಿಸೂಚನೆ ಹೊರಡಿಸಿದೆ. ಕಳೆದ ವರ್ಷ ಕ್ರೀಡಾಪಟುಗಳಿಗೆ ಮೀಸಲಾತಿ ಕಲ್ಪಿಸಲು ವಿಶೇಷ ನಿಯಮಗಳನ್ನು ರೂಪಿಸಲಾಗಿತ್ತು. ಈ ಬಗ್ಗೆ ಮಾರ್ಚ್ 3ರಂದು ರಾಜ್ಯ ಸರ್ಕಾರ ಅಂತಿಮ ಗೆಜೆಟ್ ಪ್ರಕಟಣೆ ಹೊರಡಿಸಿದೆ.

ಕರ್ನಾಟಕ ರಾಜ್ಯ ಪೊಲೀಸ್ ಸೇವೆಯ (2ನೇ ಪುಟಕ್ಕೆ)

## ಕೊರೊನಾ : ಗುತ್ತಿಗೆ ಆರೋಗ್ಯ ಸಿಬ್ಬಂದಿ ಸೇವಾವಧಿ ವಿಸ್ತರಣೆ

ಬೆಂಗಳೂರು, ಮಾ. 21 - ರಾಜ್ಯದಲ್ಲಿ ದಿನ ಕಳೆದಂತೆ ಕೊರೊನಾ ತೀವ್ರತೆ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ನೇಮಕಗೊಂಡಿರುವ ವೈದ್ಯರು, ಸಿಬ್ಬಂದಿಗಳ ಸೇವಾವಧಿ ವಿಸ್ತರಣೆ ಮಾಡಲು ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ರಾಜ್ಯದಲ್ಲಿ ಕೊರೊನಾ ಎರಡನೇ ಅಲೆ ಆರಂಭವಾಗುವ ಆತಂಕ ಶುರುವಾಗಿರುವ ಹಿನ್ನೆಲೆಯಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ನೇಮಕಗೊಂಡಿರುವ ವೈದ್ಯರು, (2ನೇ ಪುಟಕ್ಕೆ)

## ಕುಸ್ತಿಗೆ ಕೇಂದ್ರದ ಮಾನ್ಯತೆ

ನವದೆಹಲಿ, ಮಾ. 21 – ಭಾರತೀಯ ಶೈಲಿಯ ಕುಸ್ತಿ ಒಕ್ಕೂಟ (ಐ.ಎಸ್.ಡಬ್ಲ್ಯೂ.ಎ.ಐ.)ಕ್ಕೆ ರಾಷ್ಟ್ರೀಯ ಕ್ರೀಡಾ ಒಕ್ಕೂಟವೆಂಬ ಮಾನ್ಯತೆ ನೀಡಲಾಗಿದೆ. ಇದರಿಂದಾಗಿ ಸಂಸ್ಥೆಯು ಸರ್ಕಾರದಿಂದ ಅನುದಾನ ಹಾಗೂ ಬೆಂಬಲ ಪಡೆಯಲು ಸಾಧ್ಯವಾಗಲಿದೆ. ಕೇಂದ್ರ ಕ್ರೀಡಾ ಸಚಿವಾಲಯ ತೆಗೆದುಕೊಂಡಿರುವ ಈ ನಿರ್ಧಾರದ ಬಗ್ಗೆ ಪ್ರಕಟಣೆಯಲ್ಲಿ ತಿಳಿಸಲಾಗಿದ್ದು, ಇತರೆ ಒಕ್ಕೂಟಗಳ ರೀತಿಯಲ್ಲೇ ರೈಲ್ವೆ ವಿನಾಯಿತಿ, ನೇಮಕಾತಿ ಹಾಗೂ ಪ್ರಮುಖ ಅಂತರರಾಷ್ಟ್ರೀಯ ಕುಸ್ತಿ ಪಂದ್ಯಾವಳಿಯಲ್ಲಿ ಪಾಲ್ಗೊಳ್ಳಲು ಅವಕಾಶ ನೀಡಲಾಗುವುದು ಎಂದು ಹೇಳಿದೆ.

## 'ಮಹಾ'ದಲ್ಲಿ ಲೂಟಿಗಾಗಿ ಸರ್ಕಾರ ರಚನೆ

ನವದೆಹಲಿ, ಮಾ. 21 – ಮುಂಬೈ ಪೊಲೀಸ್ ಸಚಿನ್ ವಾಜೆ ಸುತ್ತಲಿನ ವಿವಾದ ಹಾಗೂ ಉನ್ನತ ಪೊಲೀಸ್ ಅಧಿಕಾರಿ ಪರಮ್ ಬೀರ್ ಸಿಂಗ್ ಅವರು ಮಹಾರಾಷ್ಟ್ರದ ಉನ್ನತ ನಾಯಕರ ವಿರುದ್ಧ ಮಾಡಿರುವ ಆರೋಪಗಳ ನ್ಯಾಯೋಚಿತ ಹಾಗೂ ನಿಷ್ಪಕ್ಷಪಾತ ತನಿಖೆ ನಡೆಯಬೇಕು ಎಂದು ಕೇಂದ್ರ ಸಚಿವ ರವಿ ಶಂಕರ್ ಪ್ರಸಾದ್ ಒತ್ತಾಯಿಸಿದ್ದಾರೆ.

ಕೇವಲ ಅಸಿಸ್ಟೆಂಟ್ ಇನ್ಸ್‌ಪೆಕ್ಟರ್ ಆಗಿರುವ ವಾಜೆ ಅವರಿಗೆ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಅಂಥವರು ಸದನದ ಒಳಗೆ ಹಾಗೂ ಹೊರಗೆ ರಕ್ಷಿಸುತ್ತಿರುವುದಕ್ಕೆ ಪ್ರಸಾದ್ ಅಚ್ಚರಿ ವ್ಯಕ್ತಪಡಿಸಿದ್ದಾರೆ.

ಶಿವಸೇನೆ, ಎನ್.ಸಿ.ಪಿ. ಹಾಗೂ ಕಾಂಗ್ರೆಸ್‌ಗಳು ಸೇರಿಕೊಂಡು

#### ನಿಷ್ಪಕ್ಷಪಾತ ತನಿಖೆಗೆ ಕೇಂದ್ರ ಸಚಿವ ಪ್ರಸಾದ್ ಒತ್ತಾಯ

ಮಹಾರಾಷ್ಟ್ರದಲ್ಲಿ ಮಹಾ ವಿಕಾಸ್ ಅಗಾಡಿ ರಚಿಸಿಕೊಂಡಿರುವುದು ಲೂಟಿ ಮಾಡಲಿಕ್ಕೇ ವಿನಹ ಆಡಳಿತ ನಡೆಸಲು ಅಲ್ಲ. ಬಿಜೆಪಿ ಈ ವಿಷಯವನ್ನು ದೃಢವಾಗಿ ಪ್ರಸ್ತಾಪಿಸಲಿದೆ ಹಾಗೂ ಬೀದಿಗಿಳಿಯಲಿದೆ ಎಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿರುವ ಪ್ರಸಾದ್ ತಿಳಿಸಿದ್ದಾರೆ.

ಅಧಿಕಾರಕ್ಕಾಗಿ ಠಾಕ್ರೆ ಬಿಜೆಪಿಗೆ ವಂಚಿಸಿದ್ದಾರೆ ಎಂದಿರುವ ಪ್ರಸಾದ್, ಈಗ ನಡೆದಿರುವ ಘಟನೆಗಳು ಅವರ ದಿವಂಗತ ತಂದೆ ಹಾಗೂ ಪಕ್ಷದ ಸ್ಥಾಪಕ ಬಾಳ್ ಠಾಕ್ರೆ ಅವರ 'ಜೈ ಮಹಾರಾಷ್ಟ್ರ' ಘೋಷಣೆಗೆ ಅನುಗುಣವಾಗಿದೆಯೇ? ಎಂದು ಪ್ರಶ್ನಿಸಿದ್ದಾರೆ.

ಮುಂಬೈನ ಮಾಜಿ ಪೊಲೀಸ್ ಆಯುಕ್ತ ಪರಮ್ ಬೀರ್ ಸಿಂಗ್ ಅವರು ಠಾಕ್ರೆಗೆ ಬರೆದಿರುವ ಸಂಚಲನಾತ್ಮಕ ಪತ್ರದ ಕುರಿತು ಪ್ರಸ್ತಾಪಿಸಿರುವ ಪ್ರಸಾದ್, ಹಣ ವಸೂಲಿ ಅಪರಾಧ. ಅದರಲ್ಲೂ ಗೃಹ ಸಚಿವರ ಪರವಾಗಿ ಪೊಲೀಸರು ಈ ಕೃತ್ಯ ನಡೆಸುವುದು ಇನ್ನೂ ಗಂಭೀರವಾಗಿದೆ. ಈ ಬಗ್ಗೆ ಹೊರಗಿನ ಸಂಸ್ಥೆಯಿಂದ ಪ್ರಾಮಾಣಿಕ ಹಾಗೂ ಪಾರದರ್ಶಕ ತನಿಖೆಯಾಗಬೇಕು ಎಂದು ಪ್ರಸಾದ್ ಆಗ್ರಹಿಸಿದ್ದಾರೆ.

ಮ ಹಾ ರಾ ಷ್ಟ್ರ (2ನೇ ಪುಟಕ್ಕೆ)

## ಅನಗತ್ಯ ಚುನಾವಣೆ ಸೃಷ್ಟಿಸಿದ ಬಿಜೆಪಿಗೆ ಪಾಠ ಕಲಿಸಿ : ಎಸ್ಸೆಸ್



#### 20ನೇ ವಾರ್ಡ್‌ನಲ್ಲಿ ಕಾಂಗ್ರೆಸ್ ಚುನಾವಣಾ ಪ್ರಚಾರಕ್ಕೆ ಚಾಲನೆ

ದಾವಣಗೆರೆ, ಮಾ. 21 - ಮಹಾನಗರ ಪಾಲಿಕೆ 20ನೇ ವಾರ್ಡ್ ಸದಸ್ಯ ಸ್ಥಾನಕ್ಕೆ ನಡೆಯುತ್ತಿರುವ ಚುನಾವಣೆ ಹಿನ್ನೆಲೆಯಲ್ಲಿ ಇಂದು ಕಾಂಗ್ರೆಸ್ ಅಭ್ಯರ್ಥಿ ಮೀನಾಕ್ಷಿ ಜಗದೀಶ್ ಅವರ ಪರವಾಗಿ ಶಾಸಕ ಡಾ॥ ಶಾಮನೂರು ಶಿವಶಂಕರಪ್ಪ ಚುನಾವಣಾ ಪ್ರಚಾರಕ್ಕೆ ಚಾಲನೆ ನೀಡಿದರು.

ಭಾರತ್ ಕಾಲೋನಿಯ 4ನೇ ಕ್ರಾಸ್ ನಲ್ಲಿ ಬಹಿರಂಗ ಸಭೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಪರ ಮತಯಾಚಿಸಿದ ಎಸ್ಸೆಸ್ ಅವರು ಬಿಜೆಪಿ ಪಕ್ಷದವರ ಅಧಿಕಾರ ದಾಹದಿಂದ ಇಂದು ಉಪಚುನಾವಣೆ ಎದುರಾಗಿದ್ದು, ಈ ವಾರ್ಡಿನ ಮತದಾರರು ನೀಡಿದ ತೀರ್ಪನ್ನು ಧಿಕ್ಕರಿಸಿದವರಿಗೆ ತಕ್ಕಪಾಠ ಕಲಿಸಬೇಕೆಂದು ಕರೆ ನೀಡಿದರು.

ಕಾಂಗ್ರೆಸ್ ಮತ್ತು ಬಿಜೆಪಿ ಅಭ್ಯರ್ಥಿಗಳ ಮಧ್ಯೆ ನೇರ ಹಣಾಹಣಿ ಇರುವುದರಿಂದ ಕಳೆದ ಬಾರಿ ಪಕ್ಷದ ಅಭ್ಯರ್ಥಿಗೆ 2ನೇ ದೊಡ್ಡ ಜಯಭೇರಿ ನೀಡಿದ್ದ ಈ ವಾರ್ಡಿನ ಜನತೆ ಈ ಬಾರಿ ಬಿಜೆಪಿ ಅಭ್ಯರ್ಥಿಗೆ ಠೇವಣಿ ಸಿಗದಂತೆ ಕಾಂಗ್ರೆಸ್ ಅಭ್ಯರ್ಥಿಯನ್ನು ಪ್ರಚಂಡ ಬಹುಮತದಿಂದ ಗೆಲ್ಲಿಸಬೇಕೆಂದರು.

ಈ ದೇಶದಲ್ಲಿ ಕಾಂಗ್ರೆಸ್ (2ನೇ ಪುಟಕ್ಕೆ)

## ರಸ್ತೆ ಅಭಿವೃದ್ಧಿ ಕಾಮಗಾರಿಗಳಿಗೆ ಭೂಮಿ ಪೂಜೆ



ದಾವಣಗೆರೆ, ಮಾ.21- ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿನ ಶಾಸಕ ಎಸ್.ಎ. ರವೀಂದ್ರನಾಥ್ ಅವರ ಶಾಸಕರ ಅನುದಾನದಲ್ಲಿ 17 ಕೋಟಿ ರೂ. ವೆಚ್ಚದ ಅಭಿವೃದ್ಧಿ ಕಾಮಗಾರಿಗಳಿಗೆ ಇಂದು ಶಾಸಕ ಎಸ್.ಎ. ರವೀಂದ್ರನಾಥ್ ಹಾಗೂ ಸಂಸದ ಜಿ.ಎಂ. ಸಿದ್ದೇಶ್ವರ ಅವರುಗಳು ಭೂಮಿ ಪೂಜೆ ನೆರವೇರಿಸುವ ಮುಖೇನ ವಿಧ್ಯುಕ್ತವಾಗಿ ಚಾಲನೆ ನೀಡಿದರು.

ತಾಲ್ಲೂಕಿನ ಬೀರೂರು-ಸಮ್ಮಸಗಿ ರಾಜ್ಯ ಹೆದ್ದಾರಿ 76ರ ರಸ್ತೆಯ ಆಯ್ದ ಭಾಗಗಳಲ್ಲಿ 9.88 ಕೋಟಿ ವೆಚ್ಚದಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿಗಳು, ದೊಡ್ಡಬಾತಿ ಗ್ರಾಮದ ಹಳೇ ಪಿ.ಬಿ. ರಸ್ತೆಯಿಂದ ಪಬ್ಲಿಕ್ ಮಂದಾರ ಶಾಲೆ ಮುಖಾಂತರ ಭದ್ರಾ ಶುಗರ್ (3ನೇ ಪುಟಕ್ಕೆ)

## 70 ಸಾವಿರ ಆಯುಷ್ಮಾನ್ ಭಾರತ್ ಆರೋಗ್ಯ ಕೇಂದ್ರಗಳ ಸ್ಥಾಪನೆ

ನವದೆಹಲಿ, ಮಾ. 21 – ಮಾರ್ಚ್ 31ರ ಗುರಿ ಒಳಗೆ 70 ಸಾವಿರ ಆಯುಷ್ಮಾನ್ ಭಾರತ್ - ಆರೋಗ್ಯ ಮತ್ತು ಕ್ಷೇಮ ಕೇಂದ್ರಗಳನ್ನು ಚಾಲನೆಗೊಳಿಸಲಾಗಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ.

ಈ ಕೇಂದ್ರಗಳ ಮೂಲಕ ಇದುವರೆಗೂ 41.35 ಕೋಟಿ ಜನರು ನೆರವು ಪಡೆದಿದ್ದಾರೆ. ಇವರಲ್ಲಿ ಶೇ.54ರಷ್ಟು ಮಹಿಳೆಯರಿದ್ದಾರೆ ಎಂದು ಸಚಿವಾಲಯ ತಿಳಿಸಿದೆ. ಕೊರೊನಾ ನಡುವೆಯೂ ಪ್ರಾಥಮಿಕ ಕೇಂದ್ರಗಳ ಆರೋಗ್ಯ ಸೌಲಭ್ಯವನ್ನು ಹೆಚ್ಚಿಸಲಾಗಿದೆ. ಕೇಂದ್ರ ಹಾಗೂ ರಾಜ್ಯಗಳ ನಡುವಿನ ಉನ್ನತ ಸಮನ್ವಯತೆ, ಯೋಜನೆ ಹಾಗೂ ಎಲ್ಲಾ ಹಂತಗಳಲ್ಲಿ ಸಂವಾದದಿಂದಾಗಿ ಗುರಿ ತಲುಪಲು ಸಾಧ್ಯವಾಗಿದೆ ಎಂದು ತಿಳಿಸಲಾಗಿದೆ.

ಏಪ್ರಿಲ್ 2018ರಲ್ಲಿ ಆಯುಷ್ಮಾನ್ ಭಾರತ್ ಕ್ಷೇಮ ಕೇಂದ್ರಗಳಿಗೆ ಚಾಲನೆ ನೀಡಲಾಗಿತ್ತು. 2022ರ ವೇಳೆಗೆ 1.50 ಲಕ್ಷ ಉಪ ಆರೋಗ್ಯ ಕೇಂದ್ರಗಳು ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸುವ ಗುರಿ ಹೊಂದಲಾಗಿದೆ.

## ಕಾಗದದ ದೋಣಿಗೆ ಬೆಲೆ ಏರಿಕೆಯ ಹೊಡೆತ

### ದೇಶದ ಲಕ್ಷಾಂತರ ಸಣ್ಣ ಪೇಪರ್ ಘಟಕಗಳಿಗೆ ಸಂಕಷ್ಟ

#### ಮುಂದಿನ ದಿನಗಳೂ ಸವಾಲಿನದು...

ಕೇಂದ್ರ ಸರ್ಕಾರ ಒಂದು ಬಾರಿ ಬಳಸುವ ಪ್ಲಾಸ್ಟಿಕ್ ಮೇಲೆ ನಿಷೇಧ ಹೇರುವ ಕರಡನ್ನು ಪ್ರಕಟಿಸಿದೆ. ಅದರ ಅನ್ವಯ ಸಿಗರೇಟ್ ಪ್ಯಾಕೆಟ್, ಚಾಕೊಲೇಟ್ ಕವರ್, ಐಸ್‌ಕ್ರೀಮ್ ಕಡ್ಡಿ ಹಾಗೂ ಸಿಹಿ ತಿನಿಸುಗಳಿಗೆ ಬಳಸುವ ಕವರ್‌ಗಳೂ ಸೇರಿದಂತೆ ಹತ್ತು ಹಲವು ವಸ್ತುಗಳಿಗೆ ಪ್ಲಾಸ್ಟಿಕ್ ಬಳಸುವಂತಿಲ್ಲ.

ಕಳೆದ ವಾರ ಈ ಕರಡು ಪ್ರಕಟವಾಗುತ್ತಿದ್ದಂತೆ ಪೇಪರ್ ಮಿಲ್‌ಗಳ ಷೇರುಗಳು ಗಣನೀಯವಾಗಿ ಏರುಮುಖವಾಗಿವೆ. ಸರ್ಕಾರ ಜನವರಿ 1, 2022ರಿಂದ ನೂತನ ನೀತಿಯನ್ನು ಜಾರಿಗೆ ತರಲು ಉದ್ದೇಶಿಸಲಾಗಿದೆ.

ಇದು ಪೇಪರ್ ಮಿಲ್‌ಗಳ ಷೇರುಗಳಲ್ಲಿ ಉತ್ಸಾಹ ತಂದಿದೆ. ಸರ್ಕಾರದ ನೀತಿ ಜಾರಿಯಾದರೆ, ಕಾಗದದ ಬೇಡಿಕೆ (3ನೇ ಪುಟಕ್ಕೆ)



ಎಸ್.ಎ. ಶ್ರೀನಿವಾಸ್

ನವದೆಹಲಿ, ಮಾ.20 - ಕಚ್ಚಾ ವಸ್ತುಗಳ ಬೆಲೆ ಏರಿಕೆ ಯಿಂದಾಗಿ ಮುದ್ರಣ ವಲಯ ಈಗ ಸಂಕಷ್ಟಕ್ಕೆ ಸಿಲುಕಿದೆ. ಮುದ್ರಣಕ್ಕೆ ಬಳಸಲಾಗುವ ಮಸಿ, ಪ್ಲೇಟ್ ಹಾಗೂ ಎಲ್ಲಕ್ಕಿಂತ ಮುಖ್ಯವಾಗಿ ಕಾಗದದ ಬೆಲೆ ಏರಿಕೆ ಮುದ್ರಕರಿಗೆ ಸಮಸ್ಯೆ ತರುತ್ತಿದೆ.

ಮೊದಲು ಲಾಕ್‌ಡೌನ್ ಕಾರಣ ದಿಂದಾಗಿ ಮುದ್ರಣ ವಲಯ ತತ್ತರಿಸಿತ್ತು. ಈಗ ಲಾಕ್‌ಡೌನ್ ಮುಗಿಯುತ್ತಿರು ವಂತೆಯೇ ಬೆಲೆ ಏರಿಕೆ ಬಿಸಿ ತಟ್ಟುತ್ತಿದೆ. ಲಾಕ್‌ಡೌನ್ ಕಾಲದಲ್ಲಿ ಕಾಗದದ ದೋಣಿ ಯಂತಾಗಿದ್ದ ಉದ್ಯಮ, ಈಗ ಆ ಕಾಗದದ ದೋಣಿಗೂ ಬೆಲೆ ಏರಿಕೆ ರಂಧ್ರ ಮಾಡಿದೆ. ಕೊರೊನಾ ನಂತರ ಕೆಲವು ತಿಂಗಳ ಕಾಲ ಇದ್ದ ಆಶಾವಾದ ಈಗ ತೂಗುಯ್ಯಾಲೆಗೆ ಸಿಲುಕಿದೆ.

ಲಾಕ್‌ಡೌನ್ ಅವಧಿಯಲ್ಲಿ ಕಾಗದದ ಬೆಲೆ ಕುಸಿದಿತ್ತು. ಆದರೆ, ಆಗ ಬೇಡಿಕೆಯೇ ಇರಲಿಲ್ಲ. ಹೀಗಾಗಿ ಲಾಕ್‌ಡೌನ್ ಅವಧಿ ಯಲ್ಲಿ ಮುದ್ರಣ ಹಾಗೂ ಪ್ಯಾಕೇಜಿಂಗ್ ವಲಯ ಸಂಕಷ್ಟ ಅನುಭವಿಸುವುದು ತಪ್ಪ ಲಿಲ್ಲ. ಈಗ ಲಾಕ್‌ಡೌನ್ ಮುಗಿಯುತ್ತಿರು ವಂತೆಯೇ ಬೆಲೆ ಏರಿಕೆ ಕಾಡುತ್ತಿದೆ.

ಕಚ್ಚಾ ವಸ್ತುಗಳ ಬೆಲೆ ತೀವ್ರವಾಗಿ ಏರಿಸಿರುವುದನ್ನು ಆಲ್ ಇಂಡಿಯಾ ಫೆಡರೇಷನ್ ಆಫ್ ಮಾಸ್ಟರ್ ಪ್ರಿಂಟರ್ಸ್ (ಎ.ಐ.ಎಫ್.ಎಂ.ಪಿ.) ಖಂಡಿಸಿದೆ. ಒಂದೆಡೆ ಬೆಲೆ ಹೆಚ್ಚಳವನ್ನು ಗ್ರಾಹಕರಿಗೆ ವರ್ಗಾಯಿಸಬೇಕು ಎಂಬ ಮಾತುಗಳು ಕೇಳಿಬರುತ್ತಿದ್ದರೂ ಸಹ, ಗ್ರಾಹಕರು ಹೆಚ್ಚಿನ ಬೆಲೆ ತೆರಲು ಬಯಸುತ್ತಿಲ್ಲ ಎಂದು ಮುದ್ರಣ ವಲಯದ ಬಹುತೇಕರು ಹೇಳುತ್ತಿದ್ದಾರೆ.

ಕೇವಲ ಮುದ್ರಣವಷ್ಟೇ ಅಲ್ಲದೇ, ಪ್ಯಾಕೇಜಿಂಗ್ ವಲಯ ಸಹ ಕಾಗದವನ್ನು ಅವಲಂಬಿಸಿದೆ. ಸರ್ಕಾರ ಹಾಗೂ ಶಿಕ್ಷಣ ಸಂಸ್ಥೆಗಳು ಮುಖ್ಯವಾಗಿ ಕಾಗದವನ್ನು ಬಳಸುತ್ತಿವೆ. ಕೊರೊನಾ ನಂತರದಲ್ಲಿ ಈ (3ನೇ ಪುಟಕ್ಕೆ)

## ಜಗಳೂರು : ಸಂಸದ - ಶಾಸಕರಿಂದ ವಿವಿಧ ಕಾಮಗಾರಿಗಳಿಗೆ ಶಂಕುಸ್ಥಾಪನೆ



ಜಗಳೂರು, ಮಾ.21- ಸಂಸದ ಜಿ.ಎಂ. ಸಿದ್ದೇಶ್ವರ್ ಮತ್ತು ಶಾಸಕ ಎಸ್.ವಿ. ರಾಮಚಂದ್ರ ಅವರ ನೇತೃತ್ವದಲ್ಲಿ ರೂ. 50 ಕೋಟಿ ವೆಚ್ಚದ ವಿವಿಧ ಕಾಮಗಾರಿಗಳ ಶಂಕುಸ್ಥಾಪನೆ ನೆರವೇರಿಸಲಾಯಿತು.


ತಾಲ್ಲೂಕಿನ ಕಾಮಗೇತನಹಳ್ಳಿ, ಚಿಕ್ಕಬಂಟನಹಳ್ಳಿ ಗ್ರಾಮದ ಹೊರವಲಯದಲ್ಲಿ ಸಮಾಜ ಕಲ್ಯಾಣ ಇಲಾಖೆ ಹಾಗೂ ಪ.ವರ್ಗಗಳ ಕಲ್ಯಾಣ ಇಲಾಖೆ, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ ಬೆಂಗಳೂರು, ಜಿಲ್ಲಾ ಪಂಚಾಯತ್ ದಾವಣಗೆರೆ, ತಾಲ್ಲೂಕು ಪಂಚಾಯಿತಿ ಇವರುಗಳ ಸಂಯುಕ್ತಾಶ್ರಯದಲ್ಲಿ ಕಿತ್ತೂರು ರಾಣಿ ಚೆನ್ನಮ್ಮ ಹಾಗೂ ಅಂಬೇಡ್ಕರ್ ವಸತಿ ಶಾಲೆಗಳ ಶಂಕುಸ್ಥಾಪನೆ ಕಾರ್ಯಕ್ರಮಗಳನ್ನು ನೆರವೇರಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಸಂಸದ ಜಿ.ಎಂ. ಸಿದ್ದೇಶ್ವರ್, ವಿರೋಧ ಪಕ್ಷದವರು ಅಭಿವೃದ್ದಿ ಕೆಲಸಗಳಿಗೆ ಸಹಕಾರ ನೀಡಬೇಕು, ಕೆಲಸ ಮಾಡದಿದ್ದರೆ ಟೀಕಿಸಬೇಕು. ವಿನಾಕಾರಣ ಆರೋಪಗಳು ಸರಿಯಲ್ಲ. ವಿರೋಧ ಪಕ್ಷದವರು ಆಪಾದನೆ ಮಾಡುವುದು ಸುಲಭ, ಸಹಿಸಿಕೊಳ್ಳುವುದು ಕಷ್ಟಕರ ಎಂದು ತಿರುಗೇಟು ನೀಡಿದರು.

ಭದ್ರಾ ಮೇಲ್ದಂಡೆ ಯೋಜನೆಗೆ ಲ್ಯಾಂಡ್ ಅಕ್ವಿಜೇಷನ್ ಮಾಡಿಕೊಡಿ ಎಂದು ಮಾಜಿ ಶಾಸಕರಿಗೆ ತಿಳಿಸಿದ್ದರೂ ಕಿವಿಗೊಡಲಿಲ್ಲ. ಇದೀಗ ಪತ್ರಿಕಾ ಹೇಳಿಕೆ ನೀಡುತ್ತಿರುವುದು ಎಷ್ಟು ಸರಿ. ಕೆಲ ವೇಳೆ ಕಾಮಗಾರಿಗಳು ವಿಳಂಬವಾಗಬಹುದು. ಆದರೆ ಅಭಿವೃದ್ದಿ ಕೆಲಸಗಳು ಮಾತ್ರ ಜರುಗುತ್ತವೆ. ಏಕ ಕಾಲ ದಲ್ಲಿ ಎಲ್ಲಾ ಕಾರ್ಯಗಳನ್ನು ಪೂರೈಸಲು ಸಾಧ್ಯವಿಲ್ಲ, ಹಂತ ಹಂತವಾಗಿ ಕೈಗೊಳ್ಳಲಾಗುವುದು ಎಂದರು.

ಕ ಟ್ಟ ಡ ದ (2ನೇ ಪುಟಕ್ಕೆ)

# ರೈತ ಸಮಾವೇಶಕ್ಕೆ ಆಗಮಿಸಿದ ರೈತ ನಾಯಕರಿಗೆ ಗದೆ ನೀಡಿ ಸ್ವಾಗತ




ರಾಣೇಬೆನ್ನೂರು, ಮಾ.21 - ಹಾವೇರಿಯಲ್ಲಿ ನಡೆಯುತ್ತಿರುವ ರೈತರ ಮಹಾ ಪಂಚಾಯತ್ ಸಮಾವೇಶಕ್ಕೆ ಆಗಮಿಸಿದ ರಾಷ್ಟ್ರ ರೈತ ನಾಯಕ, ದೆಹಲಿಯಲ್ಲಿ ನಡೆಯುತ್ತಿರುವ ರೈತರ ಸಂಯುಕ್ತ ಐಕ್ಯ ಹೋರಾಟ ಸಮಿತಿಯ ಅಧ್ಯಕ್ಷ ರಾಕೇಶ್ ಟಿಕಾಯತ್ ರವರಿಗೆ ಉತ್ತರ ಕರ್ನಾಟಕದ ಹೆಬ್ಬಾಗಿಲು ಚಳಗೇರಿ ಟೋಲ್ ಪ್ಲಾಜಾದ ಹತ್ತಿರ ಸ್ವಾಗತ ಮಾಡಿಕೊಂಡ ಕರ್ನಾಟಕ ರಾಜ್ಯ ರೈತ ಸಂಘದ ಮುಖಂಡರುಗಳು ರಾಕೇಶ ಟಿಕಾಯತ್ ಮತ್ತು ಅವರ ಜೊತೆ ಹೋರಾಟಗಾರರಿಗೆ ಶಕ್ತಿ ತುಂಬಲು ಕರ್ನಾಟಕದ ರೈತರು ನಿಮ್ಮ ಜೊತೆಗಿದ್ದೇವೆ. ನಿಮ್ಮ ಹೋರಾಟ ಮುಂದುವರೆಸಿರಿ. ರೈತ ವಿರೋಧಿ, ಕಾರ್ಮಿಕ ವಿರೋಧಿ, ಕೃಷಿ ತಿದ್ದುಪಡಿ ಮಸೂದೆಗಳನ್ನು ಕೇಂದ್ರ ಸರ್ಕಾರ, ವಾಪಸ್ ಪಡೆಯುವ ತನಕ ವಿರಮಿಸದೇ ಹೋರಾಟ ಮಾಡಿರಿ. ಇಡೀ ಕರ್ನಾಟಕದ ರೈತರು ನಿಮ್ಮ ಜೊತೆಗೆ ಇದ್ದೇವೆ. ಇಡೀ ಕರ್ನಾಟಕದ ರೈತರ ಶಕ್ತಿಯ ಧ್ಯೋತಕವಾಗಿ ಗದೆ ನೀಡಿ ಸ್ವಾಗತಿಸಿ ಸತ್ಕರಿಸಿದ್ದೇವೆ ಎಂದು ರೈತ ಮುಖಂಡ ರವೀಂದ್ರಗೌಡ ಎಫ್. ಪಾಟೀಲ ಉತ್ಸಾಹಭರಿತರಾಗಿ ನುಡಿದರು. ಟಿಕಾಯತ್ ರವರ ಜೊತೆಗಿದ್ದ ಹೋರಾಟಗಾರರಾದ ಯಧುವೀರಸಿಂಗ್, ದರ್ಶನಪಾಲ್, ಕೋಡಿಹಳ್ಳಿ ಚಂದ್ರಶೇಖರ್, ಚುಕ್ಕಿ ನಂಜುಂಡಸ್ವಾಮಿ ಇವರಿಗೆ ಹಸಿರು ಶಾಲು ಹೊದಿಸಿ ಸಮಾವೇಶಕ್ಕೆ ಸ್ವಾಗತಿಸಿದರು.

ಈ ಸಂದರ್ಭದಲ್ಲಿ ರೈತ ಮುಖಂಡ ಈರಣ್ಣ ಹಲಗೇರಿ ಮಾತನಾಡಿ ರೈತ ವಿರೋಧಿ ಕೇಂದ್ರ ಸರ್ಕಾರವನ್ನು ಕಿತ್ತೊಗೆಯುವ ತನಕ ತಮ್ಮ ಹೋರಾಟವನ್ನು ನಿಲ್ಲಿಸಬಾರದು. ರೈತರ ಕೃಷಿ ಸಾಲವನ್ನು ಸಂಪೂರ್ಣ ಮನ್ನಾ ಮಾಡಿ ಡಾ. ಸ್ವಾಮಿನಾಥನ್ ವರದಿ ಜಾರಿಯಾಗುವ ತನಕ ಮುಂದುವರೆಸಬೇಕೆಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಸುರೇಶಪ್ಪ ಗರಡಿಮನಿ, ಸುರೇಶ ಮಲ್ಲಾಪುರ, ದಿಳ್ಳೆಪ್ಪ ಸತ್ತೆಪ್ಪನವರ, ಹನುಮಂತಪ್ಪ ಮುದಿಗೌಡ್ರ, ಹರಿಹರಗೌಡ ಪಾಟೀಲ, ಭೀಮಪ್ಪ ಹುಲಗಿನಹೊಳೆ, ಹನುಮಂತಪ್ಪ ಕುಂಬಳೂರು, ರಾಜು ಬಾತಿ, ಕುಮಾರ ಬಣಕಾರ, ನಿಂಗಪ್ಪ ಸತ್ತೆಪ್ಪನವರ, ಉಮೇಶ ಊದಗಟ್ಟಿ, ಯಲ್ಲಾರೆಡ್ಡಿ ಯರೇಕುಪ್ಪಿ, ನಾಗರಾಜ ಯಲ್ಲಕ್ಕನವರ ಮತ್ತಿತರರು ಉಪಸ್ಥಿತರಿದ್ದರು.

# ಗೋದಾಮಿಗೆ ಧಾನ್ಯ ತುಂಬಿ ಲಾಭಕೋರತನ

**(1ನೇ ಪುಟದಿಂದ)** ವಿಚಾರಧಾರೆ ಹಾಗೂ ರೈತ ನಾಯಕ ಪ್ರೊ. ನಂಜುಂಡಸ್ವಾಮಿ ಅವರ ವಿಚಾರಧಾರೆಗಳು ನಮ್ಮ ಜೊತೆ ಇವೆ. ಎಲ್ಲರನ್ನೂ ಜೊತೆಗೂಡಿಸಿಕೊಂಡು ಒಂದೇ ದನಿಯಿಂದ ಮುಂದೆ ಸಾಗಬೇಕಿದೆ ಎಂದು ಟಿಕಾಯತ್ ಹೇಳಿದರು.

ಕೇಂದ್ರ ಸರ್ಕಾರ ಯುವಕರಿಗೆ ಉದ್ಯೋಗ ಒದಗಿಸಿಲ್ಲ, ರೈತರು ಹಾಗೂ ಕಾರ್ಮಿಕರನ್ನು ಸಂಕಷ್ಟಕ್ಕೆ ಸಿಲುಕಿಸಿದೆ. ಇಂತಹ ಸಂದರ್ಭದಲ್ಲಿ ಹಳ್ಳಿಗಳನ್ನು, ದೇಶವನ್ನು ಹಾಗೂ ಸಂವಿಧಾನವನ್ನು ಉಳಿಸಲು ಈ ಆಂದೋಲನ ನಡೆಸಲಾಗುತ್ತಿದೆ ಎಂದವರು ತಿಳಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ರೈತ ಮುಖಂಡರಾದ ಚುಕ್ಕಿ ನಂಜುಂಡಸ್ವಾಮಿ, ಕೇಂದ್ರದ ಮೂರು ಹಾಗೂ ರಾಜ್ಯದ ಎರಡು ಕರಾಳ ಕಾಯ್ದೆಗಳ ವಿರುದ್ಧ ತೀವ್ರ ಪ್ರತಿರೋಧ ವ್ಯಕ್ತವಾಗುತ್ತಿದೆ. ರೈತ – ಕಾರ್ಮಿಕರು ಹಾಗೂ ಲೂಟಿಕೋರ ವರ್ಗದ ನಡುವಿನ ಸಂಘರ್ಷ ಇದಾಗಿದೆ ಎಂದರು.

ಶೋಷಣೆ ಮಾಡುತ್ತಿರುವವರನ್ನು ಬಂಡವಾಳಶಾಹಿ ಎನ್ನುವ ಬದಲು ಲೂಟಿಕೋರರು ಎಂದು ಕರೆಯಬೇಕು. ಅವರ ಕೈಗೆ ಕೃಷಿ ಕೊಡಬಾರದು. ಹೋರಾಟ ಮಾಡದಿದ್ದರೆ ದೇಶ ಉಳಿಸುವುದು ಕಷ್ಟ ಎಂದು ಎಚ್ಚರಿಸಿದರು.

ಕಾರ್ಮಿಕ ಮುಖಂಡರಾದ ಹೆಚ್.ಕೆ. ರಾಮಚಂದ್ರಪ್ಪ ಮಾತನಾಡಿ, ರೈತರನ್ನು ತುಳಿಯುತ್ತಿರುವ ಸರ್ಕಾರದ ವಿರುದ್ಧ ದನಿ ಎತ್ತಲಾಗಿದೆ. 2024ರವರೆಗೆ ರೈತರ ಹೋರಾಟ ನಡೆಯುತ್ತದೆ. ಜನ ಜಾಗೃತಿಯಾದರೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ಕಥೆ ಮುಗಿಯುತ್ತದೆ ಎಂದರು. ಮುಂದಿನ ದಿನಗಳಲ್ಲಿ ದಾವಣಗೆರೆಯಲ್ಲೂ ರೈತರ ಮಹಾಪಂಚಾಯತ್ ಮಾಡಬೇಕಿದೆ. ಮನುವಾದಿ ಸರ್ಕಾರವನ್ನು ಕಿತ್ತು ಹಾಕಿ ಜನಪರ ಸರ್ಕಾರ ತರಲು ಹೋರಾಟ ನಡೆಯಬೇಕಿದೆ ಎಂದರು.

ಇದಕ್ಕೂ ಮುಂಚೆ ಅಂಬೇಡ್ಕರ್ ವೃತ್ತಕ್ಕೆ ತೆರಳಿದ್ದ ಟಿಕಾಯತ್, ಅಲ್ಲಿ ಸಂವಿಧಾನ ಶಿಲ್ಪಿಯ ಪ್ರತಿಮೆಗೆ ಮಾಲಾರ್ಪಣೆ ಮಾಡಿದರು.

ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯ್ತಿ ಸದಸ್ಯ ತೇಜಸ್ವಿ ಪಟೇಲ್, ವಿವಿಧ ಸಂಘಟನೆಗಳ ಮುಖಂಡರಾದ ಅನೀಸ್ ಪಾಷ, ಎಲ್.ಹೆಚ್. ಅರುಣ್ ಕುಮಾರ್, ಅರುಣ್ ಕುಮಾರ್ ಕುರುಡಿ, ಸತೀಶ್ ಕುಮಾರ್, ಡಾ. ವಸುಧೇಂದ್ರ, ಜಬೀನಾ ಖಾನಂ, ಆವರಗೆರೆ ವಾಸು, ಆವರಗೆರೆ ಚಂದ್ರು, ಹೊನ್ನೂರು ಮುನಿಯಪ್ಪ, ಸತೀಶ್ ಅರವಿಂದ, ಆದಿಲ್ ಕಾನ್, ಅಣಬೇರು ತಿಪ್ಪೇಸ್ವಾಮಿ, ರಾಮಚಂದ್ರ ಕಲಾಲ್, ಆವರಗೆರೆ ರುದ್ರಮುನಿ ಮತ್ತಿತರರು ಉಪಸ್ಥಿತರಿದ್ದರು.

## ಘೋಷಣೆಗಳಲ್ಲಿ ಐಕ್ಯತೆ

**(1ನೇ ಪುಟದಿಂದ)** ಎಂದು ಕರೆ ನೀಡಿದರು.

ಎಲ್ಲರ ಜೊತೆಗೂಡಿ ನಾವು ಮುಂದೆ ಸಾಗುತ್ತೇವೆ. ಯಾವುದೇ ಭೇದ ಭಾವ ಇಲ್ಲದೇ ಈ ಎಲ್ಲ ಘೋಷಣೆಗಳನ್ನು ನಾವು ಮೊಳಗಿಸಬೇಕು ಎಂದವರು ತಿಳಿಸಿದರು.

## ಏಕೆ ಕಾನೂನು ಮಾಡುತ್ತಿಲ್ಲ?

**(1ನೇ ಪುಟದಿಂದ)** ಕಾನೂನು ಮಾಡುತ್ತಿಲ್ಲ ಎಂದು ಜಿಲ್ಲಾ ಪಂಚಾಯ್ತಿ ಸದಸ್ಯ ತೇಜಸ್ವಿ ಪಟೇಲ್ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಮದುವೆ, ಆಹಾರ ಇತ್ಯಾದಿಗಳನ್ನು ಜನರ ಮನಸ್ಸಿಗೆ ಬಿಡಿ. ರೈತರು ಕೇಳುತ್ತಿರುವಂತೆ ಕನಿಷ್ಠ ಬೆಂಬಲ ಬೆಲೆಗಾಗಿ ಕಾನೂನು ರೂಪಿಸಿ ಎಂದ ಅವರು, ಪ್ರಧಾನಿ ನರೇಂದ್ರ ಮೋದಿ ಅವರು ಪ್ರತಿದಿನ ತಮ್ಮ ಮನಸ್ಸಿನ ಜೊತೆ ಮಾತನಾಡುತ್ತಿದ್ದಾರೆ. ಆದರೆ, ರೈತರ ಮಾತು ಮಾತ್ರ ಕೇಳುತ್ತಿಲ್ಲ ಎಂದು ಆಕ್ಷೇಪಿಸಿದರು.

ರೈತರ ಆದಾಯ ದುಪ್ಪಟ್ಟು ಮಾಡುವುದಾಗಿ ಹೇಳಿದ್ದ ಬಿಜೆಪಿ ಸರ್ಕಾರ, ಅವರ ಸಾಲವನ್ನು ದುಪ್ಪಟ್ಟು ಮಾಡಿದೆ. ಕೈಗಾರಿಕೋದ್ಯಮಿಗಳ ಆದಾಯವಷ್ಟೇ ದ್ವಿಗುಣವಾಗಿದೆ ಎಂದು ಟೀಕಿಸಿದರು.

# ದಾವಣಗೆರೆ ವಿವಿಯಲ್ಲಿಂದು ಉಪನ್ಯಾಸ

ದಾವಣಗೆರೆ ವಿಶ್ವವಿದ್ಯಾನಿಲಯವು 'ಸಾಧನೆ-ಪ್ರೇರಣೆ - ಸಾಧಕರೊಂದಿಗೆ ಮಾತುಕತೆ' ಎಂಬ ವಿಶೇಷ ಕಾರ್ಯಕ್ರಮವನ್ನು ಇಂದು ಬೆಳಿಗ್ಗೆ 10.30ಕ್ಕೆ ಏರ್ಪಡಿಸಿದ್ದು, ವಿಆರ್‌ಎಲ್ ಸಮೂಹ ಸಂಸ್ಥೆಗಳ ಚೇರ್‌ಮನ್ ಡಾ. ವಿಜಯ ಸಂಕೇಶ್ವರ ಭಾಗವಹಿಸಲಿದ್ದಾರೆ. ವಿಶ್ವವಿದ್ಯಾನಿಲಯದ ಎಂಬಿಎ ಸಭಾಂಗಣದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಡಾ. ಸಂಕೇಶ್ವರ ಅವರು ಉಪನ್ಯಾಸ ನೀಡಿ, ಪ್ರಾಧ್ಯಾಪಕರು ಹಾಗೂ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸುವರು. ಕುಲಪತಿ ಪ್ರೊ. ಶರಣಪ್ಪ ವಿ. ಹಲಸೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವರು. ಕುಲಸಚಿವರಾದ ಪ್ರೊ. ಗಾಯತ್ರಿ ದೇವರಾಜ್, ಪ್ರೊ ಎಚ್.ಎಸ್. ಅನಿತಾ, ಹಣಕಾಸು ಅಧಿಕಾರಿ ಡಿ.ಪ್ರಿಯಾಂಕ, ಸಿಂಡಿಕೇಟ್ ಸದಸ್ಯರು, ಅಕಾಡೆಮಿಕ್ ಕೌನ್ಸಿಲ್ ಸದಸ್ಯರು ಭಾಗವಹಿಸಲಿದ್ದಾರೆ.

# ಜಗಳೂರು : ಕಾಮಗಾರಿಗಳಿಗೆ ಶಂಕುಸ್ಥಾಪನೆ

**(1ನೇ ಪುಟದಿಂದ)** ಕಾಮಗಾರಿ ಗುಣಮಟ್ಟದ್ದಾಗಲಿ, ಒಂದು ವರ್ಷದೊಳಗೆ ಕಟ್ಟಡ ಪೂರ್ಣಗೊಳ್ಳಲಿ. ಗುತ್ತಿಗೆದಾರರು ನಿರ್ಲಕ್ಷ್ಯ ವಹಿಸಿದರೆ ಸೂಕ್ತ ಕ್ರಮಕೈಗೊಳ್ಳಲಾಗುವುದು ಎಂದು ಎಚ್ಚರಿಸಿದರು.

ಗಡಿ ಗ್ರಾಮದಲ್ಲಿ ವಸತಿಶಾಲೆ ನಿರ್ಮಾಣವಾಗುತ್ತಿರುವುದರಿಂದ ಮಕ್ಕಳ ಉಜ್ವಲ ಭವಿಷ್ಯಕ್ಕೆ ತಳಹದಿಯಾಗಲಿದೆ. ಸ್ಥಳೀಯ ಪೋಷಕರು ಸದ್ಬಳಕೆ ಮಾಡಿಕೊಂಡು ಮಕ್ಕಳು ಉನ್ನತ ಹುದ್ದೆಗಳನ್ನು ಅಲಂಕರಿಸಲು ಕೈಜೋಡಿಸಬೇಕು ಎಂದು ಸಲಹೆ ನೀಡಿದರು.

ಶಾಸಕ ಎಸ್.ವಿ. ರಾಮಚಂದ್ರ ಮಾತನಾಡಿ, ಉಪ ಮುಖ್ಯಮಂತ್ರಿ ಗೋವಿಂದ ಕಾರಜೋಳ ಅವರ ಸಹಕಾರದಿಂದ ತಾಲ್ಲೂಕಿಗೆ 2 ವಸತಿ ಶಾಲೆಗಳನ್ನು ಮಂಜೂರಾತಿ ಮಾಡಿಸಿಕೊಟ್ಟ ಫಲವಾಗಿ ಶಂಕುಸ್ಥಾಪನೆ ಹಂತ ತಲುಪಿದ್ದು, ಹಿಂದುಳಿದ ತಾಲ್ಲೂಕಿನ ಶೈಕ್ಷಣಿಕ ಅಭಿವೃದ್ಧಿಗೆ ಪೂರಕವಾಗಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ತಾಲ್ಲೂಕಿನ ಮಾಗಡಿ ಗ್ರಾಮದ ಬಳಿ 50 ಕೋಟಿ ವೆಚ್ಚದಲ್ಲಿ ಏಕಲವ್ಯ ವಸತಿ ಶಾಲೆಯ ಮಂಜೂರಾತಿ ದೊರೆಯಲಿದೆ ಎಂದು ಭರವಸೆ ವ್ಯಕ್ತಪಡಿಸಿದರು.

ತಾಲ್ಲೂಕಿನಲ್ಲಿ ನೀರಾವರಿ ಯೋಜನೆಗಳು ಸಾಕಾರಗೊಂಡಿದ್ದು, ಕೋವಿಡ್ ಇಳಿಮುಖವಾದ ನಂತರ ಪ್ರಧಾನಿ ಮೋದೀಜಿ ಅವರನ್ನು ಶಂಕುಸ್ಥಾಪನೆಗೆ ಆಹ್ವಾನಿಸಲಾಗುವುದು ಎಂದರು.

ಕೊರೊನಾ ಮಹಾಮಾರಿಯಿಂದ ಸಂಪೂರ್ಣ ಮುಕ್ತಿ ಸಿಕ್ಕಿಲ್ಲ. ಸಾರ್ವಜನಿಕರು ಸಾಮಾಜಿಕ ಅಂತರ ಕಾಪಾಡಿಕೊಳ್ಳಿ. ಮಾಸ್ಕ್, ಸ್ಯಾನಿಟೈಸರ್ ಬಳಕೆ ಕಡ್ಡಾಯವಾಗಲಿ ಎಂದು ಸಲಹೆ ನೀಡಿದರು.

ಈ ಸಂದರ್ಭದಲ್ಲಿ ಜಿ.ಪಂ. ಉಪಾಧ್ಯಕ್ಷೆ ಸಾಕಮ್ಮ, ಸದಸ್ಯ ಎಸ್.ಕೆ. ಮಂಜುನಾಥ್, ತಾ.ಪಂ. ಸ್ಥಾಯಿ ಸಮಿತಿ ಅಧ್ಯಕ್ಷ ಸಿದ್ದೇಶ್, ಮಂಡಲ ಅಧ್ಯಕ್ಷ ಎಚ್.ಸಿ. ಮಹೇಶ್, ಜಿ.ಪಂ. ಮಾಜಿ ಸದಸ್ಯ ನಾಗರಾಜ್, ಸೊಕ್ಕೆ ತಿಪ್ಪೇಸ್ವಾಮಿ, ಮುಖಂಡರಾದ ಬಿಸ್ತುವಳ್ಳಿ ಬಾಬು, ಓಬಣ್ಣ, ರೇವಣ್ಣ, ಕುಮಾರ್, ಗುತ್ತಿಗೆದಾರ ದೀಪಕ್ ಪಟೇಲ್, ಪಿಡಬ್ಲ್ಯೂಡಿ ಎಇಇ ರುದ್ರಪ್ಪ, ತಾ.ಪಂ. ಇಓ ಮಲ್ಲಾನಾಯ್ಕ, ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಬಿ. ಮಹೇಶ್ವರಪ್ಪ, ಪ್ರಾಂಶುಪಾಲ ಕಲ್ಲೇಶ್, ನಾಗರಾಜ್ ಸೇರಿದಂತೆ, ಗ್ರಾ.ಪಂ ಸದಸ್ಯರುಗಳು ಗ್ರಾಮಸ್ಥರು ಭಾಗವಹಿಸಿದ್ದರು.

# 3.5 ಲಕ್ಷಕ್ಕೂ ಅಧಿಕ ಮೌಲ್ಯದ ಸ್ಫೋಟಕ ವಸ್ತುಗಳ ಜಪ್ತಿ



ದಾವಣಗೆರೆ, ಮಾ.21- ಗೋದಾಮಿನಲ್ಲಿ ಅಕ್ರಮವಾಗಿ ಸಂಗ್ರಹಿಸಿದ್ದ 3 ಲಕ್ಷದ 62 ಸಾವಿರ ರೂ. ಮೌಲ್ಯದ ಸ್ಫೋಟಕ ವಸ್ತುಗಳು ಸೇರಿದಂತೆ ಒಂದು ವಾಹನ, ಎರಡು ದ್ವಿಚಕ್ರ ವಾಹನಗಳನ್ನು ಇಲ್ಲಿನ ಗ್ರಾಮಾಂತರ ಪೊಲೀಸರು ಇಂದು ಜಪ್ತಿ ಮಾಡಿ ನಾಲ್ವರನ್ನು ಬಂಧಿಸಿದ್ದಾರೆ. ಬಿ.ಎಸ್. ವಿಕ್ರಮ್, ಕೆ. ನಾಗರಾಜ್, ವಿಜಯಕುಮಾರ್, ಮಂಜುನಾಥ ಬಂಧಿತರು.

ಕಾಡಜ್ಜಿ ಷಣ್ಮುಖಪ್ಪಗೆ ಸೇರಿದ ದುರ್ಗಾದೇವಿ ಎಕ್ಸ್‌ಪ್ಲೋಸಿವ್ ಮ್ಯಾಗ್‌ಜಿನ್‌ನ ಬಳಿಯಿರುವ ಗೋದಾಮಿನ ಒಳಗಡೆ ಮತ್ತು ಮುಂಭಾಗದಲ್ಲಿ ಸ್ಫೋಟಕ ವಸ್ತುಗಳನ್ನು ಅಕ್ರಮವಾಗಿ ಸಂಗ್ರಹಿಸಲಾಗಿತ್ತು. ಅಲ್ಲದೇ ಬೊಲೆರೋ ವಾಹನದಲ್ಲಿ ಸಾಗಾಟ ಮಾಡಲು ಮುಂದಾಗಿದ್ದಾಗ, ಗ್ರಾಮಾಂತರ ಡಿವೈಎಸ್ಪಿ ನರಸಿಂಹ ವಿ. ತಾಮ್ರಧ್ವಜ ನೇತೃತ್ವದಲ್ಲಿ ಪಿಎಸ್‌ಐ ಎಸ್. ಪುಷ್ಪಲತಾ, ಆಂಟಿ ಸಬೋಟೇಜ್ ಚೆಕ್ ಟೀಮ್ ಮತ್ತು ಎಎಸ್‌ಐ ಗುರುಶಾಂತಯ್ಯ, ಸಿಬ್ಬಂದಿಗಳಾದ ವೀರಭದ್ರಪ್ಪ, ದೇವೇಂದ್ರನಾಯ್ಕ, ನಾಗರಾಜಯ್ಯ, ಜಿ.ಎಲ್. ಮಂಜುನಾಥ, ಮಂಜನಗೌಡ, ನಾಗರಾಜ ಲಂಬಾಣಿ, ಅರುಣ್‌ಕುಮಾರ್ ಕುರುಬರ, ಹನುಮಂತಪ್ಪ ಒಳಗೊಂಡ ತಂಡ ದಾಳಿ ನಡೆಸಿದೆ.

ಅಕ್ರಮವಾಗಿ ಸಂಗ್ರಹಿಸಿದ್ದ ಗೋಡಾನ್ ಮಾಲೀಕ ಷಣ್ಮುಖಪ್ಪ, ಮುಜೀಬ್ ವಿರುದ್ಧ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಚುನಾವಣೆ ಸೃಷ್ಟಿಸಿದ ಬಿಜೆಪಿಗೆ ಪಾಠ ಕಲಿಸಿ



**(1ನೇ ಪುಟದಿಂದ)** ಪಕ್ಷ ಒಂದೇ ಅಭಿವೃದ್ಧಿ ಚಿಂತನೆ ಮಾಡಲಿದೆ ಎಂಬುದಕ್ಕೆ ಕಳೆದ 7 ವರ್ಷಗಳ ದುರಾಡಳಿತ ನೋಡಿರುವ ಜನತೆ ಸರ್ಕಾರದ ಜನ ವಿರೋಧಿ ನೀತಿಗಳಿಂದ ಬೇಸತ್ತು ಬೀದಿಗಿಳಿದು ಹೋರಾಟ ನಡೆಸುತ್ತಿರುವುದೇ ಸಾಕ್ಷಿ ಎಂದರು.

ಮಹಾನಗರ ಪಾಲಿಕೆ ವಿಪಕ್ಷ ನಾಯಕ ಎ.ನಾಗರಾಜ್ ಮಾತನಾಡಿ, ಈ ವಾರ್ಡಿನ ಎಲ್ಲರ ಆಶಯದಂತೆ ನೀವೇ ನೀಡಿದ ಅಭ್ಯರ್ಥಿಗೆ ಪಕ್ಷ ಮಣೆ ಹಾಕಿದ್ದು, ತಾವುಗಳು ಯಾವುದೇ ಆಸೆ, ಆಮಿಷಕ್ಕೆ ಒಳಗಾಗದೇ ಸ್ವಾಭಿಮಾನದ ಸಂಕೇತವಾಗಿ ಕಾಂಗ್ರೆಸ್ ಅಭ್ಯರ್ಥಿಯನ್ನು ಗೆಲ್ಲಿಸಬೇಕೆಂದು ಮನವಿ ಮಾಡಿದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಅಯೂಬ್ ಪೈಲ್ವಾನ್ ಮಾತನಾಡಿ, ಅಚ್ಚೇದಿನ್ ಎಂದು ಹೇಳಿ ಅಧಿಕಾರಕ್ಕೆ ಬಂದಿರುವ ಬಿಜೆಪಿ, ಇಂದು ಜನ ಜೀವನ ಸಾಗಿಸದಂತೆ ಜನವಿರೋಧಿ ನೀತಿಗಳನ್ನು ತಂದಿದ್ದು, ಇದರ ವಿರುದ್ಧ ಮತ ಚಲಾಯಿಸುವ ಮೂಲಕ ಈ ಭಾಗದ ಜನತೆ ಬಿಜೆಪಿ ಮುಕ್ತ ರಾಷ್ಟ್ರ ನಿರ್ಮಾಣಕ್ಕೆ ನಾಂದಿ ಹಾಡಬೇಕೆಂದು ಕರೆ ನೀಡಿದರು.

ಪಾಲಿಕೆ ಸದಸ್ಯ ಕೆ.ಚಮನ್ ಸಾಬ್ ಮಾತನಾಡಿ ದೇಶದ ಜನತೆಗೆ ಸಮರ್ಪಕವಾಗಿ ಕೋವಿಡ್ ವ್ಯಾಕ್ಸಿನ್ ನೀಡದ ಬಿಜೆಪಿ ಸರ್ಕಾರ ಪಾಕಿಸ್ತಾನಕ್ಕೆ ಉಚಿತವಾಗಿ ಕೋವಿಡ್ ವ್ಯಾಕ್ಸಿನ್ ಕಳುಹಿಸುವ ಮೂಲಕ ದೇಶದ್ರೋಹದ ಕೃತ್ಯ ಎಸಗಿದೆ ಎಂದು ದೂರಿದರು.

ಉದ್ಯಮಿ ಕೋಗುಂಡಿ ಬಕ್ಕೇಶಪ್ಪ ಮಾತನಾಡಿ ಈ ಭಾಗದ ಜನತೆ ಎಲ್ಲಾ ಚುನಾವಣೆಗಳಲ್ಲಿ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸುತ್ತಿದ್ದು, ಈ ಬಾರಿಯೂ ಸ್ಥಳೀಯರಾದ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯನ್ನು ಗೆಲ್ಲಿಸಲಾಗುವುದು ಎಂದು ಭರವಸೆ ನೀಡಿದರು.

ವಾರ್ಡ್ ಕಾಂಗ್ರೆಸ್ ಅಧ್ಯಕ್ಷ ಶಂಕರ್, ಕಾಂಗ್ರೆಸ್ ಅಭ್ಯರ್ಥಿ ಶ್ರೀಮತಿ ಮೀನಾಕ್ಷಿ ಜಗದೀಶ್, ಸ್ಥಳೀಯರಾದ ರಾಕಿ, ಲಕ್ಷ್ಮಮ್ಮ ಜಗದೀಶ್ ಮತ್ತಿತರರು ಮಾತನಾಡಿದರು.

ಈ ಸಂದರ್ಭದಲ್ಲಿ ಉದ್ಯಮಿ ಕೆ.ಜಿ.ಕೆ.ಚಿದಾನಂದ, ಜಿಲ್ಲಾ ಕಾಂಗ್ರೆಸ್ ಕಾರ್ಯದರ್ಶಿ ಎಸ್.ಮಲ್ಲಿಕಾರ್ಜುನ್, ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಶ್ರೀಮತಿ ಶುಭಮಂಗಳ, ಶ್ರೀಮತಿ ಅನ್ನಪೂರ್ಣಮ್ಮ, ಬಸಾಪುರ ಕೊಟ್ರಯ್ಯ, ಸ್ಥಳೀಯ ಮುಖಂಡರುಗಳಾದ ವೆಂಕಟೇಶ್ ನಾಯ್ಕ, ಸೊಸೈಟಿ ವೆಂಕಟೇಶನಾಯ್ಕ, ರಘು, ಚಂದ್ರು, ಅಲೆಕ್ಸಾಂಡರ್ (ಜಾನು), ಮುನಿಸ್ವಾಮಿ, ವೀರೇಶ್, ರಾಜಶೇಖರ್ ಬೆಂಡಿಗೇರಿ, ದಾದು, ಮಾದೇಶಣ್ಣ, ಪೆರುಮಾಳ್,ಆನೆಕೊಂಡ ನಾಗರಾಜ್ ಮತ್ತಿತರರಿದ್ದರು.

# ಲೂಟಿಗಾಗಿ ಸರ್ಕಾರ ರಚನೆ

**(1ನೇ ಪುಟದಿಂದ)** ಸಮೃದ್ಧ ರಾಜ್ಯವಾಗಿದೆ. ಪತ್ರದಲ್ಲಿ ಬರೆದಿರುವ ವಿಚಾರಗಳು ದೊಡ್ಡ ವಿಷಯದ ಸಣ್ಣ ಸಂಕೇತ ಮಾತ್ರ ಆಗಿರಬಹುದಾಗಿದೆ. ರಾಜಕಾರಣಿಗಳ ಪರವಾಗಿ ಹಣ ವಸೂಲಿ ಮಾಡುತ್ತಿರುವುದಾಗಿ ಮುಂಬೈ ಪೊಲೀಸರು ಹೇಳಿದ್ದಾರೆ. ಪುಣೆ, ನಾಗಪುರ ಹಾಗೂ ಜಲಗಾಂವ್‌ಗಳಲ್ಲಿ ಇದೇ ರೀತಿಯ ಅವ್ಯವಹಾರ ನಡೆಯುತ್ತಿರುವುದು ಎಂದು ಅವರು ಆರೋಪಿಸಿದ್ದಾರೆ.

ಅಮಾನತ್ತುಗೊಂಡಿದ್ದ ಹಾಗೂ ಶಿವಸೇನೆ ಸೇರಿದ್ದ ಸಚಿನ್ ವಾಜೆಯನ್ನು ಯಾರ ಒತ್ತಡದಿಂದಾಗಿ ಮತ್ತೆ ಪೊಲೀಸ್ ಇಲಾಖೆಗೆ ಸೇರ್ಪಡೆ ಮಾಡಿಕೊಳ್ಳಲಾಯಿತು? ಸಾಮಾನ್ಯವಾಗಿ ಎಸ್‌ಪಿ ಇಲ್ಲವೇ ಡಿಎಸ್‌ಪಿ ಹಂತದ ಅಧಿಕಾರಿ ಮುಖ್ಯಸ್ಥರಾಬೇಕಿದ್ದ ಮುಂಬೈ ಪೊಲೀಸರ ಅಪರಾಧ ಗುಪ್ತಚರ ದಳಕ್ಕೆ ಅಸಿಸ್ಟೆಂಟ್ ಸಬ್ ಇನ್ಸ್‌ಪೆಕ್ಟರ್ ಆಗಿದ್ದ ವಾಜೆ ಹೇಗೆ ಮುಖ್ಯಸ್ಥರಾದರು ಎಂಬುದಕ್ಕೆ ಉತ್ತರ ಬೇಕಿದೆ ಎಂದವರು ಹೇಳಿದ್ದಾರೆ.

ಉದ್ಯಮಿ ಮುಕೇಶ್ ಅಂಬಾನಿ ನಿವಾಸದ ಬಳಿ ಸ್ಫೋಟಕ ಹೊಂದಿದ್ದ ಜಿಲಿಟಿನ್ ಇರಿಸಿದ ಪ್ರಕರಣದಲ್ಲಿ ವಾಜೆಯನ್ನು ಎನ್.ಐ.ಎ. ಬಂಧಿಸಿದೆ. ನಂತರ ಅವರನ್ನು ಅಮಾನತ್ತುಗೊಳಿಸಲಾಗಿದೆ.

# ನಗರದಲ್ಲಿ ನಾಡಿದ್ದು ಸಿದ್ಧ ಕಣ್ಣಿನ ಹನಿ ಹಾಕುವ ಕಾರ್ಯಕ್ರಮ



ದಾವಣಗೆರೆ, ಮಾ.21- ಸಿದ್ಧ ಕಣ್ಣಿನ ಹನಿ ಹಾಕುವ ಉಚಿತ ಕಾರ್ಯಕ್ರಮವನ್ನು ಸ್ಥಳೀಯ ವಿದ್ಯಾ ನಗರದ ಶ್ರೀ ಈಶ್ವರ-ಪಾರ್ವತಿ-ಗಣಪತಿ ದೇವಸ್ಥಾನದ ಆವರಣದಲ್ಲಿ ಇದೇ ದಿನಾಂಕ 23ರ ಬೆಳಿಗ್ಗೆ 10 ರಿಂದ 11 ರವರೆಗೆ ಹಮ್ಮಿಕೊಳ್ಳಲಾಗಿದೆ. ಪಾಲಿಕೆ ಮಾಜಿ ಸದಸ್ಯ ಬೆಳವನೂರು ನಾಗರಾಜಪ್ಪ ಕಾರ್ಯಕ್ರಮದ ನೇತೃತ್ವ ವಹಿಸುವರು.

ಕಣ್ಣಿಗೆ ಹನಿ ಹಾಕುವುದರಿಂದ ಕಣ್ಣಿನಲ್ಲಿ ನೀರು ಬರುವುದು, ಕಣ್ಣುರಿ, ಕಣ್ಣು ಕೆಂಪಾಗುವುದು, ಕಣ್ಣಿನ ಪೊರೆ ಬರುವ ಹಂತದಲ್ಲಿರುವವರು, ದೂರ ದೃಷ್ಟಿ, ಸಮೀಪ ದೃಷ್ಟಿ ತೊಂದರೆ ಇರುವವರು ಶಿಬಿರದಲ್ಲಿ ಭಾಗವಹಿಸ ಬಹುದು. ವಿವರಕ್ಕೆ ವ್ಯವಸ್ಥಾಪಕ ಎಂ. ಮೋಕ್ಷಾನಂದ, ಬಿ.ಎಸ್. ವೀರೇಶ್ (88676-91155), ಕೆ.ಎಂ. ವೀರಭದ್ರಯ್ಯ (94493-88354), ಆರ್.ಕೆ.ಎಂ. ಕಂಬಾಳೇಶ್ (94484-42 713), ಎನ್.ಎಂ. ತಿಪ್ಪೇಸ್ವಾಮಿ (98868-74078) ಅವರನ್ನು ಸಂಪರ್ಕಿಸಿ.

# ಬಂಗಾರದಂಗಡಿ ಮಾಲೀಕನಿಗೆ ವಂಚನೆ



**ಆರೋಪಿ ಬಂಧನ: 12 ಲಕ್ಷಕ್ಕೂ ಅಧಿಕ ಮೌಲ್ಯದ ಬಂಗಾರ ವಶ**

ದಾವಣಗೆರೆ, ಮಾ.21- ಆಭರಣ ತಯಾರಿಸಿ ಕೊಡುವುದಾಗಿ ನಂಬಿಸಿ ಬಂಗಾರದ ಅಂಗಡಿ ಮಾಲೀಕರೋರ್ವರಿಗೆ ವಂಚಿಸಿದ್ದ ಆರೋಪಿತನನ್ನು ಬಂಧಿಸಿ, 12 ಲಕ್ಷದ 7,500 ರೂ. ಮೌಲ್ಯದ 345 ಗ್ರಾಂ ಬಂಗಾರವನ್ನು ಇಲ್ಲಿನ ಬಸವನಗರ ಪೊಲೀಸರು ವಶಪಡಿಸಿಕೊಂಡಿದ್ದಾರೆ. ಮೂಲತಃ ಪಶ್ಚಿಮ ಬಂಗಾಳ ರಾಜ್ಯದ ಬಂಗಾರದ ಕೆಲಸ ಮಾಡುವ ಆರೋಪಿತ ಗೌರ್ ಅದಕ್ ಅಲಿಯಾಸ್ ಸಮೂಲ್ ಭರತ್ ಜ್ಯೂಯಲರಿ ಮಾಲೀಕ ವಿಜಯಕುಮಾರ್ ಅವರ ಬಳಿ ಅಂಗಡಿಯಿಂದ ಆಭರಣ ಮಾಡಲು ಕೊಟ್ಟಿದ್ದ 450 ಗ್ರಾಂ ಬಂಗಾರವನ್ನು ನಂಬಿಸಿ ಮೋಸ ಮಾಡಿ ತೆಗೆದುಕೊಂಡು ಹೋಗಿರುವ ಬಗ್ಗೆ ಡಿ.21,2020 ರಂದು ಬಸವನಗರ ಪೊಲೀಸ್ ಠಾಣೆಯಲ್ಲಿ ನಂಬಿಕೆ ದ್ರೋಹದ ಪ್ರಕರಣ ದಾಖಲಿಸಲಾಗುತ್ತು.

ಬಸವನಗರ ಪೊಲೀಸ್ ಠಾಣೆಯ ಪಿಐ ನಾಗಪ್ಪ ಬಂಕಾಳಿ ಹಾಗೂ ಪಿಎಸ್‌ಐ ಶೀಲಾ ಹೊಂಗಲ್ ಹಾಗೂ ಅಪರಾಧ ವಿಭಾಗದ ಸಿಬ್ಬಂದಿಗಳಾದ ಜಿ. ಆರ್. ಶಿವಪ್ಪ, ಫಕೃದ್ದೀನ್, ಪ್ರಭಾಕರ, ಮಹಮ್ಮದ್ ರಫಿ, ಮಹಮ್ಮದ್ ಯುಸೂಫ್, ವಿಶ್ವನಾಥ್ ಗಡ್ಡಿ ಒಳಗೊಂಡ ತಂಡವು ಬಂಗಾರವನ್ನು ವಶಪಡಿಸಿಕೊಂಡು ಆರೋಪಿತನನ್ನು ಬಂಧಿಸಿ, ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಾರೆ.

# ಡಿಕೆಶಿ ಕ್ಷಮೆ ಯಾಚಿಸುವಂತೆ ಕಾನೂನು ಪ್ರಕೋಷ್ಠ ಒತ್ತಾಯ

ದಾವಣಗೆರೆ, ಮಾ.21-ಶಿವಮೊಗ್ಗದಲ್ಲಿ ನಡೆದ ಕಾಂಗ್ರೆಸ್ ಜನಾಕ್ರೋಶ ಸಮಾವೇಶದಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ವಕೀಲರ ಬಗ್ಗೆ ಅವಾಚ್ಯ ಪದವನ್ನು ಬಳಸಿದ್ದು, ವಕೀಲರ ಸಮುದಾಯಕ್ಕೆ ಅಪಮಾನ ಮಾಡಿದ್ದಾರೆ. ಅವರು ಈ ಕೂಡಲೇ ಬೇಷರತ್ ಕ್ಷಮೆ ಯಾಚಿಸಲು ರಾಜ್ಯ ಹಾಗೂ ಜಿಲ್ಲಾ ಕಾನೂನು ಪ್ರಕೋಷ್ಠ ಆಗ್ರಹಿಸಿದೆ.

ಪಿಎಂ ಕೇರ್‌ನಲ್ಲಿ ಹಣ ದುರುಪಯೋಗವಾಗಿದೆ ಎಂಬ ಆಧಾರ ರಹಿತ ಪೋಸ್ಟ್ ವಿರುದ್ಧ ಸಾಗರದ ವಕೀಲ ಪ್ರವೀಣ್ ಪೊಲೀಸ್ ಠಾಣೆಗೆ ದೂರು ಸಲ್ಲಿಸಿದ್ದರು. ಎಫ್‌ಐಆರ್ ಸಹ ದಾಖಲಾಗಿದ್ದು, ಪ್ರಕರಣ ತನಿಖಾ ಹಂತದಲ್ಲಿದೆ. ಶಿವಮೊಗ್ಗದಲ್ಲಿ ನಡೆದ ಸಮಾವೇಶದಲ್ಲಿ ಪ್ರವೀಣ್ ಅವರನ್ನು ಡಿಕೆಶಿ ತಗಲಾಂಡಿ ಎಂದು ಅವಾಚ್ಯ ಶಬ್ದದಿಂದ ಬೈದಾಡಿದ್ದಾರೆ.

ಡಿಕೆಶಿ ಇ.ಡಿ. ಬಲೆಗೆ ಬಿದ್ದಾಗ ವಕೀಲರ ಸಹಾಯ ಪಡೆದಿರುವುದು ನೆನಪಿಲ್ಲ ಅನಿಸುತ್ತದೆ. ಈಗಾಗಲೇ ಶಿವಮೊಗ್ಗ ಮತ್ತು ಬಾಗಲಕೋಟೆಯಲ್ಲಿ ವಕೀಲರು ಪ್ರತಿಭಟಿಸಿದ್ದು, ಡಿಕೆಶಿ ವಕೀಲರ ಸಮುದಾಯದ ಕ್ಷಮೆ ಯಾಚಿಸದೇ ಇದ್ದರೆ ಕಾನೂನು ಪ್ರಕೋಷ್ಠ ರಾಜ್ಯಾದ್ಯಂತ ಪ್ರತಿಭಟಿಸಬೇಕಾಗುತ್ತದೆ ಎಂದು ವಕೀಲರ ಸಂಘದ ನಿಕಟಪೂರ್ವ ಉಪಾಧ್ಯಕ್ಷರು ಮತ್ತು ದಾವಣಗೆರೆ ಜಿಲ್ಲಾ ಕಾನೂನು ಪ್ರಕೋಷ್ಠದ ಸಂಚಾಲಕ ಹೆಚ್. ದಿವಾಕರ್, ರಾಜ್ಯ ಸಮಿತಿ ಸದಸ್ಯ ಎ.ಸಿ. ರಾಘವೇಂದ್ರ, ಸಹ ಸಂಚಾಲಕ ಕೆ.ಹೆಚ್. ಧನಂಜಯ್, ಎ.ಎಸ್. ಮಂಜುನಾಥ್, ಪಿ.ವಿ. ಶಿವಕುಮಾರ್ ಎಚ್ಚರಿಸಿದ್ದಾರೆ.

# ಸಿಬ್ಬಂದಿ ಸೇವಾವಧಿ ವಿಸ್ತರಣೆ

**(1ನೇ ಪುಟದಿಂದ)** ಸಿಬ್ಬಂದಿಗಳ ಸೇವಾವಧಿ ಆರು ತಿಂಗಳು ವಿಸ್ತರಣೆ ಮಾಡಲು ವೈದ್ಯಕೀಯ ಸಚಿವ ಡಾ. ಸುಧಾಕರ್ ಆದೇಶ ಹೊರಡಿಸಿದ್ದಾರೆ. ರಾಜ್ಯದ ವಿವಿಧ ಆಸ್ಪತ್ರೆಗಳಲ್ಲಿ ಗುತ್ತಿಗೆ/ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಂಡಿರುವ ವೈದ್ಯರು ಹಾಗೂ ಸಿಬ್ಬಂದಿಯ ಸೇವಾ ಅವಧಿಯನ್ನು ಷರತ್ತು ಹಾಗೂ ನಿಬಂಧನೆಗಳೊಂದಿಗೆ ಏಪ್ರಿಲ್ 1ರಿಂದ ಸೆಪ್ಟೆಂಬರ್ 30ರ ಅವಧಿಗೆ ವಿಸ್ತರಿಸಲು ಆದೇಶ ಹೊರಡಿಸಿದೆ.


## ಸವಿನೆನಪು



**ಶ್ರೀಮತಿ ಶಕುಂತಲ ಬಿ.ಜೆ.**

ಜನನ : 10.09.1958 ನಿಧನ : 22.03.2012

ನೀವು ನಮ್ಮನ್ನಗಲಿ ಇಂದಿಗೆ ಹತ್ತು ವರ್ಷಗಳಾದವು. ಸದಾ ನಿಮ್ಮ ಸ್ಮರಣೆಯಲ್ಲಿ, ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿದ್ದೇವೆ.


ಎನ್. ಅಜ್ಜಪ್ಪ ಮತ್ತು ಮಕ್ಕಳು ಹಾಗೂ ಮೊಮ್ಮಕ್ಕಳು, ಮಠದ ಸಿರಿಗೆರೆ.

ಶ್ರೀ ವಿಘ್ನೇಶ್ ಆಟೋ ಡಯಾಗ್ನೋಸಿಸ್
ಶ್ರೀ ವಿಘ್ನೇಶ್ ಆಟೋ ಏಜೆನ್ಸೀಸ್, ಪಿ.ಬಿ. ರಸ್ತೆ, ದಾವಣಗೆರೆ.
ಶ್ರೀ ವಿಘ್ನೇಶ್ ಆಟೋ ಏಜೆನ್ಸೀಸ್, ಚಿತ್ರದುರ್ಗ.
V 3 ಏಜೆನ್ಸೀಸ್, ದಾವಣಗೆರೆ.



॥ ಶ್ರೀ ಚಿಗಟೇರಿ ನಾರದಮುನಿ ಪ್ರಸನ್ನ ॥

## ಕೈಲಾಸ ಶಿವಗಣಾರಾಧನೆ ಆಹ್ವಾನ



ದಾವಣಗೆರೆ ತಾಲ್ಲೂಕು ಎಲೆಬೇತೂರು ಗ್ರಾಮದ ನಿವಾಸಿ
ಲಿಂ॥ ಶ್ರೀ ಹನಗವಾಡಿ ನಾರಪ್ಪನವರ ಧರ್ಮಪತ್ನಿ
**ಶ್ರೀಮತಿ ಕಮಲಮ್ಮ ಮತ್ತು ಮಕ್ಕಳು**
ಇವರುಗಳು ಮಾಡುವ ವಿಜ್ಞಾಪನೆಗಳು.
ದಿನಾಂಕ : 14.03.2021ನೇ ಭಾನುವಾರ ಬೆಳಿಗ್ಗೆ 7.05ಕ್ಕೆ ನನ್ನ ಪೂಜ್ಯ ಪತಿಯವರಾದ
**ಶರಣ ಹನಗವಾಡಿ ನಾರಪ್ಪನವರು**
(ಜನನ : 05.05.1940, ನಿಧನ : 14.03.2021)
ನಿವೃತ್ತ ಡೆಪ್ಯೂಟಿ ಲೀಡರ್, ಕಿರ್ಲೋಸ್ಕರ್, ಹರಿಹರ.
ಇವರು ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
**'ಕೈಲಾಸ ಶಿವಗಣಾರಾಧನೆ'ಯನ್ನು**
ದಿನಾಂಕ : 22.03.2021ನೇ ಸೋಮವಾರ ಬೆಳಿಗ್ಗೆ 10.30ಕ್ಕೆ ಈಶ್ವರ-ಪಾರ್ವತಿ ಗಣಪತಿ ದೇವಸ್ಥಾನ, 2ನೇ ಬಸ್‌ಸ್ಟಾಪ್, ವಿದ್ಯಾನಗರ, ದಾವಣಗೆರೆ ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರಾದ :

ಶ್ರೀಮತಿ ಹನಗವಾಡಿ ಕಮಲಮ್ಮ, ದಿ॥ ನಾರಪ್ಪನವರ ಸಹೋದರರು, ಸಹೋದರಿಯರು
ಹೆಚ್. ವೀರಪ್ಪ, ದಿ.ಲಲಿತಮ್ಮ, ಹೆಚ್.ಎಂ. ನಾಗರಾಜ್
ಮತ್ತು ಮಕ್ಕಳಾದ : ಮಂಜುಳ ಹೆಚ್.ಎನ್. & ಷಣ್ಮುಖಪ್ಪ, ರೇಖಾ ಹೆಚ್.ಎನ್. & ಮಲ್ಲಿಕಾರ್ಜುನ್, ಸೌಮ್ಯ ಕೆ.ಜೆ. & ಪ್ರಸನ್ನ ಕುಮಾರ್ ಹೆಚ್.ಎನ್., ರೂಪ ಹೆಚ್.ಎನ್., ಉಷಾ ಹೆಚ್.ಎನ್. ಮತ್ತು ಸಂತೋಷ್
ಮೊಮ್ಮಕ್ಕಳಾದ: ರಾಹುಲ್, ಕಾರ್ತಿಕ್, ಕಾವ್ಯ, ಸಾನ್ವಿಕಾ ಹನಗವಾಡಿ, ಮತ್ತು
ಹನಗವಾಡಿ ವಂಶಸ್ಥರು, ಎಲೆಬೇತೂರು. ಬಂಧು-ಮಿತ್ರರು ಹಾಗೂ ಗ್ರಾಮಸ್ಥರು, ಫೋ. : 99455 94176

ವಿ.ಸೂ. ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.


## ಕೆ.ಗಜಾನನ ನಿಧನ



ದಾವಣಗೆರೆ ಕಾಳಿಕದೇವಿ ರಸ್ತೆ (#86/1) ಹಗೇದಿಬ್ಬ ಸರ್ಕಲ್, ಕಾವೇರಿ ನಿಲಯ ವಾಸಿ

**ಕೆ.ಗಜಾನನ (55)**

ಅವರು ದಿನಾಂಕ 21.03.2021 ರಂದು ಭಾನುವಾರ ರಾತ್ರಿ 10 ಗಂಟೆಗೆ ನಿಧನರಾಗಿದ್ದಾರೆ. ಪತ್ನಿ, ಓರ್ವ ಪುತ್ರ, ಸಹೋದರ ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 22.03.2021 ರಂದು ಸೋಮವಾರ ಮಧ್ಯಾಹ್ನ 2 ಗಂಟೆಗೆ ನಗರದ ಪಿ.ಬಿ. ರಸ್ತೆ ವೈಕುಂಠ ಧಾಮದಲ್ಲಿ ನೆರವೇರಲಿದೆ.

ಇಂತಿ ದುಃಖತಪ್ತ ಕುಟುಂಬ ವರ್ಗ:

**ಕೆ.ನಾಗರಾಜ್ ಹಾಗೂ ಸಹೋದರರು**
**94481 78600, 98004 48446**

# ಕ್ರೀಡಾಪಟುಗಳಿಗೆ ಶೇ.2ರ ಮೀಸಲಾತಿ ಆದೇಶ

**(1ನೇ ಪುಟದಿಂದ)** ವಿಶೇಷ ನಿಯಮ ಗಳಿಂದಾಗಿ ಕ್ರೀಡಾಪಟುಗಳು ನೇರವಾಗಿ ಪೇದೆ, ಸಬ್ ಇನ್ಸ್ ಪೆಕ್ಟರ್ ಹಾಗೂ ಡಿ.ಎಸ್.ಪಿ. ಹುದ್ದೆಗಳಿಗೆ ನೇಮಕಗೊಳ್ಳಲಿದ್ದಾರೆ.

ಈ ಕ್ರಮಕ್ಕಾಗಿ ಗೃಹ ಸಚಿವ ಬಸವರಾಜ ಬೊಮ್ಮಾಯಿ ಹಾಗೂ ಡಿಜಿಪಿ ಪ್ರವೀಣ್ ಸೂದ್ ಅವರಿಗೆ ಧನ್ಯವಾದ ಸಲ್ಲಿಸಿರುವ ಕೆ.ಎಸ್.ಆರ್.ಪಿ.ಯ ಎ.ಡಿ.ಜಿ.ಪಿ. ಅಲೋಕ್ ಕುಮಾರ್, ಕ್ರೀಡಾಪಟುಗಳಿಗೆ ಮೀಸಲಾತಿ ಕಲ್ಪಿಸುವ ಅಂತಿಮ ಅಧಿಸೂಚನೆ ಹೊರಬಿದ್ದಿದೆ ಎಂದಿದ್ದಾರೆ.

# ಸ್ಫೋಟ ಸೃಷ್ಟಿಸುವ ಭವ್ಯ ಭವಿಷ್ಯ...

**ಎಷ್ಟೊಂದು ಸೌಕರ್ಯಗಳನ್ನು ಮಾಡಿಕೊಂಡಿದ್ದೀರಿ ಹೇಳಿ, ನೀವು ನೂರು ವರ್ಷ ಹಿಂದೆ ಇದ್ದಿದ್ದಕ್ಕಿಂತ ಈಗ ಹೆಚ್ಚು ಸಂತೋಷವಾಗಿದ್ದೀರಾ ?**

**- ಸ್ವಾಮಿ ವಿವೇಕಾನಂದರು**






ಉಗಿಬಂಡಿಗಳಿಂದ ಪ್ರಾರಂಭವಾದ ಮೊದಲನೇ ಕೈಗಾರಿಕಾ ಕ್ರಾಂತಿ ಮತ್ತಷ್ಟು ಬೆಳೆದು ಕೈಗಳಿಗೆ ಬದಲಾಗಿ ಕೈಗಾರಿಕೆಗಳಿಂದ ಉತ್ಪಾದನೆ ಮಾಡುವ ಎರಡನೇ ಕೈಗಾರಿಕಾ ಕ್ರಾಂತಿಗೆ ಕಾಲಿಟ್ಟಿತು. ಅನಂತರ ಡಿಜಿಟಲ್ ಕ್ರಾಂತಿ ಎಂದು ಕರೆಯಲಾಗುವ ಮೂರನೇ ಕೈಗಾರಿಕಾ ಕ್ರಾಂತಿ ಪ್ರಾರಂಭವಾಯಿತು. ಆದರೆ, ಇಷ್ಟಕ್ಕೇ ನಿಂತಿಲ್ಲ. ಇನ್ನು 20-30 ವರ್ಷಗಳಲ್ಲಿ ಸ್ಫೋಟಗೊಳ್ಳುವ ತಾಂತ್ರಿಕ ಬದಲಾವಣೆಗಳನ್ನು ಊಹಿಸಿಕೊಳ್ಳಲೂ ಸಾಧ್ಯವಾಗದು. ಈ ಮೂರೂ ಕೈಗಾರಿಕಾ ಕ್ರಾಂತಿಗಳ ತಾಂತ್ರಿಕತೆಯನ್ನು ವ್ಯಾವಹಾರಿಕ-ಆರ್ಥಿಕ, ವೈದ್ಯಕೀಯ, ಕೃಷಿ ಮುಂತಾದ ಎಲ್ಲಾ ಸಾಮಾಜಿಕ ರಂಗಗಳಿಗೂ ವಿಸ್ತರಿಸಿ ಬೆಳೆಯುತ್ತಿರುವ ಈ ಹೊಸ ಬೆಳವಣಿಗೆಯನ್ನು ನಾಲ್ಕನೇ ಕೈಗಾರಿಕಾ ಕ್ರಾಂತಿ ಎಂದು ಕರೆಯುತ್ತೇವೆ. ಜನೆಟಿಕ್ ಇಂಜಿನಿಯರಿಂಗ್, ಆರ್ಟಿಫಿಶಿಯಲ್ ಇಂಟಲಿಜೆನ್ಸ್ ರೋಬೋಟ್‌ಗಳು ಈ ಕ್ರಾಂತಿಯ ಹೊಸ ಮುಖಗಳಾಗಿವೆ.

ಸ್ವಾಮಿ ವಿವೇಕಾನಂದರ ಮಾತಿನಂತೆ, ಇಷ್ಟೊಂದು ಸೌಕರ್ಯಗಳನ್ನು ಮಾಡಿಕೊಂಡಿದ್ದೀರಿ. ಹೇಳಿ, ನೀವು ನೂರು ವರ್ಷದ ಹಿಂದೆ ಇದ್ದಿದ್ದಕ್ಕಿಂತ ಈಗ ಹೆಚ್ಚು ಸಂತೋಷವಾಗಿದ್ದೀರಾ? ಎಂದು ಕೇಳಿದ್ದರು. ಈಗಲೂ ಈ ಪ್ರಶ್ನೆ ಪ್ರಸ್ತುತವಾಗಿಯೇ ಇದೆ. ಮತ್ತೆ ಹೇಳಿದ್ದರು ನೀವು ಕಂಡುಹಿಡಿದ ಒಂದೊಂದು ಯಂತ್ರವೂ ಇಪ್ಪತ್ತು ಜನರನ್ನು ಶ್ರೀಮಂತರನ್ನಾಗಿ ಮಾಡಿದರೆ ಇಪ್ಪತ್ತು ಸಾವಿರ ಜನರನ್ನು ಬಡವರನ್ನಾಗಿ ಮಾಡುತ್ತದೆ. ಈ ಮಾತು ವಾಸ್ತವ ಸತ್ಯ.

**ಕುತೂಹಲಕಾರಿ ಭವಿಷ್ಯ ವಾಣಿಗಳು:**

1. ಕಾರು ದುರಸ್ತಿ ಗ್ಯಾರೇಜ್‌ಗಳು ಕೆಲವೇ ವರ್ಷಗಳಲ್ಲಿ ಕಣ್ಮರೆ ಆಗುತ್ತವೆ. ಅದಕ್ಕೆ ಕಾರಣ ಮುಂಬರುವ ವಿದ್ಯುತ್ ಚಾಲಿತ ವಾಹನಗಳು ಕೇವಲ 50ಕ್ಕಿಂತ ಕಡಿಮೆ ಬಿಡಿಭಾಗಗಳನ್ನು ಹೊಂದಿದ್ದು ಅವುಗಳನ್ನು ಸುಲಭವಾಗಿ ರಿಪ್ಲೇಸ್ ಮಾಡುವುದರಿಂದ ಗ್ಯಾರೇಜ್‌ಗಳ ಅವಶ್ಯಕತೆ ಕಡಿಮೆ ಬೀಳುತ್ತದೆ.

2. ಭವಿಷ್ಯದಲ್ಲಿ ಎಲೆಕ್ಟ್ರಿಕ್ ಕಾರುಗಳನ್ನು ಜೀವಮಾನದ ಖಾತರಿಯಿಂದ ಮಾರಾಟ ಮಾಡಲಾಗುತ್ತದೆ .ಇನ್ನು ಮುಂದೆ ಮೆಕ್ಯಾನಿಕ್‌ಗಳು ಮಾಡುವ ಕೆಲಸಗಳನ್ನು ರೋಬೋಟ್‌ಗಳು ಮಾಡುತ್ತವೆ. ಹಾಗಾಗಿ ಮೆಕ್ಯಾನಿಕ್‌ಗಳಿಗೆ ಕೆಲಸ ಇಲ್ಲವಾಗುತ್ತವೆ.

3. ಪೆಟ್ರೋಲ್ ಪಂಪ್‌ಗಳು ಇಲ್ಲವಾಗುತ್ತವೆ. ಎಲೆಕ್ಟ್ರಿಕ್ ಕಾರುಗಳು ಎಲ್ಲೆಡೆ ಚಾಲ್ತಿಯಾಗಿದ್ದರಿಂದ ಪ್ರತಿ ಬೀದಿಯ ಮೂಲೆಗಳಲ್ಲಿ ವಿದ್ಯುತ್ ಚಾರ್ಜರ್ ಇರುತ್ತದೆ.

4. ಪ್ರಮುಖ ಆಟೋ ತಯಾರಕರಾದ ಹೊಂಡಾ, ಟೊಯೋಟಾ ಮತ್ತು ಸ್ಯಾಮ್‌ಸಂಗ್ ಎಲೆಕ್ಟ್ರಿಕ್ ಕಾರುಗಳನ್ನು ನಿರ್ಮಿಸುವ ಹೊಸ ಉತ್ಪಾದನಾ ಘಟಕಗಳಿಗೆ ಶತಕೋಟಿ ಡಾಲರ್‌ಗಳನ್ನು ಬಿಡುಗಡೆ ಮಾಡಿವೆ.

5. ಕಲ್ಲಿದ್ದಲು ಗಣಿಗಾರಿಕೆ ಉದ್ಯಮ : ಪೆಟ್ರೋಲಿಯಂ ಕಂಪನಿಗಳು ಕಣ್ಮರೆಯಾಗಲಿವೆ. ಗಲ್ಫ್ ದೇಶಗಳನ್ನು ಅವಲಂಬಿಸಿರುವ ಪೆಟ್ರೋಲ್‌ಗೆ ಬೇಡಿಕೆ ಇಲ್ಲವಾಗುವುದರಿಂದ ಅರಬ್‌ದೇಶಗಳು ಆರ್ಥಿಕ ತೊಂದರೆಗೊಳಗಾಗುತ್ತವೆ. ಇನ್ನು ಮುಂದೆ ನಮ್ಮ ಮನೆಗಳ ಛಾವಣಿಗಳ ಮೇಲೆ ಅನಿವಾರ್ಯವಾಗಿ ಸೋಲಾರ್ ಶಕ್ತಿ ಉತ್ಪಾದಿಸಿಕೊಳ್ಳಲೇಬೇಕಾದ ಪರಿಸ್ಥಿತಿ ಉದ್ಭವಿಸುತ್ತದೆ. ಪ್ರತಿ ಮನೆಯಲ್ಲಿ ಉತ್ಪತ್ತಿಯಾದ ಕೆಲವು ಭಾಗ ಬಳಸಿ ಉಳಿದದ್ದನ್ನು ಪವರ್‌ಗ್ರಿಡ್‌ಗೆ ಮಾರಾಟ ಮಾಡಬೇಕಾಗುತ್ತದೆ. ಪವರ್‌ಗ್ರಿಡ್‌ನಿಂದ ಕೈಗಾರಿಕೆಗಳನ್ನು ನಡೆಸಲು ಈ ವಿದ್ಯುತ್ ಸಹಾಯಕವಾಗುತ್ತದೆ.

6. ಕೊಡ್ಯಾಕ್ ಕಂಪನಿಗೆ ಆಗಿರುವ ದುಸ್ಥಿತಿ ಮುಂದಿನ 5-10 ವರ್ಷಗಳಲ್ಲಿ ಬಹಳಷ್ಟು ಕೈಗಾರಿಕೆಗಳಿಗೆ ಸಂಭವಿಸುತ್ತದೆ. ಇಂದಿನ ಮೊಬೈಲ್ ಡಿಜಿಟಲ್ ಕ್ಯಾಮೆರಾಗಳಲ್ಲಿ ಸ್ಪಷ್ಟತೆ /ರೆಸಲ್ಯೂಶನ್ ಸಾಕಷ್ಟು ಸುಧಾರಿಸಿದೆ.

7. ಕೃತಕ ಬುದ್ಧಿಮತ್ತೆಯೊಂದಿಗೆ ವೈದ್ಯಕೀಯ ರೋಗನಿರ್ಣಯ ಉಪಕರಣ ಗಳು, ಸ್ವಾವಲಂಬಿ ಎಲೆಕ್ಟ್ರಿಕ್ ಕಾರುಗಳು, ಆನ್‌ಲೈನ್ ಶಿಕ್ಷಣ, 3 ಡಿ ಮುದ್ರಣ, ಹೈಡ್ರೋಪೋನಿಕ್ ಕೃಷಿ (ಕೇವಲ ನೀರು ಮತ್ತು ಸೂರ್ಯನ ಕಿರಣವನ್ನು ಬಳಸಿ ನಡೆಸುವ ಕೃಷಿ) ಪ್ರಪಂಚವನ್ನು ಕಲ್ಪನೆಗೆ ಮೀರಿ ಬದಲಾಯಿಸುತ್ತದೆ.

8. ಉಬರ್ (ರೆಂಟಲ್ ಕಾರು) ಕೇವಲ ಸಾಫ್ಟ್‌ವೇರ್ ಕಂಪನಿಯಾಗಿದೆ. ಅವರು ಯಾವುದೇ ಕಾರುಗಳನ್ನು ಹೊಂದಿಲ್ಲ. ಆದರೆ ಉಬರ್ ಈಗ ವಿಶ್ವದ ಅತಿದೊಡ್ಡ ಟ್ಯಾಕ್ಸಿ ಕಂಪನಿಯಾಗಿದೆ.

9. ಕೃತಕ ಬುದ್ಧಿಮತ್ತೆ : ಕಂಪ್ಯೂಟರ್‌ಗಳು ಆಘಾತ ಹುಟ್ಟಿಸುವಂತೆ ಶಕ್ತಿಯುತವಾಗುತ್ತವೆ. ವಿಶ್ವದ ಎಲ್ಲಾ ಅಂಶಗಳನ್ನು ಅರ್ಥ ಮಾಡಿಕೊಳ್ಳುವಲ್ಲಿ ಹೆಚ್ಚು ನಿಖರವಾಗಿರುತ್ತವೆ.

10. ಐಬಿಎಂನ ಮೂಲಕ ಕೆಲವು ಸೆಕೆಂಡ್ ಗಳಲ್ಲಿ ಕಾನೂನು ಸಲಹೆಗಳನ್ನು ಪಡೆಯಬಹುದು. ಇದು ಮನುಷ್ಯರಿಗಿಂತ ಶೇ. 90ರಷ್ಟು ನಿಖರವಾಗಿರುತ್ತದೆ.

11. ಐಬಿಎಂ ವ್ಯಾಟ್ಸನ್ ಕ್ಯಾನ್ಸರ್ ರೋಗ ನಿರ್ಣಯ ಮಾಡಲು ಮಾನವ ವೈದ್ಯರಿಗಿಂತ ಹಲವು ಪಟ್ಟು ನಿಖರವಾಗಿದೆ.

**12. ಫೇಸ್‌ಬುಕ್:** ಮನುಷ್ಯರ ಮುಖಗಳನ್ನು ಗುರುತಿಸುವ ಸಾಫ್ಟ್‌ವೇರ್ ಹೊಂದಿದ್ದು. ಅದು ಮನುಷ್ಯರಿಗಿಂತ ಅತ್ಯುತ್ತಮವಾಗಿ ಗುರುತಿಸಬಲ್ಲದು. 2030ರಲ್ಲಿ ಕಂಪ್ಯೂಟರ್‌ಗಳು ಮನುಷ್ಯರಿಗಿಂತಲೂ ಹೆಚ್ಚು ಬುದ್ಧಿವಂತರಾಗುತ್ತವೆ.

**13. ಸ್ವಯಂ ಚಾಲಿತ ಕಾರುಗಳು** : ಈಗಾಗಲೇ ಚಾಲಕ ರಹಿತ ಕಾರುಗಳನ್ನು, ಟ್ರಕ್ಕುಗಳನ್ನು 2020ರಲ್ಲಿ ಹಲವಾರು ಕಂಪನಿಗಳು ಬಿಡುಗಡೆ ಮಾಡಿದ್ದಾರೆ.

14. ಚಾಲಕ ರಹಿತ ಕಾರುಗಳು ಚಾಲ್ತಿಗೆ ಬಂದಿದ್ದರಿಂದ ಚಾಲಕರ ಪರವಾನಗಿ ಪಡೆಯುವ ಅವಶ್ಯಕತೆ ಇರುವುದಿಲ್ಲ.

15. ಈ ಎಲ್ಲಾ ತಾಂತ್ರಿಕ ಬದಲಾವಣೆಗಳು ನಮ್ಮ ನಗರಗಳನ್ನು ಬದಲಿಸುತ್ತವೆ. ಶೇ. 90ರಷ್ಟು ಕಾರುಗಳು ಕಡಿಮೆಯಾಗುತ್ತವೆ. ನಾವು ಪಾರ್ಕಿಂಗ್ ಸ್ಥಳಗಳನ್ನು ಹಸಿರು ಉದ್ಯಾನವನವನ್ನಾಗಿ ಮಾಡಬಹುದು. ಕಾರು ಅಪಘಾತಗಳಿಂದಾಗಬಹುದಾದ ಅನಾಹುತ ತಪ್ಪಿ 1 ಮಿಲಿಯನ್ ಜೀವಗಳು ಉಳಿಯುತ್ತವೆ. ಹೆಚ್ಚಿನ ಸಾಂಪ್ರದಾಯಿಕ ಕಾರು ಕಂಪನಿಗಳು ಎಲೆಕ್ಟ್ರಿಕ್ ಉತ್ತಮ ಕಾರುಗಳನ್ನು ಬಳಸಲು ಪ್ರಯತ್ನಿಸುತ್ತಿವೆ.

16. ಟೆಕ್ (ಟೆಸ್ಲಾ, ಆಪಲ್, ಗೂಗಲ್) ಒಂದು ಕ್ರಾಂತಿಕಾರಿ ವಿಧಾನ ಗಳನ್ನು ಚಕ್ರಗಳಲ್ಲಿ ಕಂಪ್ಯೂಟರ್ ಹಾಕಿಬಿಡುತ್ತಾರೆ. ಈಗಾಗಲೇ ವೋಲ್ವೋ ಕಂಪನಿ ಎಲೆಕ್ಟ್ರಿಕ್ ಕಂಪನಿಗಳು ಮರ್ಸಿಡಿಸ್, ಬಿಎಂಡಬ್ಲ್ಯು, ವೋಕ್ಸ್ ವ್ಯಾಗನ್, ಆಡಿ ಹಂತ ಹಂತವಾಗಿ ಎಲೆಕ್ಟ್ರಿಕ್ ಕಾರುಗಳನ್ನು ತಯಾರು ಮಾಡಲು ಶುರು ಮಾಡುತ್ತಿವೆ. ಟೆಸ್ಲಾ (ಎಲೆಕ್ಟ್ರಿಕ್ ಕಾರುಗಳನ್ನು ತಯಾರಿಸುವ ಕಂಪನಿಗಳು) ಕರ್ನಾಟಕದಲ್ಲಿ ಸದ್ಯದಲ್ಲೇ ಅದರ ಶಾಖೆಯನ್ನು ತೆರೆಯುವ ಪ್ರಯತ್ನದಲ್ಲಿದೆ.

17. ವಿಮಾ ಕಂಪನಿಗಳಿಗೆ ಹೆಚ್ಚಿನ ತೊಂದರೆಯಾಗುತ್ತದೆ. ಅನೇಕ ಅಪಘಾತಗಳಿಲ್ಲದೆ, ವಿಮಾ ಪ್ರೀಮಿಯಂಗಳು ಕುಸಿತಗೊಳ್ಳುತ್ತವೆ. ವಾಹನಗಳ ವಿಮಾ ವ್ಯವಹಾರವು ಸಮಯ ಕಳೆದಂತೆ ಕಡಿಮೆಯಾಗುತ್ತದೆ.

18. ರಿಯಲ್ ಎಸ್ಟೇಟ್ ವ್ಯವಹಾರ ಮಾದರಿ ಬದಲಾಗಲಿದೆ. ಎಲೆಕ್ಟ್ರಿಕ್ ಕಾರಿನಲ್ಲಿ ಕೂತು ಲ್ಯಾಪ್‌ಟಾಪ್‌ನಲ್ಲಿ ಕೆಲಸ ಮಾಡಲು ಸಾಧ್ಯವಾದರೆ ಜನರು ಜನನಿಬಿಡ ಅಪಾರ್ಟ್‌ಮೆಂಟ್‌ಗಳನ್ನು ತೊರೆದು ದೂರದ ಉಪನಗರಗಳಲ್ಲಿನ ಸುಂದರ, ವಿಶಾಲವಾದ ಜಾಗಕ್ಕೆ ತೆರಳುತ್ತಾರೆ. 2040ರೊತ್ತಿಗೆ ಎಲೆಕ್ಟ್ರಿಕ್ ಕಾರುಗಳು ಮುಖ್ಯವಾಹಿನಿಗೆ ಬರಲಿರುವುದರಿಂದ ನಗರಗಳಲ್ಲಿ ಕಡಿಮೆ ಗದ್ದಲ ಹಾಗೂ ವಾಯುಮಾಲಿನ್ಯ ಅತ್ಯಂತ ಕಡಿಮೆಯಾಗಲಿದೆ. ಪೆಟ್ರೋಲಿಯಂ ಪ್ರಾಡಕ್ಟ್ ಅತ್ಯಂತ ಕಡಿಮೆ ದರಕ್ಕೆ ದೊರೆತು ಸೌರಶಕ್ತಿ ಉತ್ಪಾದಿಸಲು ಕಂಪನಿಗಳ ನಡುವೆ ಸ್ಪರ್ಧೆ ಏರ್ಪಡಲಿದೆ.

**19. ಆರೋಗ್ಯ** : ನಿಮ್ಮ ಮೊಬೈಲ್ ಫೋನ್‌ನಲ್ಲಿ ಹಲವು ರೋಗಗಳನ್ನು ಪತ್ತೆ ಹಚ್ಚುವ ಮೊಬೈಲ್ ಆಪ್‌ಗಳು ಕಾರ್ಯನಿರ್ವಹಿಸುವುದರಿಂದ ಕಣ್ಣಿನ ಸ್ಕ್ಯಾನ್, ರಕ್ತದ ಮಾದರಿ, ಬಿ.ಪಿ. ಡಯಾಬಿಟಿಸ್. ಇತ್ಯಾದಿ ಸ್ವತಃ ರೋಗಿಯೇ ಪರೀಕ್ಷಿಸಿಕೊಳ್ಳುವ ಸೌಲಭ್ಯಗಳು ಬರಲಿವೆ. ನಾವೆಲ್ಲರೂ ನಾಳಿನ ಭವ್ಯ ಭವಿಷ್ಯವನ್ನು ಸ್ವಾಗತಿಸೋಣವೇ?

**- ಜಿ.ಸಿ. ಬಸವಲಿಂಗಪ್ಪ,** ಕಾರ್ಯದರ್ಶಿ
ಕರುಣಾ ಜೀವ ಕಲ್ಯಾಣ ಟ್ರಸ್ಟ್, ದಾವಣಗೆರೆ.
karunatrustdvg@gmail.com

## ಮಾನವೀಯತೆ ಮೆರೆದ ಶಿವಗಂಗಾ



ಚನ್ನಗಿರಿ, ಮಾ.21- ಈಚೆಗೆ ಪಟ್ಟಣದ ಬೈಕ್ ಗ್ಯಾರೇಜ್‌ಗೆ ಬೆಂಕಿ ತಗುಲಿ ಲಕ್ಷಾಂತರ ರೂ. ನಷ್ಟವಾಗಿ ಸಂಕಷ್ಟದಲ್ಲಿದ್ದ ಗ್ಯಾರೇಜ್ ಮಾಲೀಕ ಕಲೀಂಗೆ ಶಿವಗಂಗಾ ಬಸವರಾಜ್ 50 ಸಾವಿರ ರೂ. ನೆರವು ನೀಡಿ ಮಾನವೀಯತೆ ಮೆರೆದಿದ್ದಾರೆ.

ಈ ಸಂದರ್ಭದಲ್ಲಿ ತಾಲ್ಲೂಕು ಕಿಸಾನ್ ಕಾಂಗ್ರೆಸ್ ಅಧ್ಯಕ್ಷ ಗೌಡ್ರು ಭರತ್ ಪಾಟೀಲ್ ಹಾಗೂ ಯುವ ಮುಖಂಡ ಇರ್ಫಾನ್, ಇಮ್ರಾನ್ ಹಾಗೂ ಸ್ಥಳೀಯರಾದ ವಾಸೀಂ, ಅಷ್ಪಕ್ ಮತ್ತಿತರರು ಉಪಸ್ಥಿತರಿದ್ದರು.

## ಎಸ್‌ಡಿಎಂಸಿ ಸದಸ್ಯರಿಗೆ ಕಾರ್ಯಾಗಾರ



ಹರಪನಹಳ್ಳಿ, ಮಾ.21- ಪಟ್ಟಣದ 11ನೇ ವಾರ್ಡ್‌ನ ಚಿತ್ತಾರಗೇರಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ (ಮೇನ್ ಸ್ಕೂಲ್) ಶಾಲಾಭಿವೃದ್ಧಿ ಮೇಲುಸ್ತುವಾರಿ ಸಮಿತಿಯ (ಎಸ್‌ಡಿಎಂಸಿ) ಸದಸ್ಯರಿಗೆ ಒಂದು ದಿನದ ತರಬೇತಿ ಕಾರ್ಯಾಗಾರ ನಡೆಯಿತು.

ಪುರಸಭೆ ಸದಸ್ಯ ಜಾಕೀರ್ ಹುಸೇನ್ ಸರ್ಖಾವಸ್ ಮಾತನಾಡಿ, ಶಾಲೆಯು ಸಮಾಜದ ಅಂಗವಾಗಿರುವುದರಿಂದ ಎಸ್‌ಡಿಎಂಸಿಯವರು ಹಾಗೂ ಶಿಕ್ಷಣ ಪ್ರೇಮಿಗಳು ಶಾಲಾ ಅಭಿವೃದ್ಧಿಗಾಗಿ ಶ್ರಮಿಸಬೇಕು ಎಂದು ಹೇಳಿದರು.ಎಸ್‌ಡಿಎಂಸಿಯವರು ಮಕ್ಕಳಿಗೆ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಮಾಡಿಸಬೇಕು. ಸಮವಸ್ತ್ರ, ಶೂ, ಸಾಕ್ಸ್ ಖರೀದಿಯಲ್ಲಿ ರಾಜೀಯಾಗದಂತೆ ಗುಣಮಟ್ಟ ಕಾಯ್ದುಕೊಳ್ಳಬೇಕು ಹಾಗೂ ಬಿಸಿಯೂಟದ ಬಗ್ಗೆ ತೀವ್ರ ನಿಗಾ ವಹಿಸಬೇಕು ಎಂದು ಸಲಹೆ ನೀಡಿದರು.

ಎಸ್‌ಡಿಎಂಸಿ ಅಧ್ಯಕ್ಷೆ ಬಿ. ಅನಿತಾ, ಉಪಾಧ್ಯಕ್ಷ ಎನ್. ಮಹಬೂಬ್ ಸಾಬ್, ಬಿಆರ್‌ಪಿ ಚನ್ನಪ್ಪ ಕಂಬಳಿ, ಸಿಆರ್‌ಪಿ ಶಿವಪ್ರಕಾಶ್, ಎಸ್‌ಡಿಎಂಸಿ ಸದಸ್ಯರು ಸೇರಿದಂತೆ ಮುಖ್ಯ ಶಿಕ್ಷಕರು, ಸಹ ಶಿಕ್ಷಕರು ಉಪಸ್ಥಿತರಿದ್ದರು.

## ಓದುಗರ ಪತ್ರ

### ಮೂರು ತಿಂಗಳುಗಳ ಕಾಲ ಹೆಲ್ಮೆಟ್‌ಗೆ ವಿನಾಯತಿ ನೀಡಿ

**ಮಾನ್ಯರೇ,**

ಈಗಾಗಲೇ ಬೇಸಿಗೆ ಪ್ರಾರಂಭವಾಗಿ ದಿನದಿಂದ ದಿನಕ್ಕೆ ರಾಜ್ಯದಾದ್ಯಂತ ರಣಬಿಸಿಲು ಏರುತ್ತಿದ್ದು ಬಿಸಿಲಿನ ತಾಪಕ್ಕೆ ಇಡೀ ಕರುನಾಡೇ ಕಾದ ಕಾವಲಿಯಂತಾಗಿದೆ. ಜನರು ಆಗಸದತ್ತ ಮುಖ ಮಾಡಿ ಯಾವಾಗಪ್ಪ ಮಳೆಗಾಲ ಶುರುವಾಗುತ್ತದೆ ಎಂದು ಹಪಹಪಿಸುತ್ತಿದ್ದಾರೆ. ಇನ್ನೊಂದೆಡೆ ದ್ವಿಚಕ್ರವಾಹನ ಸವಾರರ ಸುರಕ್ಷತಾ ದೃಷ್ಟಿಯಿಂದ ಚಾಲಕ ಹಾಗೂ ಹಿಂಬದಿ ಸವಾರರಿಗೆ ಕಡ್ಡಾಯವಾಗಿ ಹೆಲ್ಮೆಟ್ ಧರಿಸಬೇಕು ಎಂಬ ನಿಯಮವನ್ನು ಸರ್ಕಾರ ಕಡ್ಡಾಯ ಮಾಡಿದೆ, ತಪ್ಪಿದರೆ ದಂಡ ತೆರಬೇಕಾಗುತ್ತದೆ.

ಕಳೆದೊಂದು ವರ್ಷದಿಂದ ಮಾಸ್ಕ್ ಧರಿಸುವುದನ್ನು ಸರ್ಕಾರ ಕಡ್ಡಾಯ ಮಾಡಿರುವುದರಿಂದ, ಬೇಸಿಗೆಯ ಸುಡು ಬಿಸಿಲಿನಲ್ಲಿ ಮಾಸ್ಕ್ ಜೊತೆಗೆ ಹೆಲ್ಮೆಟ್ ಧರಿಸುವುದು ಬಹಳ ಕಷ್ಟಕರವಾಗಿದೆ. ಬಿಸಿಲಿನ ತಾಪಕ್ಕೆ ಚರ್ಮ ಸಂಬಂಧಿ ಕಾಯಿಲೆಗಳು, ಉಸಿರಾಟದ ತೊಂದರೆ ಮತ್ತಷ್ಟು ಉಲ್ಬಣವಾಗುವ ಜೊತೆಗೆ ಅತಿ ಹೆಚ್ಚಿನ ಉಷ್ಣತೆಯಿಂದ ತಲೆಯ ಕೂದಲುಗಳು ಉದುರಲು ಪ್ರಾರಂಭವಾಗುತ್ತವೆ.

ರಾಜ್ಯದ ಮುಖ್ಯಮಂತ್ರಿಗಳು, ಸಚಿವರುಗಳು ಸೇರಿದಂತೆ ಜನಪ್ರತಿನಿಧಿಗಳು ಎ.ಸಿ. ಕಾರಿನಲ್ಲಿಯೇ ಸಂಚರಿಸುವುದರಿಂದ ಜನಸಾಮಾನ್ಯರ ಕಷ್ಟಗಳನ್ನು ಹೇಗೆ ತಾನೆ ತಿಳಿಯಲು ಸಾಧ್ಯ? ಜನಪ್ರತಿಧಿಗಳಾದವರು ಕನಿಷ್ಠ ಒಂದು ದಿನವಾದರೂ ಜನಸಾಮಾನ್ಯರೊಂದಿಗೆ ಬೆರೆತು ಜೀವನ ನಡೆಸಿದರೆ ಕಷ್ಟ ಏನೆಂಬುದನ್ನು ಅರಿಯಲು ಸಾಧ್ಯ.

ರಾಜ್ಯ ಸರ್ಕಾರ ತುರ್ತಾಗಿ ಇತ್ತ ವಿಶೇಷವಾಗಿ ಗಮನ ಹರಿಸಿ ಕನಿಷ್ಠ ಮೂರ್ನಾಲ್ಕು ತಿಂಗಳುಗಳ ಕಾಲ ದ್ವಿಚಕ್ರ ವಾಹನ ಸವಾರರಿಗೆ ಹೆಲ್ಮೆಟ್ ನಿಂದ ವಿನಾಯಿತಿ ನೀಡಬೇಕಾಗಿದೆ.

**- ಮುರುಗೇಶ ಡಿ.,** ದಾವಣಗೆರೆ.

## ಹಸಿ, ಒಣ ತ್ಯಾಜ್ಯ ವಿಂಗಡಿಸಿ ನೀಡಲು ಸಾರ್ವಜನಿಕರಿಗೆ ಪಾಲಿಕೆಯಿಂದ ಸೂಚನೆ

ದಾವಣಗೆರೆ, ಮಾ. 21 - ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಉತ್ಪತ್ತಿಯಾಗುವ ಘನ ತ್ಯಾಜ್ಯ ವಸ್ತುಗಳನ್ನು ಸಮರ್ಪಕವಾಗಿ ನಿರ್ವಹಣೆ ಮಾಡುವ ಸಲುವಾಗಿ, ತ್ಯಾಜ್ಯ ಉತ್ಪತ್ತಿಯ ಮೂಲದಲ್ಲಿಯೇ ವಿಂಗಡಿಸಿದ ತ್ಯಾಜ್ಯ ಸಂಗ್ರಹಣೆಯನ್ನು ಕಡ್ಡಾಯಗೊಳಿಸಿದ್ದು, ಸಾರ್ವಜನಿಕರು ಹಸಿ ಮತ್ತು ಒಣ ತ್ಯಾಜ್ಯವನ್ನು ಮನೆಯಲ್ಲಿಯೇ ವಿಂಗಡಿಸಿ, ಪ್ರತ್ಯೇಕವಾಗಿ ತ್ಯಾಜ್ಯ ಸಂಗ್ರಹಕಾರರಿಗೆ ನೀಡುವಂತೆ ಸೂಚನೆ ನೀಡಲಾಗಿದೆ.

ನಗರ ವ್ಯಾಪ್ತಿಯ ಎಲ್ಲ ಗೃಹೋಪಯೋಗಿ ತ್ಯಾಜ್ಯ ಉತ್ಪಾದಕರು ತಮ್ಮಲ್ಲಿ ಪ್ರತಿನಿತ್ಯ ಉತ್ಪತ್ತಿಯಾಗುವ ತ್ಯಾಜ್ಯಗಳನ್ನು ಹಸಿ ತ್ಯಾಜ್ಯ (ಕೊಳೆಯುವಂತಹ ತ್ಯಾಜ್ಯ), ಒಣ ತ್ಯಾಜ್ಯ (ಕೊಳೆಯದ ತ್ಯಾಜ್ಯ) ಮತ್ತು ಸ್ಯಾನಿಟರಿ/ವೈದ್ಯಕೀಯ ತ್ಯಾಜ್ಯಗಳೆಂದು ಮೂರು ವಿಧದಲ್ಲಿ ಕಡ್ಡಾಯವಾಗಿ ವಿಂಗಡಿಸಬೇಕು. ಹಸಿ ತ್ಯಾಜ್ಯವನ್ನು ಸಾಧ್ಯವಾದಲ್ಲಿ ಹೋಂ ಕಾಂಪೋಸ್ಟಿಂಗ್ ಮೂಲಕ ಸಂಸ್ಕರಿಸಬೇಕು, ಇಲ್ಲವಾದಲ್ಲಿ ಪ್ರತಿನಿತ್ಯ ತಮ್ಮ ಮನೆ ಬಾಗಿಲಿಗೆ ಬರುವ ತ್ಯಾಜ್ಯ ಸಂಗ್ರಹಕಾರರಿಗೆ ಪ್ರತ್ಯೇಕ ಡಬ್ಬಿ/ಬಕೆಟ್‌ಗಳಲ್ಲಿ ನೀಡಬೇಕು. ಸ್ಯಾನಿಟರಿ ತ್ಯಾಜ್ಯ (ಸ್ಯಾನಿಟರಿ ನ್ಯಾಪ್ಕಿನ್, ಡೈಪರ್) ಗಳನ್ನು ಪೌಚ್/ಪೇಪರ್‌ನಲ್ಲಿ ಸುತ್ತಿ ಪ್ರತಿನಿತ್ಯ ಪ್ರತ್ಯೇಕವಾಗಿ ನೀಡಬೇಕು. ಒಣ ತ್ಯಾಜ್ಯವನ್ನು ಪ್ರತ್ಯೇಕ ಚೀಲ/ಬಕೆಟ್‌ಗಳಲ್ಲಿ ಸಂಗ್ರಹಿಸಿ ಪ್ರತಿ ಶುಕ್ರವಾರ ತ್ಯಾಜ್ಯ ಸಂಗ್ರಹಕಾರರಿಗೆ ನೀಡುವ ಮೂಲಕ ನಗರದಲ್ಲಿನ ತ್ಯಾಜ್ಯ ನಿರ್ವಹಣೆ ಮತ್ತು ಸ್ವಚ್ಛತೆಗೆ ಸಹಕರಿಸುವಂತೆ ಮಹಾನಗರಪಾಲಿಕೆ ಮನವಿ ಮಾಡಿದೆ.

ಕಲ್ಯಾಣ ಮಂಟಪ, ದೊಡ್ಡ ಪ್ರಮಾಣದ ಹೋಟೆಲ್‌ಗಳು, ವಿದ್ಯಾ ಸಂಸ್ಥೆಗಳು, ಹಾಸ್ಟೆಲ್‌ಗಳು ಹಾಗೂ ಇನ್ನಿತರೆ ಸಾಂಸ್ಥಿಕ ತ್ಯಾಜ್ಯ ಉತ್ಪಾದಕರು ಹಸಿ ತ್ಯಾಜ್ಯವನ್ನು ತಮ್ಮ ಆವರಣದಲ್ಲಿಯೇ ಬಯೋಗ್ಯಾಸ್/ಗೊಬ್ಬರ ತಯಾರಿಸುವ ಮೂಲಕ ಸಂಸ್ಕರಿಸಿ ವಿಲೇವಾರಿ ಮಾಡಬೇಕು, ಒಣ ತ್ಯಾಜ್ಯವನ್ನು ಮಾತ್ರ ಮಹಾನಗರ ಪಾಲಿಕೆ ನಿಯೋಜಿಸಿದ ತ್ಯಾಜ್ಯ ಸಂಗ್ರಹಕಾರರಿಗೆ ನೀಡಬೇಕು.

ಬೀದಿ ಬದಿ ವ್ಯಾಪಾರಿಗಳು ಕಡ್ಡಾಯವಾಗಿ 2 ಡಬ್ಬಿಗಳನ್ನು ಇಟ್ಟು ರಸ್ತೆಗಳಲ್ಲಿ ತ್ಯಾಜ್ಯವನ್ನು ಎಸೆಯದಂತೆ ತಮ್ಮ ಸುತ್ತಲಿನ ಪರಿಸರವನ್ನು ಸ್ವಚ್ಛವಾಗಿರಿಸಬೇಕು.

ವಿವಿಧ ತ್ಯಾಜ್ಯ ಉತ್ಪಾದಕರುಗಳು ಕರ್ನಾಟಕ ಮಹಾನಗರ ಪಾಲಿಕೆಗಳ ಘನ ತ್ಯಾಜ್ಯ ನಿರ್ವಹಣೆ ನಿಯಮಗಳನ್ನು ಉಲ್ಲಂಘಿಸಿದರೆ ದಂಡಕ್ಕೆ ಅರ್ಹರಾಗಿರುತ್ತಾರೆ. ನಗರದಲ್ಲಿನ ಎಲ್ಲಾ ತ್ಯಾಜ್ಯ ಉತ್ಪಾದಕರು ಮಹಾನಗರ ಪಾಲಿಕೆ ರೂಪಿಸಿರುವ ಘನ ತ್ಯಾಜ್ಯ ನಿರ್ವಹಣೆ ಯೋಜನೆಗಳಿಗೆ ಸಹಕರಿಸುವ ಮೂಲಕ ನಗರದ ಸ್ವಚ್ಛತೆಗೆ ಕೈಜೋಡಿಸುವಂತೆ ಮಹಾನಗರಪಾಲಿಕೆ ಮಹಾಪೌರ ಎಸ್.ಟಿ.ವೀರೇಶ್ ಹಾಗೂ ಆಯುಕ್ತ ವಿಶ್ವನಾಥ ಪಿ. ಮುದಜ್ಜಿ ತಿಳಿಸಿದ್ದಾರೆ.

## ಅಂಬೇಡ್ಕರ್ ಜಗಜೀವನರಾಂ ಜಯಂತಿ : ಸಭೆ

ದಾವಣಗೆರೆ, ಮಾ. 21- ಬರುವ ಏ. 5 ರಂದು ಬಾಬು ಜಗಜೀವನ್ ರಾಂ ಜನ್ಮದಿನಾಚರಣೆ ಹಾಗೂ ಏ.14 ರಂದು ಡಾ. ಬಿ.ಆರ್. ಅಂಬೇಡ್ಕರ್ ಅವರ ಜನ್ಮದಿನಾಚರಣೆಯ ಪೂರ್ವಭಾವಿ ಸಭೆ ನಾಡಿದ್ದು ದಿನಾಂಕ 23 ರಂದು ಬೆಳಿಗ್ಗೆ 11 ಗಂಟೆಗೆ ಜಿಲ್ಲಾಡಳಿತ ಭವನದಲ್ಲಿ ನಡೆಯಲಿದೆ. ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಸಭೆಯ ಅಧ್ಯಕ್ಷತೆ ವಹಿಸುವರು.

## ಭದ್ರಾದಿಂದ ತುಂಗಭದ್ರಾ ಜಲಾಶಯಕ್ಕೆ ಬಿಟ್ಟಿರುವ ನೀರನ್ನು ನಿಲ್ಲಿಸುವಂತೆ ದ್ಯಾವಪ್ಪ ರೆಡ್ಡಿ ಆಗ್ರಹ

ದಾವಣಗೆರೆ, ಮಾ. 21- ಭದ್ರಾ ಜಲಾಶಯದಲ್ಲಿ ಇರುವ ನೀರು ಬೇಸಿಗೆ ಬೆಳೆಗೆ ಲೆಕ್ಕ ಹಾಕಿ ಅಚ್ಚುಕಟ್ಟು ಪ್ರದೇಶದಲ್ಲಿ ಬೆಳೆ ಬೆಳೆಯಲು ಭದ್ರಾ ನೀರಾವರಿ ಸಲಹಾ ಸಮಿತಿಯಲ್ಲಿ ತೀರ್ಮಾನಿಸಿ ಪ್ರಕಟಣೆ ಹೊರಡಿಸಿರುವುದನ್ನು ಭದ್ರಾ ಜಲಾಶಯ ಯೋಜನಾ ಮಟ್ಟದ ನೀರು ಬಳಕೆದಾರರ ಸಹಕಾರ ಸಂಘಗಳ ಮಹಾಮಂಡಲದ ಅಧ್ಯಕ್ಷ ವೈ. ದ್ಯಾವಪ್ಪ ರೆಡ್ಡಿ ತೀವ್ರವಾಗಿ ವಿರೋಧಿಸಿದ್ದಾರೆ.

ತುಂಗಭದ್ರಾ ಜಲಾಶಯಕ್ಕೆ 1.60 ಟಿಎಂಸಿ ನೀರನ್ನು, ದಿನನಿತ್ಯ 1200 ಕ್ಯೂಸೆಕ್ಸ್ ನೀರನ್ನು 2021 ರ ಮಾರ್ಚ್ 18 ರಿಂದ 2021ರ ಏ.1 ರ ವರೆಗೆ ಹರಿಸಲು ಆದೇಶ ಮಾಡಿರುವುದು ಭದ್ರಾ ಅಚ್ಚುಕಟ್ಟುದಾರರ ಹಿತ ಕಾಪಾಡುವುದನ್ನು ಸರ್ಕಾರ ಮರೆತಂತೆ ಕಾಣುತ್ತದೆ ಎಂದು ಸರ್ಕಾರದ ಆದೇಶದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ.



ಈಗ ಭದ್ರಾ ಜಲಾಶಯದಲ್ಲಿ ಇರುವ ನೀರು ಬೆಳೆದು ನಿಂತಿರುವ ಬೆಳೆಗೆ ಅರ್ಧ ಟಿಎಂಸಿ. ಕಡಿಮೆ ಬರುವುದರಿಂದ ತಾವು ತಕ್ಷಣ ನೀರು ಹರಿಸುವುದನ್ನು ನಿಲ್ಲಿಸಿ, ಭದ್ರಾ ಅಚ್ಚುಕಟ್ಟು ಪ್ರದೇಶದ ರೈತರನ್ನು ಉಳಿಸಬೇಕೆಂದು ಅವರು ಮನವಿ ಮಾಡಿದ್ದಾರೆ.

ಸರ್ಕಾರ ತನ್ನ ಮೊಂಡುತನದಿಂದ ನದಿಗೆ ನೀರು ಹರಿಸಿದ್ದಲ್ಲಿ ಅಚ್ಚುಕಟ್ಟುದಾರರು ಬೆಳೆದ ಕೋಟ್ಯಾಂತರ ರೂಪಾಯಿಯ ಬೆಳೆಯು ಕೈಗೆ ಸಿಗದೇ ಇದ್ದರೆ ರೈತರು ವಿಷ ಕುಡಿಯುವ ಸಂದರ್ಭ ಬಂದರೂ ಬರಬಹುದು. ಇದಕ್ಕೆ ಸರ್ಕಾರವೇ ನೇರ ಹೊಣೆ ಆಗಲಿದೆ ಎಂದೂ ಅವರು ಎಚ್ಚರಿಸಿದ್ದಾರೆ.

## ಕಾಗದದ ದೋಣಿಗೆ ಹೊಡೆತ

**(1ನೇ ಪುಟದಿಂದ)** ವಲಯಗಳಲ್ಲಿ ಮತ್ತೆ ಹಳೆಯ ಬೇಡಿಕೆ ಬಂದಿರುವುದು ಕಾಗದದ ಬೆಲೆ ಹೆಚ್ಚಾಗಲು ಕಾರಣವಾಗಿದೆ. ದೇಶದಲ್ಲಿ 2.50 ಲಕ್ಷ ಮುದ್ರಣ ಕಂಪನಿಗಳಿವೆ. ಇವುಗಳಲ್ಲಿ ಶೇ.85ಕ್ಕೂ ಹೆಚ್ಚು ಸಣ್ಣ ಹಾಗೂ ಅತಿಸಣ್ಣ ಘಟಕಗಳಾಗಿವೆ. ಈ ಸಣ್ಣ ಘಟಕ ಗಳು ಅತಿಯಾದ ಏರಿಳಿತ ಸಹಿಸಿಕೊಳ್ಳುವ ಶಕ್ತಿ ಹೊಂದಿಲ್ಲ ಎಂದು ಎ.ಐ.ಎಫ್.ಎಂ.ಪಿ. ಅಧ್ಯಕ್ಷ ಪ್ರೊ. ಕಮಲ್ ಮೋಹನ್ ಚೋಪ್ರಾ ಹೇಳಿದ್ದಾರೆ.

ಲಾಕ್‌ಡೌನ್ ನಂತರದಲ್ಲಿ ಹಲವಾರು ಉದ್ಯಮ ಗಳು ಏರಮುಖವಾಗಿವೆ. ಆದರೆ, ಕಚ್ಚಾ ವಸ್ತುಗಳ ಬೆಲೆ ಏರಿಕೆಯಿಂದಾಗಿ ಮುದ್ರಣ ವಲಯ ಮಾತ್ರ ಹೊಡೆತ ಎದುರಿಸುತ್ತಿದೆ ಎಂದವರು ಹೇಳಿದ್ದಾರೆ.

ಕಚ್ಚಾ ವಸ್ತುಗಳ ಬೆಲೆ ಏಕಾಏಕಿ ಶೇ.30-35ರಷ್ಟು ಹೆಚ್ಚಾಗಿರುವುದರಿಂದ ಉದ್ಯಮ ನಿರ್ವಹಿಸುವುದೇ ಕಷ್ಟವಾಗಿದೆ. ಕಾಗದದ ಬೆಲೆ ಏರಿಕೆಯಷ್ಟೇ ಅಲ್ಲದೇ, ಮಾನವ ಶಕ್ತಿಯ ಬೆಲೆ ಏರಿಕೆ, ಲ್ಯಾಮಿನೇಟಿಂಗ್ ಫಿಲ್ಮ್, ಸಾರಿಗೆ ಹಾಗೂ ಇತರೆ ವೆಚ್ಚಗಳಲ್ಲಿ ಕಳೆದ ಕೆಲ ವರ್ಷಗಳಲ್ಲಿ ಶೇ.60-70ರವರೆಗೆ ಹೆಚ್ಚಳವಾಗಿದೆ ಎಂದವರು ತಿಳಿಸಿದ್ದಾರೆ.

ಕಾಗದ ಅಗತ್ಯ ವಸ್ತುಗಳ ಪಟ್ಟಿಯಲ್ಲಿ ಬರುತ್ತದೆ. ಆದರೆ, ಸರ್ಕಾರ ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತಿಲ್ಲ. ಕಾಗದ ವಲಯದ ಮೇಲೆ ಅಗತ್ಯ ನಿಗಾ ವಹಿಸುತ್ತಿಲ್ಲ. ಸರ್ಕಾರ ಈ ಬಗ್ಗೆ ಗಮನ ಹರಿಸಿದರೆ ಗುಣಮಟ್ಟ ಹೆಚ್ಚಿಸುವ ಜೊತೆಗೆ, ಬೆಲೆ ನಿಯಂತ್ರಣ ಸಾಧ್ಯವಾಗಲಿದೆ ಎಂದವರು ತಿಳಿಸಿದ್ದಾರೆ.

ಸರ್ಕಾರ ಕ್ರಮ ತೆಗೆದುಕೊಳ್ಳದೇ ಹೋದರೆ ಮುದ್ರಕರು ಅನಿವಾರ್ಯವಾಗಿ ಬೆಲೆ ಹೆಚ್ಚಿಸಬೇಕಾಗು ತ್ತದೆ. ಇದರಿಂದಾಗಿ ಉದ್ಯಮ ಹಾಗೂ ಆರ್ಥಿಕತೆಯ ಮೇಲೆ ಪರಿಣಾಮವಾಗುತ್ತದೆ ಎಂದವರು ತಿಳಿಸಿದ್ದಾರೆ.

ಕಳೆದ ನಾಲ್ಕು ತಿಂಗಳಲ್ಲಿ ಪೇಪರ್ ಮಿಲ್‌ಗಳು ಗಣನೀಯವಾಗಿ ಬೆಲೆ ಹೆಚ್ಚಿಸಿವೆ. ಇದು ಮುದ್ರಣ ವಲಯಕ್ಕೆ ಅನಿರೀಕ್ಷಿತ ಆಘಾತ ನೀಡಿದೆ. ಇದರಿಂದಾಗಿ ಮುದ್ರಣ ಹಾಗೂ ಪ್ಯಾಕೇಜಿಂಗ್ ವಲಯ ಕುಸಿಯುವ ಕಳವಳವಿದೆ ಎಂದೂ ಅವರು ಹೇಳಿದ್ದಾರೆ.

### ಸವಾಲಿನದು...


**(1ನೇ ಪುಟದಿಂದ) ಪ್ಯಾಕೇಜಿಂಗ್ ವಲಯದಲ್ಲಿ ಮತ್ತಷ್ಟು ಹೆಚ್ಚಾಗಲಿದೆ. ಇದು ಇನ್ನಷ್ಟು ಬೆಲೆ ಏರಿಕೆಗೆ ಕಾರಣವಾಗುವ ಸಾಧ್ಯತೆಯೂ ಇದೆ.**

**ಸರ್ಕಾರ ತನ್ನ ನೀತಿಯ ಜೊತೆಗೆ ಅಗತ್ಯ ಪ್ರಮಾಣದ ಕಾಗದ ಪೂರೈಸಲು ತೆಗೆದುಕೊಳ್ಳಬೇಕಾದ ಕ್ರಮಗಳು ಮತ್ತು ಪರ್ಯಾಯಗಳ ಬಗ್ಗೆಯೂ ಗಮನ ಹರಿಸಬೇಕಿದೆ. ಇಲ್ಲವಾದರೆ ಈಗಾಗಲೇ ಕಾಗದ ಪೂರೈಕೆ ಅವಲಂಬಿಸಿರುವ ವಲಯಗಳಷ್ಟೇ ಅಲ್ಲದೇ, ಆಹಾರ ವಲಯವೂ ಸಂಕಷ್ಟಕ್ಕೆ ಸಿಲುಕಬೇಕಾಗುತ್ತದೆ.**

## ಬೋಳಚಟ್ಟಿ ಚೌಡೇಶ್ವರಿ ದೇವಿ ಎಡೆ

ದಾವಣಗೆರೆಯ ಚೌಡೇಶ್ವರಿ ನಗರ, ರುದ್ರಭೂಮಿ ರಸ್ತೆಯಲ್ಲಿರುವ ಬೋಳಚಟ್ಟಿ ಶ್ರೀ ಚೌಡೇಶ್ವರಿ ದೇವಿಯ ಎಡೆ ಜಾತ್ರಾ ಮಹೋತ್ಸವದ ಅಂಗವಾಗಿ ಇಂದು ಬೆಳಿಗ್ಗೆ ಶ್ರೀ ದೇವಿಗೆ ಮುತ್ತೈದೆಯರಿಂದ ಒಂದ್ಹೊತ್ತು ಇಡುವ ಕಾರ್ಯಕ್ರಮ ನಡೆಯುವುದು.

## ಕಾಮಗಾರಿ ಅವ್ಯವಹಾರ ಖಂಡಿಸಿ ಪ್ರತಿಭಟನೆ



ಹರಪನಹಳ್ಳಿ, ಮಾ.21- ಗರ್ಭಗುಡಿ ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಾಣದಲ್ಲಿ ನಡೆದ ಅವ್ಯವಹಾರದಲ್ಲಿ ಭಾಗಿಯಾದವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡಬೇಕು ಹಾಗೂ 60 ಕೆರೆ ನೀರು ತುಂಬಿಸುವ ಯೋಜನೆಯನ್ನು ಕೂಡಲೇ ಪೂರ್ಣಗೊಳಿಸುವಂತೆ ಒತ್ತಾಯಿಸಿ ವಿವಿಧ ಪ್ರಗತಿಪರ ಸಂಘಟನೆಗಳ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿ, ತಹಶೀಲ್ದಾರರಿಗೆ ಮನವಿ ಸಲ್ಲಿಸಲಾಯಿತು.

ಈ ವೇಳೆ ಎ.ಐ.ಕೆ.ಎಸ್ ರಾಜ್ಯ ಉಪಾಧ್ಯಕ್ಷ ಹೊಸಳ್ಳಿ ಮಲ್ಲೇಶ ಮಾತನಾಡಿ, ಹರಪನಹಳ್ಳಿ ತಾಲ್ಲೂಕು ಡಾ|| ನಂಜುಂಡಪ್ಪನವರ ವರದಿ ಪ್ರಕಾರ ಅತ್ಯಂತ ಹಿಂದುಳಿದ ತಾಲ್ಲೂಕಾಗಿದ್ದು, ಇಲ್ಲಿನ ಜನತೆಗೆ ಕೃಷಿಯೇ ಜೀವನಾಧಾರ. ಮಳೆಯನ್ನೇ ನಂಬಿರುವ ಜನರಿಗೆ ಮಾಜಿ ಸಿ.ಎಂ. ದಿ. ನಿಜಲಿಂಗಪ್ಪನವರು ನೀರುಣಿಸುವ ಕನಸು ಕಂಡಿದ್ದರು. 1998 ರಿಂದಲೇ ರೈತ ಪರ ಸಂಘಟನೆಗಳು ದಿ. ಎಂ.ಪಿ. ರವೀಂದ್ರರವರ ಹೋರಾಟದ ಪ್ರತಿಫಲದಿಂದ ತುಂಗಭದ್ರಾ ನದಿಯ ಗರ್ಭಗುಡಿ ಪಿಕಪ್ ಕಂ ಬ್ರಿಡ್ಜ್ ನಿರ್ಮಾಣಕ್ಕೆ ಚಾಲನೆ ದೊರೆತದ್ದು ಸತ್ಯ.

ಕೂಡಲೇ ಉನ್ನತ ಮಟ್ಟದ ತನಿಖೆ ನಡೆಸಿ ಭ್ರಷ್ಟಾಚಾರ ನಡೆಸಿರುವ ಅಧಿಕಾರಿಗಳ ಮೇಲೆ ಕಾನೂನು ಕ್ರಮ ಕೈಗೊಳ್ಳಬೇಕು. ಸ್ಥಗಿತಗೊಂಡ 60 ಕೆರೆಗಳಿಗೆ ನೀರು ತುಂಬಿಸುವ ಯೋಜನೆ ಹಾಗೂ ತುಂಗಭದ್ರಾ ನದಿಯ ದಡದಲ್ಲಿ ಕಟ್ಟುತ್ತಿರುವ ಪಿಕಪ್ ಕಂ ಬ್ರಿಡ್ಜ್ ಕಾಮಗಾರಿ ಯನ್ನು ಪೂರ್ಣಗೊಳಿಸಿ ತಾಲ್ಲೂಕಿನ ಸಮಗ್ರ ರೈತರಿಗೆ ಅನುಕೂಲ ಮಾಡಿಕೊಡಬೇಕು ಎಂದರು.

ಬಳ್ಳಾರಿ ಜಿಲ್ಲೆ ಸಿಪಿಐ ಕಾರ್ಯದರ್ಶಿ ನಾಗಭೂಷಣ್ ರಾವ್, ತಾಲ್ಲೂಕು ಕಾರ್ಯದರ್ಶಿ ಗುಡಿಹಳ್ಳಿ ಹಾಲೇಶ್, ಸಹ ಕಾರ್ಯದರ್ಶಿಗಳಾದ ಹೆಚ್.ಎಂ. ಸಂತೋಷ್, ರಮೇಶ್‌ನಾಯ್ಕ, ವಿವಿಧ ಸಂಘಟನೆಗಳ ಬಳಿಗಾ ನೂರು ಕೊಟ್ರೇಶ್, ಚಂದ್ರನಾಯ್ಕ, ಸುಮ, ಎಸ್. ನಾಗರಾಜಪ್ಪ, ಪುಷ್ಪ, ವಿಶಾಲಮ್ಮ, ಮತ್ತಿಹಳ್ಳಿ ತಿಂದಪ್ಪ, ಎ.ಡಿ. ದ್ವಾರಕೇಶ್ ಇನ್ನಿತರರಿದ್ದರು.

## ನಗರದಲ್ಲಿ ಇಂದು 'ನಾಮ ಸಹಸ್ರಮ್' ಸಾಮೂಹಿಕ ಪಾರಾಯಣ

ವಿವೇಕ ಶಿಕ್ಷಣ ವಾಹಿನಿ ಮತ್ತು ಸಪ್ತಗಿರಿ ವಿದ್ಯಾಲಯ ಇವರ ಸಂಯುಕ್ತಾಶ್ರಯದಲ್ಲಿ 'ನಾಮ ಸಹಸ್ರಮ್' ಸಾಮೂಹಿಕ ವಿಷ್ಣು ಸಹಸ್ರನಾಮ ಪಾರಾಯಣ, ಸರಸ್ವತಿ ಹೋಮ ಮತ್ತು ದಿವ್ಯಸತ್ಸಂಗ ಕಾರ್ಯಕ್ರಮ ಬೆಳಿಗ್ಗೆ 8 ರಿಂದ ಮಧ್ಯಾಹ್ನ 1 ರವರೆಗೆ ನಗರದ ಸಪ್ತಗಿರಿ ವಿದ್ಯಾಲಯದಲ್ಲಿ ನಡೆಯಲಿದೆ.

ದಿವ್ಯ ಸಾನ್ನಿಧ್ಯವನ್ನು ಶ್ರೀ ಸ್ವಾಮಿ ತ್ಯಾಗೀಶ್ವರಾನಂದಜೀ ಮಹಾರಾಜ್, ಶ್ರೀ ಸ್ವಾಮಿ ಪ್ರಕಾಶಾನಂದಜೀ ಮಹಾರಾಜ್, ಶ್ರೀ ಸ್ವಾಮಿ ಶಾರದೇಶಾನಂದಜೀ ಮಹಾರಾಜ್, ಶ್ರೀ ಸ್ವಾಮಿ ಸಮೇಧಾನಂದಜೀ ಮಹಾರಾಜ್ ಅವರುಗಳು ವಹಿಸುವರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀರಾಮಮೂರ್ತಿ ವಹಿಸುವರು. ಡಾ. ಮಹಾಂತೇಶ್ ಭಾರತಿ, ಶ್ರೀ ನಿತ್ಯಾನಂದ ವಿವೇಕವಂಶಿ, ಶ್ರೀ ಪ್ರಭಂಜನ ಉಪಸ್ಥಿತರಿರುವರು.

## ರಸ್ತೆ ಅಭಿವೃದ್ಧಿ ಕಾಮಗಾರಿಗಳಿಗೆ ಭೂಮಿ ಪೂಜೆ

**(1ನೇ ಪುಟದಿಂದ)** ಫ್ಯಾಕ್ಟರಿ ರಸ್ತೆಗೆ ಕೂಡುವ ರಸ್ತೆಯನ್ನು 50 ಲಕ್ಷ ರೂ. ವೆಚ್ಚದಲ್ಲಿ ಅಭಿವೃದ್ಧಿ ಕಾಮಗಾರಿ, 50 ಲಕ್ಷ ರೂ. ವೆಚ್ಚದಲ್ಲಿ ಬಸಾಪುರ ಗ್ರಾಮದಿಂದ ರಾಂಪುರಕ್ಕೆ ಹೋಗುವ ರಸ್ತೆ ಅಭಿವೃದ್ಧಿ ಕಾಮಗಾರಿ, 50 ಲಕ್ಷ ರೂ. ವೆಚ್ಚದಲ್ಲಿ ಬಸವನಾಳು ಗ್ರಾಮದ ಗೊಲ್ಲರಹಟ್ಟಿಯಿಂದ ಚಾನಲ್ ರಸ್ತೆ ಮುಖಾಂತರ ಲಿಂಗದಹಳ್ಳಿಗೆ ಹೋಗುವ ರಸ್ತೆ ಅಭಿವೃದ್ದಿ, 50 ಲಕ್ಷ ರೂ. ವೆಚ್ಚದಲ್ಲಿ ಕೋಡಿಹಳ್ಳಿ ಆಶ್ರಯ ಕಾಲೋನಿಯಿಂದ ಗಂಗನರಸಿ ಗಡಿವರೆಗೆ ರಸ್ತೆ ಅಭಿವೃದ್ಧಿ, 50 ಲಕ್ಷ ವೆಚ್ಚದಲ್ಲಿ ಆವರಗೊಳ್ಳ ಗ್ರಾಮದಿಂದ ಬಾತಿ ಕೆರೆ ಚಾನಲ್ ರಸ್ತೆ ಮುಖಾಂತರ ಕಕ್ಕರಗೊಳ್ಳಕ್ಕೆ ಹೋಗುವ ರಸ್ತೆ ಅಭಿವೃದ್ಧಿ, 40 ಲಕ್ಷ ವೆಚ್ಚದಲ್ಲಿ ದೊಡ್ಡ ಓಬಜ್ಜಿಹಳ್ಳಿ-ಕೊಂಡಜ್ಜಿ ರಸ್ತೆಯಿಂದ ಬದಿಯಾನಾಯ್ಕನ ತಾಂಡಾಕ್ಕೆ ಹೋಗುವ ರಸ್ತೆ ಅಭಿವೃದ್ಧಿ, 50 ಲಕ್ಷ ವೆಚ್ಚದಲ್ಲಿ ಬಿ. ಕಲ್ಪನಹಳ್ಳಿ ಅಮೃತನಗರ -ಪುಟಗನಾಳು ರಸ್ತೆಗೆ ಕೂಡುವ ರಸ್ತೆ ಅಭಿವೃದ್ದಿ ಕಾಮಗಾರಿ, 50 ಲಕ್ಷ ವೆಚ್ಚದಲ್ಲಿ ಕಕ್ಕರಗೊಳ್ಳ-ಕೋಡಿಹಳ್ಳಿ ರಸ್ತೆಯಿಂದ ಚಾನಲ್ ರಸ್ತೆ ಮುಖಾಂತರ ಗಂಗನರಸಿಗೆ ಹೋಗುವ ರಸ್ತೆ ಅಭಿವೃದ್ಧಿ ಕಾಮಗಾರಿ, 95 ಲಕ್ಷ ವೆಚ್ಚದಲ್ಲಿ ಜಿಲ್ಲಾ ಪಂಚಾಯತಿ ಆವರಣದಲ್ಲಿ ದುರಸ್ತಿ ಅಭಿವೃದ್ಧಿ ಕಾಮಗಾರಿ, 65 ಲಕ್ಷ ವೆಚ್ಚದಲ್ಲಿ ಹದಡಿ ರಸ್ತೆಯಿಂದ ಶಿರಮಗೊಂಡನಹಳ್ಳಿ ಚಾನಲ್‌ಗೆ ಹೋಗುವ ರಸ್ತೆ ಅಭಿವೃದ್ಧಿ ಕಾಮಗಾರಿ, 50 ಲಕ್ಷ ವೆಚ್ಚದಲ್ಲಿ ದೊಡ್ಡಬಾತಿ-ಹಳೇಬಾತಿ ಮುಖ್ಯ ರಸ್ತೆಯಿಂದ ಚಾನಲ್ ರಸ್ತೆ ಮುಖಾಂತರ ಹಳೇ ಕುಂದುವಾಡಕ್ಕೆ ಹೋಗುವ ರಸ್ತೆ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ.

**ಶಾಲಾ ಕೊಠಡಿಗಳ ಉದ್ಘಾಟನೆ :** ತಾಲ್ಲೂಕಿನ ದೊಡ್ಡಬಾತಿ ಗ್ರಾಮದಲ್ಲಿನ ಕರ್ನಾಟಕ ಪಬ್ಲಿಕ್ ಶಾಲೆಯ ಪ್ರೌಢ, ಪ್ರಾಥಮಿಕ ಮತ್ತು ಉರ್ದು ಶಾಲೆಯ ಶಾಲಾ ಕೊಠಡಿಗಳು, ಕಾಡಜ್ಜಿ ಗ್ರಾಮದಲ್ಲಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 21 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಿರುವ ಶಾಲಾ ಕೊಠಡಿಗಳು, ಬಸವನಾಳು-ಗೊಲ್ಲರಹಟ್ಟಿ ಗ್ರಾಮದಲ್ಲಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 32 ಲಕ್ಷ ರೂ. ವೆಚ್ಚದ ಶಾಲಾ ಕೊಠಡಿಗಳು ಉದ್ಘಾಟನೆಗೊಂಡವು.

## ಕಮ್ಮವಾರಿ ಸಮಾಜದ ಚುನಾಯಿತ ಪ್ರತಿನಿಧಿಗಳಿಗೆ ಸನ್ಮಾನ



ದಾವಣಗೆರೆ, ಮಾ. 21 - ಈಚೆಗೆ ನಡೆದ ಗ್ರಾಮ ಪಂಚಾಯಿತಿ ಮತ್ತು ಸಹಕಾರ ಸಂಘಗಳ ಚುನಾವಣೆಗಳಲ್ಲಿ ಆಯ್ಕೆಯಾಗಿರುವ ಕಮ್ಮವಾರಿ ಸಮಾಜದ ಸದಸ್ಯರುಗಳನ್ನು ನಗರದ ಕಮ್ಮವಾರಿ ಸಮಾಜ ಸಂಘದಿಂದ ಸನ್ಮಾನಿಸಿ, ಗೌರವಿಸಲಾಯಿತು. ಕಮ್ಮವಾರಿ ಸಮುದಾಯ ಭವನದಲ್ಲಿ ಸಮಾಜದ ಅಧ್ಯಕ್ಷ ವಲ್ಲೂರಿ ವೆಂಕಟರಾವ್ ಅವರ ಅಧ್ಯಕ್ಷತೆಯಲ್ಲಿ ಇಂದು ನಡೆದ ಕಾರ್ಯಕ್ರಮದಲ್ಲಿ ಎಲ್ಲಾ ಸದಸ್ಯರನ್ನು ಸನ್ಮಾನಿಸಲಾಯಿತು. ಡಾ|| ವೆಂಕಟ ರಾಮಾಂಜನೇಯ ಸ್ವಾಮಿ ಕಾರ್ಯಕ್ರಮವನ್ನುದ್ದೇಶಿಸಿ ಮಾತನಾಡಿದರು. ಕಾರ್ಯದರ್ಶಿ ಕೊಲ್ಲಿ ವೆಂಕಟೇಶ್ವರರಾವ್ ಕಾರ್ಯಕ್ರಮವನ್ನು ನಿರ್ವಹಿಸಿದರು.

## ಪಾಲಿಕೆಯ ಉಪಮೇಯರ್ ಶಿಲ್ಪಾ ಅವರಿಗೆ ಸನ್ಮಾನ



ದಾವಣಗೆರೆ, ಮಾ. 21 - ಮಹಾನಗರ ಪಾಲಿಕೆ ಉಪ ಮಹಾಪೌರರಾಗಿ ಆಯ್ಕೆಯಾಗಿರುವ ಶ್ರೀಮತಿ ಶಿಲ್ಪಾ ಜಯಪ್ರಕಾಶ್ ಅವರನ್ನು ನಗರ ಪಡಿತರ ವಿತರಕರ ಸಂಘದಿಂದ ಸನ್ಮಾನಿಸಿ, ಗೌರವಿಸಲಾಯಿತು. ಸಂಘದ ಗೌರವಾಧ್ಯಕ್ಷ ಬಿ.ವಿ. ಚಂದ್ರಶೇಖರ್ ಮತ್ತು ಅಧ್ಯಕ್ಷ ವೆಂಕಟೇಶ್ ನಾಯ್ಕ ಅವರುಗಳ ನೇತೃತ್ವದಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಸಂಘದ ಜಿಲ್ಲಾ ಕಾರ್ಯದರ್ಶಿ ಎಂ.ಎನ್. ನಾಗರಾಜ್, ಉಪಾಧ್ಯಕ್ಷ ಇ. ಬಸವರಾಜ್, ರವಿ ಭುವನೇಶ್ವರಿ ಮತ್ತಿತರರು ಉಪಸ್ಥಿತರಿದ್ದರು.

# ಕೃಷಿಯಲ್ಲಿ ಅಭಿವೃದ್ಧಿ ಹೊಂದಿದರೂ ಆದಾಯ ಅಭದ್ರತೆ

## ಶಿವಮೊಗ್ಗ ಕೃಷಿ ಮತ್ತು ತೋಟಗಾರಿಕಾ ಮಹಾವಿದ್ಯಾಲಯದ ಉಪಕುಲಪತಿ ಡಾ. ಎಂ.ಕೆ. ನಾಯಕ



ದಾವಣಗೆರೆ, ಮಾ.21- ಕೃಷಿಯಲ್ಲಿ ಅಭಿವೃದ್ಧಿ ಹೊಂದಿದರೂ ರೈತರಿಗೆ ಆದಾಯ ಇಲ್ಲದಂತಾಗಿದೆ ಎಂದು ಶಿವಮೊಗ್ಗ ಕೃಷಿ ಮತ್ತು ತೋಟಗಾರಿಕಾ ಮಹಾವಿದ್ಯಾಲಯದ ಉಪ ಕುಲಪತಿ ಡಾ. ಎಂ.ಕೆ. ನಾಯಕ ಹೇಳಿದರು.

ಕೃಷಿ ತಂತ್ರಜ್ಞರ ಸಂಸ್ಥೆ, ಕೆಪೆಕ್ ಬೆಂಗಳೂರು, ಕೃಷಿ ಮತ್ತು ತೋಟಗಾರಿಕೆ ಮಹಾವಿದ್ಯಾಲಯ ಶಿವಮೊಗ್ಗ, ಐಸಿಎಆರ್ ತರಳಬಾಳು ಕೃಷಿ ವಿಜ್ಞಾನ ಕೇಂದ್ರ, ನಬಾರ್ಡ್, ಆತ್ಮ ಕಾರ್ಯಕ್ರಮ, ತೋಟಗಾರಿಕಾ ಇಲಾಖೆ ದಾವಣಗೆರೆ ಇವರ ಸಂಯುಕ್ತಾಶ್ರಯದಲ್ಲಿ ಬೆಂಗಳೂರು ವಿಭಾಗೀಯ ರೈತ ಉತ್ಪಾದಕ ಕಂಪನಿಗಳ ಪ್ರತಿನಿಧಿಗಳಿಗೆ ಏರ್ಪಡಿಸಿದ್ದ ರಾಜ್ಯ ಮಟ್ಟದ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ರೈತರು ಸಂಘಟಿತರಾಗುವ ಜೊತೆಗೆ ಆರ್ಥಿಕವಾಗಿ ಸಬಲರಾಗಬೇಕಿದೆ ಮತ್ತು ರೈತ ಉತ್ಪಾದಕ ಕಂಪನಿಗಳು ಹೆಚ್ಚು ಸ್ಥಾಪನೆಯಾಗಬೇಕಾಗಿದೆ ಎಂದರು.

ದೇಶದಲ್ಲಿ 5 ಸಾವಿರ ಮತ್ತು ರಾಜ್ಯದಲ್ಲಿ 450 ರೈತ ಉತ್ಪಾದಕ ಕಂಪನಿಗಳು ಕಾರ್ಯಾರಂಭ ಮಾಡಿವೆ. ಕೃಷಿಕರ ಮತ್ತು ಕೃಷಿಯ ಸ್ಥಿತಿಗತಿ ಅವಲೋಕಿಸಿದಾಗ ಉತ್ಪಾದನೆಯಲ್ಲಿ ದೇಶ ಮತ್ತು ರಾಜ್ಯದಲ್ಲಿ ಸುಸ್ಥಿತಿಯಲ್ಲಿದೆ ಎಂದು ಮಾಹಿತಿ ನೀಡಿದರು.

ಕೊರೊನಾ ಸಂದರ್ಭದಲ್ಲಿ 80 ಕೋಟಿ ಜನಸಂಖ್ಯೆ ಇರುವ ದೇಶದಲ್ಲಿ 24 ದಶಲಕ್ಷ ಟನ್ ಆಹಾರ ಧಾನ್ಯ ಸರಬರಾಜು ಮಾಡಲಾಗಿದೆ ಎಂದರು.

ಕೊರೊನಾ ಸಂದರ್ಭದಲ್ಲಿ ಅನ್ನದಾನ ಜನರಿಗೆ ಎರಡು ಹೊತ್ತು ಊಟ ನೀಡುವ ಜೊತೆಗೆ ಆತ್ಮಸ್ಥೈರ್ಯ ಕೊಟ್ಟಿರುವುದು ಶ್ಲಾಘನೀಯ ಎಂದು ಹೇಳಿದರು. ರೈತರು ಬುದ್ಧಿವಂತರಾಗಿ ವ್ಯವಹಾರ ಜ್ಞಾನ ಪಡೆದುಕೊಳ್ಳುವ ಅಗತ್ಯವಿದೆ.

ಕೃಷಿ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಹೊಸ ಹೊಸ ಆವಿಷ್ಕಾರಗಳಾಗಬೇಕು. ಅನ್ನದಾತರು ಆದಾಯದಾತರಾಗುವ ಕಡೆ ಹೆಜ್ಜೆ ಹಾಕಬೇಕಾಗಿದೆ ಎಂದು ಹಿತ ನುಡಿದರು.

ಇದೇ ಸಂದರ್ಭದಲ್ಲಿ ಬೆಂಗಳೂರು ಕೃಷಿ ತಂತ್ರಜ್ಞರ ಸಂಸ್ಥೆ ಉಪಾಧ್ಯಕ್ಷ ಡಾ. ಜಿ. ಈಶ್ವರಪ್ಪ ಅವರು ನೂತನ ಕೃಷಿ ಕಾಯ್ದೆಗಳ ಹಸ್ತಪ್ರತಿ ಬಿಡುಗಡೆ ಮಾಡಿ ಮಾತನಾಡಿದರು.

ಬೆಂಗಳೂರು ಅಟಾರಿ ವಿಶ್ರಾಂತ ನಿರ್ದೇಶಕ ಡಾ. ಪ್ರಭುಕುಮಾರ್, ಹಿರಿಯ ವಿಜ್ಞಾನಿ ಬೆಂಗಳೂರಿನ ಡಾ. ಡಿ.ವಿ. ಸುಧಾಕರರಾವ್, ಬೆಂಗಳೂರು ಕೃಷಿ ವಿವಿ ವಿಶ್ರಾಂತ ಪ್ರಾಧ್ಯಾಪಕ ಡಾ. ಟಿ.ಎನ್. ವೆಂಕಟೇಶರೆಡ್ಡಿ, ಡಾ. ಮಂಜುನಾಥ್ ಇವರು ಕೃಷಿ ತಾಂತ್ರಿಕತೆ ಕುರಿತು ಉಪನ್ಯಾಸ ನೀಡಿದರು.

ಹಿರಿಯ ವಿಜ್ಞಾನಿ ಡಾ. ಟಿ.ಎನ್. ದೇವರಾಜ್, ತೋಟಗಾರಿಕೆ ಇಲಾಖೆ ಉಪನಿರ್ದೇಶಕ ಲಕ್ಷ್ಮೀಕಾಂತ ಬೊಮ್ಮಣ್ಣನವರ್, ಧಾರವಾಡ ಕೃಷಿ ವಿ.ವಿ. ಆಡಳಿತ ಮಂಡಳಿ ಸದಸ್ಯ ಎಲ್. ಎಸ್. ಅಜಗಣ್ಣನವರ್, ಕೃಷಿ ತಂತ್ರಜ್ಞರ ಸಂಸ್ಥೆ ವ್ಯವಸ್ಥಾಪಕ ಮಂಡಳಿ ಸದಸ್ಯ ಉಮೇಶ್, ದಾವಣಗೆರೆ ಕೃಷಿ ಇಲಾಖೆ ಜಂಟಿ ನಿರ್ದೇಶಕ ಶ್ರೀನಿವಾಸ ಚಿಂತಾಲ ಮತ್ತಿತರರು ಉಪಸ್ಥಿತರಿದ್ದರು.

ಸಹಾಯಕ ಕೃಷಿ ನಿರ್ದೇಶಕ ಹೆಚ್.ಕೆ. ರೇವಣಸಿದ್ದನಗೌಡ ಸ್ವಾಗತಿಸಿದರು. ಕಾಡಜ್ಜಿ ಕೃಷಿ ತರಬೇತಿ ಕೇಂದ್ರದ ಉಪನಿರ್ದೇಶಕ ತಿಪ್ಪೇಸ್ವಾಮಿ ನಿರೂಪಿಸಿದರು.

## ಶಿಕ್ಷಕರ ಬಡ್ತಿಗೆ ಜೇಷ್ಠತಾ ಪಟ್ಟಿ ಪ್ರಕಟ : ಆಕ್ಷೇಪಣೆ ಆಹ್ವಾನ

ದಾವಣಗೆರೆ, ಮಾ. 21 - ಸರ್ಕಾರಿ ಪ್ರಾಥಮಿಕ ಶಾಲಾ ಸಹ ಶಿಕ್ಷಕರ ಹುದ್ದೆಯಿಂದ ಮುಖ್ಯ ಶಿಕ್ಷಕರ ಹುದ್ದೆಗೆ ಹಾಗೂ ಬಡ್ತಿ ಮುಖ್ಯ ಶಿಕ್ಷಕರಿಂದ ಹಿರಿಯ ಮುಖ್ಯ ಶಿಕ್ಷಕರ ಹುದ್ದೆಗೆ ಬಡ್ತಿ ನೀಡುವ ಸಂಬಂಧ 2021 ರ ಜ.31 ರಲ್ಲಿದ್ದಂತೆ ಮಾಹಿತಿ ಸರಿಪಡಿಸಲಾಗಿದ್ದು, ಡಿಡಿಪಿಐ ಅವರ ಸೂಚನೆಯಂತೆ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಲಾಗಿದ್ದು, ಆಕ್ಷೇಪಣೆ ಸಲ್ಲಿಸಲು ನಾಳೆ ದಿನಾಂಕ 22 ಕೊನೆಯ ದಿನವಾಗಿದೆ.

ಜೇಷ್ಠತಾ ಪಟ್ಟಿಯನ್ನು ಕಛೇರಿಯ ಪ್ರಕಟಣಾ ಫಲಕದಲ್ಲಿ ಪ್ರಕಟಿಸಲಾಗಿದ್ದು ಸಂಬಂಧಿಸಿದ/ಬಾಧಿತ ಶಿಕ್ಷಕರು ಜೇಷ್ಠತಾ ಪಟ್ಟಿ ಪರಿಶೀಲಿಸಿಕೊಂಡು, ಮಾಹಿತಿ ತಪ್ಪಾಗಿದ್ದಲ್ಲಿ ಅಗತ್ಯ ದಾಖಲೆಗಳೊಂದಿಗೆ ಕಛೇರಿಗೆ ಆಕ್ಷೇಪಣೆ ಸಲ್ಲಿಸಬಹುದು. ಅಲ್ಲದೆ ಯಾವುದೇ ಶಿಕ್ಷಕರ ಹೆಸರು ಪಟ್ಟಿಯಲ್ಲಿ ಬಿಟ್ಟುಹೋಗಿದ್ದಲ್ಲಿ ಅಂತಹ ಹೆಸರುಗಳನ್ನು ಸೇರ್ಪಡೆ ಮಾಡಲು ಸಂಬಂಧಿಸಿದವರು ಲಿಖಿತ ಮನವಿಯನ್ನು ಮಾ.22 ರ ಒಳಗೆ ದಾವಣಗೆರೆ ಬಿಇಒ ಉತ್ತರ ವಲಯ ಈ ಕಚೇರಿಗೆ ಸಲ್ಲಿಸಲು ಈ ಹಿಂದೆ ತಿಳಿಸಲಾಗಿತ್ತು. ಆದರೆ ಇದುವರೆಗೂ ಯಾವುದೇ ಸಂಬಂಧಿಸಿದ/ಬಾಧಿತ ಶಿಕ್ಷಕರು ಕಛೇರಿಗೆ ಆಕ್ಷೇಪಣೆ ಸಲ್ಲಿಸಿರುವುದಿಲ್ಲ. ಸಂಬಂಧಿಸಿದವರು ತಮ್ಮ ಆಕ್ಷೇಪಣೆಗಳನ್ನು ನಾಳೆ ದಿನಾಂಕ 22 ರ ಒಳಗಾಗಿ ಸಲ್ಲಿಸಬಹುದು ಎಂದು ದಾವಣಗೆರೆ ಉತ್ತರ ವಲಯ ಕ್ಷೇತ್ರ ಶಿಕ್ಷಣಾಧಿಕಾರಿಗಳು ತಿಳಿಸಿದ್ದಾರೆ.

## ಚಳ್ಳಕೆರೆ: ಕಡಲೆಕಾಳು ಖರೀದಿ ಕೇಂದ್ರಕ್ಕೆ ಚಾಲನೆ



ಚಳ್ಳಕೆರೆ, ಮಾ.21 - ಕಡಲೆ ಬೇಳೆ ಕಟಾವಿಗೆ ಬಂದ ಸಮಯ ಜನವರಿ ಅಥವಾ ಫೆಬ್ರವರಿ ತಿಂಗಳಲ್ಲಿ ಸರ್ಕಾರ ಬೆಂಬಲ ಬೆಲೆ ಘೋಷಿಸಿ ಕಡಲೆಕಾಳು ಖರೀದಿ ಕೇಂದ್ರ ತೆರೆದಿದ್ದರೆ ಇದರಿಂದ ರೈತರಿಗೆ ಹೆಚ್ಚು ಅನುಕೂಲವಾಗುತ್ತಿತ್ತು ಎಂದು ಶಾಸಕ ಟಿ. ರಘುಮೂರ್ತಿ ಅಭಿಪ್ರಾಯಪಟ್ಟರು.

ಜಿಲ್ಲಾ ಟಾಸ್ಕ್‌ಫೋರ್ಸ್ ಸಮಿತಿ ಚಿತ್ರದುರ್ಗ, ರಾಜ್ಯ ಸಹಕಾರ ಮಾರಾಟ ಹಾಗೂ ಮಹಾ ಮಂಡಳಿ ಮತ್ತು ಕೃಷಿ ಪತ್ತಿನ ಸಹಕಾರ ಸಂಘದ ವತಿಯಿಂದ ತಾಲ್ಲೂಕಿನ ರಾಮಜೋಗಿಹಳ್ಳಿಯಲ್ಲಿ ಇಂದು ಆಯೋಜಿಸಿದ್ದ ನೋಂದಣಿ ಮತ್ತು ಕಡಲೆಕಾಳು ಖರೀದಿ ಕೇಂದ್ರಕ್ಕೆ ಚಾಲನೆ ನೀಡಿ ಮಾತನಾಡಿದರು.


ಅತಿವೃಷ್ಟಿಯಿಂದಾಗಿ ತಾಲ್ಲೂಕಿನಲ್ಲಿ ಈ ಬಾರಿ ಕಡಲೆಕಾಳು ಬೆಳೆ ಇಳುವರಿ ಕುಂಠಿತಗೊಂಡಿದೆ. ಪ್ರತಿ ಕ್ವಿಂಟಾಲ್‌ಗೆ 5100 ಬೆಂಬಲ ಬೆಲೆ ದೊರೆಯುತ್ತಿದೆ. ಆದ್ದರಿಂದ ಸರ್ಕಾರ ಖರೀದಿ ಕೇಂದ್ರಕ್ಕೆ ಕಡಲೆಯನ್ನು ಮಾರಾಟ ಮಾಡುವ ಮೂಲಕ ಬೆಂಬಲ ಬೆಲೆ ಯೋಜನೆಯ ಸೌಲಭ್ಯ ಪಡೆದುಕೊಳ್ಳಬೇಕು ಎಂದು ರೈತರಿಗೆ ಸಲಹೆ ನೀಡಿದರು.

ಚಿತ್ರದುರ್ಗ ಎಪಿಎಂಸಿ ವ್ಯವಸ್ಥಾಪಕ ರಾಜಪ್ಪ, ಮಹಾ ಮಂಡಳದ ನಿರ್ದೇಶಕ ಗಿರೀಶ್, ಚಿಕ್ಕಮಧುರೆ ಗ್ರಾಮದ ಸಹಕಾರ ಸಂಘದ ಅಧ್ಯಕ್ಷ ಆರ್.ಮಲ್ಲೇಶಪ್ಪ, ಎಪಿಎಂಸಿ ಅಧ್ಯಕ್ಷ ಸುರೇಶ್‌ಬಾಬು, ಮಾಜಿ ಅಧ್ಯಕ್ಷ ತಿಮ್ಮಾರೆಡ್ಡಿ, ತಾಲ್ಲೂಕು ಪಂಚಾಯಿತಿ ಮಾಜಿ ಅಧ್ಯಕ್ಷ ತಿಪ್ಪೇಶ್‌ರೆಡ್ಡಿ, ಮಹಾ ಮಂಡಳದ ನಿರ್ದೇಶಕ ರಂಗಸ್ವಾಮಿ, ಕಾರ್ಯದರ್ಶಿ ಸತ್ಯನಾರಾಯಣ ರೆಡ್ಡಿ, ರೈತ ಪ್ರಶಾಂತ್‌ರೆಡ್ಡಿ, ಚಿಕ್ಕಗೊಂಡನಹಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷ ತಿಪ್ಪೇಸ್ವಾಮಿ ಉಪಸ್ಥಿತರಿದ್ದರು.

## ಹಂಪನೂರಿನಲ್ಲಿ ಇಂದು ರಂಗನಾಥ ಸ್ವಾಮಿ ದೊಡ್ಡ ರಥೋತ್ಸವ

ಚಿತ್ರದುರ್ಗ ತಾಲ್ಲೂಕು ಹಂಪನೂರು ಗ್ರಾಮದಲ್ಲಿ ಶ್ರೀ ಲಕ್ಷ್ಮಿ ರಂಗನಾಥಸ್ವಾಮಿ ರಥೋತ್ಸವ ಹಾಗೂ ಶ್ರೀ ರಾಮೇಶ್ವರ ಸ್ವಾಮಿ ಬಸವನ ಉತ್ಸವದ ಅಂಗವಾಗಿ ಇಂದು ಬೆಳಿಗ್ಗೆ 11 ಕ್ಕೆ ರಂಗನಾಥ ಸ್ವಾಮಿಯ ಆನೆ ಉತ್ಸವ, ರಾತ್ರಿ 4 ಕ್ಕೆ ಪುನರ್ವಸು ನಕ್ಷತ್ರದಲ್ಲಿ ಶ್ರೀ ರಂಗನಾಥ ಸ್ವಾಮಿಯ ರಥೋತ್ಸವ. ನಾಳೆ ದಿನಾಂಕ 23 ರ ಮಂಗಳವಾರ ರಾತ್ರಿ 4 ಕ್ಕೆ ಶ್ರೀ ರಂಗನಾಥ ಸ್ವಾಮಿಯ ಓಕುಳಿ, ದಿನಾಂಕ 24 ರ ಬುಧವಾರ ಮಧ್ಯಾಹ್ನ 12 ಕ್ಕೆ ಶ್ರೀ ರಂಗನಾಥ ಸ್ವಾಮಿಯ ನೈವೇದ್ಯ ಮತ್ತು ಮಹಾಮಂಗಳಾರತಿ ನಡೆಯುವವು.

## ನಂದಿಗುಡಿ ಬಸವಣ್ಣನ ಜಾತ್ರೆಗೆ ಚಾಲನೆ : 25ರಂದು ರಥೋತ್ಸವ




ಮಲೇಬೆನ್ನೂರು, ಮಾ.21 - ಸುಕ್ಷೇತ್ರ ನಂದಿಗುಡಿಯಲ್ಲಿ ಇಂದಿನಿಂದ ಶ್ರೀ ಬಸವೇಶ್ವರ ದೇವರ ಜಾತ್ರಾ ಮಹೋತ್ಸವಕ್ಕೆ ಶ್ರೀ ಸಿದ್ದರಾಮೇಶ್ವರ ಶಿವಾಚಾರ್ಯ ಸ್ವಾಮೀಜಿ ಅವರು ಭಾನುವಾರ ನಂದಿ ಧ್ವಜಾರೋಹಣ ಮಾಡುವ ಮೂಲಕ ಚಾಲನೆ ನೀಡಿದರು. ಇದಕ್ಕೂ ಮುನ್ನ ದೇವಸ್ಥಾನದಲ್ಲಿ ಗಣಪತಿ ಪೂಜೆ, ಸೂರ್ಯ ದೇವರಿಗೆ ಅರ್ಘ್ಯ ಪೂಜೆ ನೆರವೇರಿಸಲಾಯಿತು. ರಥೋತ್ಸವದ ಅಂಗವಾಗಿ ರಾತ್ರಿ ಶ್ರೀ ಬಸವೇಶ್ವರ ದೇವರಿಗೆ ಕಂಕಣಧಾರಣೆ ಮಾಡಲಾಯಿತು.

ನಾಳೆ ದಿನಾಂಕ 22 ರ ಸೋಮವಾರ ಬೆಳಿಗ್ಗೆ ಶ್ರೀ ನಂದಿ ಪಟದೊಂದಿಗೆ ಪೂಜಾ ಮೆರವಣಿಗೆ ನಂತರ ಎಣ್ಣೆ ಅರಿಶಿಣ ಕಾರ್ಯಕ್ರಮ, ರಾತ್ರಿ ಶ್ರೀ ನಂದಿ ಉತ್ಸವ ಮೂರ್ತಿಯ ಗಜೋತ್ಸವದ ಉಚ್ಛಾಯವು ಗ್ರಾಮದ ರಾಜಬೀದಿಗಳಲ್ಲಿ ಜರುಗಲಿದೆ.

ದಿನಾಂಕ 23 ರ ಮಂಗಳವಾರ ಶ್ರೀ ಬಸವೇಶ್ವರ ಸ್ವಾಮಿಗೆ ರುದ್ರಾಭಿಷೇಕ, ಮಹಾಮಂಗಳಾರತಿ ಹಾಗೂ ಶ್ರೀ ನಂದಿ ಉತ್ಸವ ಮೂರ್ತಿಯ ಪುಷ್ಪೋತ್ಸವ ನೆರವೇರಲಿದೆ.

ದಿನಾಂಕ 24 ರ ಬುಧವಾರ ಬೆಳಿಗ್ಗೆ ಕರ್ತೃ ಗದ್ದುಗೆಗಳಿಗೆ ಹಾಗೂ ಬಸವೇಶ್ವರ ದೇವರಿಗೆ ಮಹಾರುದ್ರಾಭಿಷೇಕ ನಂತರ ಶಿವದೀಕ್ಷೆ ಸಂಸ್ಕಾರ, ಮಂತ್ರೋಪದೇಶ, ಬೆಳಿಗ್ಗೆ 10.30ಕ್ಕೆ ಗೋವಿನಹಾಳ್ ದಡ್ಡಿಮನೆ ವಂಶಸ್ಥರರಿಂದ ದೇವರಿಗೆ ಬಾಸಿಂಗ ಧಾರಣೆ ನಂತರ ಮಹಾರಥೋತ್ಸವಕ್ಕೆ ಕಳಾಸರೋಹಣ ಶ್ರೀಗಳಿಂದ ರಥ ಪೂಜೆ , ಶಸ್ತ್ರ ಹಾಕುವ ಕಾರ್ಯಕ್ರ ನಡೆಯುವುದು. ದಿನಾಂಕ 25 ಗುರುವಾರ ಬೆಳಿಗ್ಗೆ 8.30ಕ್ಕೆ ರುದ್ರ ಗುಗ್ಗಳ ಹಾಗೂ ಶ್ರಿ ಸಿದ್ದರಾಮೇಶ್ವರ ಶ್ರೀಗಳವರ ಅಡ್ಡಪಲ್ಲಕ್ಕಿ ಉತ್ಸವ ಹಾಗೂ ಶ್ರಿ ಬಸವೇಶ್ವರ ದೇವರ ರಥೋತ್ಸವ ಜರುಗಲಿದೆ. ಸಂಜೆ ದೊಡ್ಡ ಬಂಡಿ ಪ್ರದರ್ಶನದ ನಂತರ ಓಕುಳಿ, ಕಂಕಣ ವಿಸರ್ಜನೆ ಮಾಡಲಾಗುವುದು. ದಿನಾಂಕ 26 ರ ಶುಕ್ರವಾರ ಬೆಳಿಗ್ಗೆ ಶ್ರೀ ಬಸವೇಶ್ವರ ಪಾಲಿಕೆ ಉತ್ಸವದೊಂದಿಗೆ ಬುಕ್ಕಿಟ್ಟಿನ ಸೇವೆಯೊಂದಿಗೆ ಜಾತ್ರೆಗೆ ತೆರೆ ಎಳೆಯಲಾಗುವುದು.

## 27 ರಂದು ದೊಡ್ಡಬಾತಿಯಲ್ಲಿ ರಥೋತ್ಸವ




ದಾವಣಗೆರೆ, ಮಾ.21- ತಾಲ್ಲೂಕಿನ ದೊಡ್ಡಬಾತಿ ಶ್ರೀ ರೇವಣಸಿದ್ದೇಶ್ವರ ಸ್ವಾಮಿಯ ರಥೋತ್ಸವ ಇದೇ ದಿನಾಂಕ 27 ರ ಶನಿವಾರ ರಾತ್ರಿ 12 ಕ್ಕೆ ಜರುಗಲಿದೆ.

ರಥೋತ್ಸವದ ಅಂಗವಾಗಿ ದಿನಾಂಕ 23 ರ ಮಂಗಳವಾರ ಕಂಕಣಧಾರಣೆ ಮತ್ತು ಅರಿಷಿಣ ಎಣ್ಣೆ ಕಾರ್ಯ, ದಿನಾಂಕ 24 ರ ಬುಧವಾರ ಶ್ರೀ ಸ್ವಾಮಿಗೆ ಅರಿಷಿಣ ಎಣ್ಣೆ, ಉಚ್ಚಯ ಕಾರ್ಯ, ದಿನಾಂಕ 25 ರ ಗುರುವಾರ ಶ್ರೀ ಸ್ವಾಮಿಗೆ ಅರಿಷಿಣ ಎಣ್ಣೆ, ಉಚ್ಚಯ ಕಾರ್ಯ, ದಿನಾಂಕ 26 ರ ಶುಕ್ರವಾರ ಆವರಗೊಳ್ಳದ ಶ್ರೀ ವೀರಭದ್ರಸ್ವಾಮಿಯ ಆಗಮನ, ರಾತ್ರಿ ಅರಿಷಿಣ ಎಣ್ಣೆ, ಉಚ್ಚಯ ಕಾರ್ಯ ನಡೆಯುವುದು.

ದಿನಾಂಕ 27 ರ ಶನಿವಾರ ಬೆಳಿಗ್ಗೆ ಶ್ರೀ ಬೀರಲಿಂಗೇಶ್ವರ ಸ್ವಾಮಿ ಮತ್ತು ಆವರಗೊಳ್ಳ ಶ್ರೀ ವೀರಭದ್ರೇಶ್ವರ ಸ್ವಾಮಿಯನ್ನು ಕೋಟೆ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನಕ್ಕೆ ದಯ ಮಾಡಿಸುವುದು. ಹೆಣ್ಣುಮಕ್ಕಳಿಗೆ ಶಸ್ತ್ರಕಾರ್ಯ, ನಂತರ ಸ್ವಾಮಿಗೆ ಉಚ್ಚಯ ಕಾರ್ಯ ನಡೆಯುವುದು. ಅಂದು ರಾತ್ರಿ 12 ಗಂಟೆಗೆ ಶ್ರೀ ರೇವಣಸಿದ್ದೇಶ್ವರ ಸ್ವಾಮಿಯ ರಥೋತ್ಸವ ಜರುಗುವುದು. ದಿನಾಂಕ 28 ರ ಭಾನುವಾರ ರಾತ್ರಿ ಓಕಳಿ, ಗಂಗಾಪೂಜೆ ನಂತರ ಶ್ರೀ ಸ್ವಾಮಿಯ ದೇವಸ್ಥಾನಕ್ಕೆ ಆಗಮನ ನಡೆಯುವುದು ಎಂದು ಕನ್ವೀನರ್ ಎನ್.ಎಂ. ರಾಜಶೇಖರ್, ತಹಶೀಲ್ದಾರ್ ಬಿ.ಎನ್. ಗಿರೀಶ್ ತಿಳಿಸಿದ್ದಾರೆ.

## ಮಾಯಕೊಂಡ : ಶಿವರಾತ್ರಿ ಆಚರಣೆ



ದಾವಣಗೆರೆ, ಮಾ. 21- ಮಾಯಕೊಂಡದ ಶ್ರೀ ಕಾಶಿ ವಿಶ್ವನಾಥೇಶ್ವರ ಸ್ವಾಮಿ ಕ್ಷೇತ್ರದಲ್ಲಿ ಮಹಾ ಶಿವರಾತ್ರಿ ಆಚರಣೆ ನಡೆಯಿತು. ಈ ಸಂದರ್ಭದಲ್ಲಿ ಶಿವ ಸಹಸ್ರನಾಮ, ರುದ್ರಹೋಮ, ರುದ್ರ ಕವಚನ, ಪಂಚಾಮೃತ ಅಭಿಷೇಕ ನಡೆಸಲಾಯಿತು. ಮುಖ್ಯ ಧರ್ಮದರ್ಶಿ ಎಂ. ಎಸ್.ಕೆ. ಶಾಸ್ತ್ರಿ, ಎಂ.ಎಸ್.ಕೆ. ಸುಬ್ರಹ್ಮಣ್ಯಶಾಸ್ತ್ರಿ, ಎ.ಹೆಚ್. ಅರುಣಾಚಲ ಶಾಸ್ತ್ರಿ, ಎಂ.ಎಸ್.ಜೆ. ಹರೀಶ್ ಶಾಸ್ತ್ರಿ, ಸ್ಕಂದ ಪ್ರಸಾದ್, ಮತ್ತಿತತರು ಉಪಸ್ಥಿತರಿದ್ದು ಶಿವರಾತ್ರಿ ಆಚರಣೆ ನಡೆಸಿದರು.

## ಮಲೇಬೆನ್ನೂರು: 24ಕ್ಕೆ ಗಂಧ, 25ಕ್ಕೆ ಉರುಸು

ಮಲೇಬೆನ್ನೂರು, ಮಾ.21 - ಇಲ್ಲಿನ ಹಜರತ್ ಸೈಯದ್ ಹಬೀಬುಲ್ಲಾ ಷಾ ಖಾದ್ರಿ ಅವರ ಗಂಧ ಮತ್ತು ಉರುಸು ಇದೇ ದಿನಾಂಕ 24 ಮತ್ತು 25 ರಂದು ಜರುಗಲಿದೆ.

ದಿನಾಂಕ 24ರ ಬುಧವಾರ ಮಧ್ಯಾಹ್ನ 3 ಗಂಟೆಯಿಂದ ಪಟ್ಟಣದಲ್ಲಿ ಗಂಧದ ಮೆರವಣಿಗೆ ನಡೆಯಲಿದ್ದು, ದಿನಾಂಕ 25 ರ ಗುರುವಾರ ಇಡೀ ದಿನ ಉರುಸು ಇರುತ್ತದೆ. ರಾತ್ರಿ 9 ಗಂಟೆಗೆ ದರ್ಗಾ ಆವರಣದಲ್ಲಿ ಪ್ರಸಿದ್ಧ ಖವ್ವಾಲರಿಂದ ಖವ್ವಾಲಿ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ. ಕಳೆದ ವರ್ಷ ಕೊರೊನಾ ಕಾರಣದಿಂದಾಗಿ ಗಂಧ-ಉರುಸು ರದ್ದಾಗಿತ್ತು.

**ಜಮೀನು ಮಾರಾಟಕ್ಕಿದೆ**
ಹರಪನಹಳ್ಳಿ ತಾಲ್ಲೂಕು ಅರಸೀಕೆರೆ ಹೋಬಳಿ ಹಿರೇಮೇಗಳಗೆರೆ ಗ್ರಾಮದಲ್ಲಿ 5.53 ಮತ್ತು 6.55 ಎಕರೆ ಅಕ್ಕ ಪಕ್ಕ ಇರುವ ಒಟ್ಟು ವಿಸ್ತೀರ್ಣ 12.08 ಎಕರೆ. ಅಕ್ಕ ಪಕ್ಕದಲ್ಲಿ ರಸ್ತೆ, 3 ಬೋರ್‌ಗಳಿವೆ. ದಾವಣಗೆರೆಯಿಂದ 10 ಕಿ.ಮೀ. ಹತ್ತಿರದಲ್ಲಿದೆ.
ಬೂಸ್ನೂರು ಕಿರಣ್ (ಏಜೆಂಟ್)
98440 63409, 97315 63409

**ಬಿಲ್ಡಿಂಗ್ ಬಾಡಿಗೆಗಿದೆ**
ಚಾಮರಾಜಪೇಟೆ ಸರ್ಕಲ್ ಹತ್ತಿರ, ಕಲ್ಲೇಶ್ವರ ಕಿರಾಣಿ ಅಂಗಡಿ ಮೇಲ್ಭಾಗದಲ್ಲಿ 3 ಮಹಡಿ ಇರುವ 10,000 ಚದುರ ಅಡಿ ವಿಶಾಲವಾದ ಜಾಗ ಇರುವ ಬಿಲ್ಡಿಂಗ್ ಬಾಡಿಗೆಗಿದೆ. ಸಂಪರ್ಕಿಸಿ :
ಮೊ. : 98453 17181

**ಮನೆಗಳು ಮಾರಾಟಕ್ಕಿವೆ**
1) 40x60 North 3 ಬೆಡ್ ರೂಂ ಮನೆ ಕುವೆಂಪು ಬಡಾವಣೆಯಲ್ಲಿ
2) ಮಹಾಲಕ್ಷ್ಮಿ ಲೇಔಟ್‌ನಲ್ಲಿ 30x40 West, ಮೇಲೆ ಕೆಳಗಡೆ ಮನೆ ಇದೆ.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೈಟ್‌ಗಳು ಮಾರಾಟಕ್ಕಿವೆ**
ಶಿವ ಪಾರ್ವತಿ ಬಡಾವಣೆ ಪೂರ್ವ 30x40, 30x50, 30x56, 40x60, 50x80, 50x120, ಎಸ್.ಎಸ್ ಹೈಟೆಕ್ ಬಡಾವಣೆ ಪೂರ್ವ, 30x40, 30x50 ಪಶ್ಚಿಮ 30x50 ರಾಘವೇಂದ್ರ ಲೇಔಟ್ (ಎಸ್.ಎಸ್ ಹೈಟೆಕ್ ಬಡಾವಣೆ ಎದುರು) 30x40 ಪೂರ್ವ
ಮನೆ ಕೊಡುವುದಕ್ಕೆ, ತೆಗೆದು ಕೊಳ್ಳುವುದಕ್ಕೆ ಸಂಪರ್ಕಿಸಿ:
99457 02495, ಐಗೂರು ವಿಜಯ್ ಕುಮಾರ್
95911 60520 -ಸುರೇಶ್

**ಸೈಟು ಬೇಕಿದೆ (ನೆಲಮಂಗಲದಲ್ಲಿ)**
ನೆಲಮಂಗಲ ಸೊಂಡೆಕೊಪ್ಪ ರೋಡ್, ತರಳಬಾಳು ನಗರದಲ್ಲಿ
ಕಿರಣ್ ಬೂಸ್ನೂರ್ : 98440-63409

**ಮಾಸ್ಕ್ ಬಳಸಿ ಕೊರೊನಾ ತೊಲಗಿಸಿ**

**ಸುವರ್ಣಾವಕಾಶ**
ಎಸ್ಸೆಸ್ಸೆಲ್ಸಿ, ಪಿಯುಸಿ, ಫೇಲಾದವರು ನೇರ ಬಿ.ಎ., ಎಂ.ಎ., ಬಿ.ಕಾಂ., ಎಂ.ಕಾಂ., ಬಿ.ಎಸ್ಸಿ., ಬಿ.ಎಡ್., ಎಂ.ಎಡ್., ಡಿಪ್ಲೋಮಾ, ಬಿ.ಟೆಕ್, ಎಂ.ಟೆಕ್ ಮುಂತಾದ ಕೋರ್ಸ್‌ಗಳನ್ನು ಪಾಸ್ ಮಾಡಲು ಸಂಪರ್ಕಿಸಿ
8296265995, 8971684391
ಬೆಳಿಗ್ಗೆ 10 ರಿಂದ ಸಂಜೆ 6 ರೊಳಗೆ

**ಸೈಟ್‌ಗಳು ಮಾರಾಟಕ್ಕಿವೆ**
ಮಹಾಲಕ್ಷ್ಮಿ ಲೇಔಟ್‌ನಲ್ಲಿ ಮತ್ತು ಅಕ್ಕ-ಪಕ್ಕದಲ್ಲಿ 45x58 South, 49x58 South, 28x70 west, 30x38 East
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಮನೆಗಳು ಮಾರಾಟಕ್ಕಿವೆ**
ಬಸವೇಶ್ವರ ಬಡಾವಣೆ 30x40 ಪೂರ್ವ, 30x45 ಪಶ್ಚಿಮ, ಬಾಲಾಜಿ ಲೇಔಟ್ 30x50 ಪೂರ್ವ, ಪಶ್ಚಿಮ ಎಸ್.ಎಸ್. 'ಎ' ಬ್ಲಾಕ್ ಅಥಣಿ ಕಾಲೇಜು ಹತ್ತಿರ 30x44 ಪೂರ್ವ ದಿಕ್ಕು ಮೇಲೆ ಡುಪ್ಲೆಕ್ಸ್ ಮನೆ, ಎಸ್.ಎಸ್. ಹೈಟೆಕ್ ಬಡಾವಣೆ 30x50 ಪಶ್ಚಿಮ, ಶಿವ ಪಾರ್ವತಿ ಬಡಾವಣೆ 30x40 ಪಶ್ಚಿಮ ಮೇಲೆ ಕೆಳಗೆ ಮನೆ, ಎಲ್ ಐ ಸಿ ಕಾಲೋನಿಯಲ್ಲಿ 30x40 ಕೆಳಗೆ ಮನೆ ಮೇಲೆ 2 ರೂಂಗಳು ದಕ್ಷಿಣ
ಮನೆ ಕೊಡುವುದಕ್ಕೆ, ತೆಗೆದು ಕೊಳ್ಳುವುದಕ್ಕೆ ಸಂಪರ್ಕಿಸಿ:
99457 02495, ಐಗೂರು ವಿಜಯ್ ಕುಮಾರ್
95911 60520 -ಸುರೇಶ್

**ಸೈಟ್‌ಗಳು ಮಾರಾಟಕ್ಕಿವೆ**
ಶಿವ ಪಾರ್ವತಿ ಬಡಾವಣೆಯಲ್ಲಿ 30x48 ಅಕ್ಕ-ಪಕ್ಕ ಪೂರ್ವ, ಸ್ವಾಮಿ ವಿವೇಕಾನಂದ ಬಡಾವಣೆಯಲ್ಲಿ 40x60 ಉತ್ತರ ಅಕ್ಕ-ಪಕ್ಕ
ಸ್ವಾಮಿ ಏಜೆಂಟ್ ವಿದ್ಯಾನಗರ
97421 44715

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಗೆ 18 ರಿಂದ 25 ವರ್ಷದೊಳಗಿನ ಸೇಲ್ಸ್ ಗರ್ಲ್ಸ್ ಮತ್ತು ಸೇಲ್ಸ್ ಬಾಯ್ಸ್ ಬೇಕಾಗಿದ್ದಾರೆ. ಗ್ರಾಮಾಂತರದ ಅಭ್ಯರ್ಥಿಗಳಿಗೆ ಊಟ, ವಸತಿ ಸೌಲಭ್ಯವಿದೆ.
ಸಂಪರ್ಕಿಸಿ : 82173 52453

**ಮನೆ ಬಾಡಿಗೆಗೆ / ಭೋಗ್ಯಕ್ಕಿದೆ**
ಗ್ರೌಂಡ್ ಫ್ಲೋರ್ ನಲ್ಲಿ 3 BHK ಉತ್ತರ ದಿಕ್ಕಿನ ಮುಂಬಾಗಿಲುವುಳ್ಳ ಮನೆ ಬಾಡಿಗೆಗಿದೆ ಹಾಗೂ ಕಾರ್ ಪಾರ್ಕಿಂಗ್, ಬೋರ್- ಕಾರ್ಪೋರೇಷನ್ ನೀರಿನ ಸೌಲಭ್ಯವಿರುವ ಮನೆ. ನಂ. 651, ಶ್ರೀ ಕಟೀಲು, 6ನೇ ಕ್ರಾಸ್, ಶ್ರೀನಿವಾಸ ನಗರ, ಹದಡಿ ರಸ್ತೆ, ದಾವಣಗೆರೆ.
ಮೊ. 70194 27951, 93410 14488

**ಶ್ರೀ ದುರ್ಗಾಂಬಿಕ ಹೋಂ ಕೇರ್ ಸರ್ವೀಸ್**
ನಮ್ಮಲ್ಲಿ ವಯೋವೃದ್ದರನ್ನು ನೋಡಿಕೊಳ್ಳಲು ಆಯಾಗಳನ್ನು ಕಳುಹಿಸುತ್ತೇವೆ. ವಯೋವೃದ್ದರನ್ನು ನೋಡಿಕೊಳ್ಳಲು ಯುವಕ, ಯುವತಿಯರು ಬೇಕಾಗಿದ್ದಾರೆ. (ಊಟ, ವಸತಿ ವ್ಯವಸ್ಥೆ ಇರುತ್ತದೆ.)
ಫೋ. : 96062 82814

**ಸೈಟ್‌ಗಳು ಮಾರಾಟಕ್ಕಿವೆ**
ಹೊನ್ನಾಳಿ ದುರ್ಗಿಗುಡಿ ಬಡಾವಣೆ, 4ನೇ ಕ್ರಾಸ್‌ನಲ್ಲಿ 30x60 ಅಡಿ ವಿಸ್ತೀರ್ಣದ 2 ಸೈಟ್ ಮಾರಾಟಕ್ಕಿವೆ. ಸಂಪರ್ಕಿಸಿ
94483 69055

**ಸೈಟ್‌ಗಳು ಮಾರಾಟಕ್ಕಿವೆ**
ಬನಶಂಕರಿ ಬಡಾವಣೆ, ಶಿವ ಪಾರ್ವತಿ ಲೇಔಟ್, ಜಯನಗರ, ಹೈಟೆಕ್ ಬಡಾವಣೆ, ಸರಸ್ವತಿ ನಗರ, ವಿನಾಯಕ ಬಡಾವಣೆಗಳಲ್ಲಿ 30x40, 30x50, 40x60, 50x75 ಹಾಗೂ ಲೇಔಟ್ ಜಮೀನು ಕಮರ್ಷಿಯಲ್ ಸೈಟ್‌ಗಳು ಮತ್ತು ದಾವಣಗೆರೆ ಸುತ್ತ-ಮುತ್ತ ಹೊಲ, ಗದ್ದೆ, ತೋಟಗಳು ಯೋಗ್ಯ ಬೆಲೆಯಲ್ಲಿ ದೊರೆಯುತ್ತವೆ.
97315 12365

**ಮಳಿಗೆ ಬಾಡಿಗೆಗೆ ಇದೆ**
ವಿದ್ಯಾರ್ಥಿ ಭವನದ ಹತ್ತಿರ, ಹದಡಿ ರೋಡ್ ದಾವಣಗೆರೆ
84315 68521

**ಬೇಕಾಗಿದ್ದಾರೆ**
ಹೋಲ್‌ಸೇಲ್ ಫಾರ್ಮಾದಲ್ಲಿ ಸ್ಟಾಕ್ ತೆಗೆಯಲು ಮಹಿಳೆ ಮತ್ತು ಡೆಲಿವರಿ ಹುಡುಗರು ಬೇಕಾಗಿದ್ದಾರೆ. ಸಂಪರ್ಕಿಸಿ
A.K. Sales
1st Floor Reliance Fresh building, 4th Main P.J.Extn Davanagere.

**ಬೇಕಾಗಿದ್ದಾರೆ**
ಕರುಣಾ ಜೀವ ಕಲ್ಯಾಣ ಟ್ರಸ್ಟ್‌ಗೆ ಸಮಾಜ ಸೇವೆಯಲ್ಲಿ ಆಸಕ್ತಿ ಇರುವ ಉತ್ಸಾಹಿ ಯುವಕರು ಮತ್ತು ವಿವಾಹಿತ ಮಹಿಳೆಯರು ಕೆಲಸಕ್ಕೆ ಬೇಕಾಗಿದ್ದಾರೆ.
ವಿದ್ಯಾರ್ಹತೆ : SSLC / PUC
83105 20002

**ಅಧಿಕೃತ ಚೀಟಿ ಸಂಸ್ಥೆ**
ರೂ.5 ಲಕ್ಷದ ಚೀಟಿ ಪ್ರಾರಂಭ. ತಿಂಗಳ ಕಂತು 10,000/- ದಿಂದ 6,500/- ಮಾತ್ರ
ಸ್ಕಂದ ಚಿಟ್ ಫಂಡ್ಸ್ (ರಿ) ದಾವಣಗೆರೆ-02
84531 61869

**ಸೈಟ್ ಮಾರಾಟಕ್ಕಿದೆ**
ಮಹಾಲಕ್ಷ್ಮಿ ಲೇಔಟ್‌ನಲ್ಲಿ 30x40 ದಕ್ಷಿಣ ಸೈಟ್ ಮಾರಾಟಕ್ಕಿದೆ.
ಏಜೆಂಟ್
86181 82332

**CODING AND DECODING CLASSES**
Coding and decoding classes 2 std to 7 th std
Bruit Abacus and Vedics Maths
Contact :
M : 97390 66956

**ಬೇಕಾಗಿದ್ದಾರೆ**
ತಿಂಡಿ ಮತ್ತು ಊಟದ ಹೋಟೆಲ್‌ನಲ್ಲಿ ಸಪ್ಲೈಯರ್ ಮತ್ತು ದೋಸೆ ಭಟ್ಟರು ಬೇಕಾಗಿದ್ದಾರೆ.
ಸಂಪರ್ಕಿಸಿ
99861 70007

**ಮನೆ ಮಾರಾಟಕ್ಕಿದೆ**
ಉತ್ತರ ದಿಕ್ಕಿನ 30x40 ಅಳತೆಯ 2 ಅಂತಸ್ತಿನ ಸುಸಜ್ಜಿತ 2BHK ಮನೆ ಭಗತ್ ಸಿಂಗ್ ನಗರ 1ನೇ ಮೇನ್, 3ನೇ ಕ್ರಾಸ್, ದಾವಣಗೆರೆ-02 ಇಲ್ಲಿ ಮಾರಾಟಕ್ಕಿದೆ. ಸಂಪರ್ಕಿಸಿ
ಮೊ: 96638 87111

**2017 ರ JCB ಮಾರಾಟಕ್ಕಿದೆ.**
98443 27779
73377 77071

**ಹಾಲ್ ಬಾಡಿಗೆಗೆ ಇದೆ**
ಬ್ಯೂಟಿ ಪಾರ್ಲರ್/ಟ್ಯೂಷನ್ಸ್/ಆಫೀಸ್‌ಗಾಗಿ Ist Floorನಲ್ಲಿ ಬಾಡಿಗೆಗೆ ಇದೆ. ಮಾಮಾಸ್ ಜಾಯಿಂಟ್ ರೋಡ್, ಕಾರ್ನರ್ ಬಿಲ್ಡಿಂಗ್, ಎಂಸಿಸಿ ಬಿ ಬ್ಲಾಕ್, ದಾವಣಗೆರೆ.
82177 72482

**ಪ್ರವೇಶ ಪ್ರಕಟಣೆ**
ಕರೆಸ್ಪಾಂಡೆನ್ಸ್/ ರೆಗ್ಯೂಲರ್
SSLC, PUC, BA, BCom, BSc, MA, MCom, MSc, MBA, All PG & Diploma Courses
S.S. Global Institute for Higher Education, Davanagere.
63619 00533, 72593 59861

**15 ದಿನಗಳಲ್ಲಿ ಪರಿಹಾರ**
ಬಿಪಿ, ಷುಗರ್, ಥೈರಾಯ್ಡ್, ಗ್ಯಾಸ್ಟ್ರಿಕ್, ವೆರಿಕೋಸ್, ವೈನ್ಸ್, ಮೈಗ್ರೇನ್, ತೂಕ ಇಳಿಕೆ, ನರಗಳ ಸೆಳೆತ, ಮಂಡಿ, ಬೆನ್ನು, ಸೊಂಟ, ಕುತ್ತಿಗೆ ನೋವುಗಳು ಹಲವು ಸಮಸ್ಯೆಗಳಿಗೆ ಪರಿಹಾರ.
ಸಮಯ : ಬೆ: 9.00 ರಿಂದ 5:00 ರವರೆಗೆ
ಗಂಗೋತ್ರಿ ವೆಲ್‌ನೆಸ್ ಸೆಂಟರ್
ಜಯದೇವ ಸರ್ಕಲ್, ದಾವಣಗೆರೆ.
86602 35013

**ಜಮೀನು ಮಾರಾಟಕ್ಕಿದೆ**
ದಾವಣಗೆರೆ ತಾಲ್ಲೂಕು ಆನಗೋಡು ಹೋಬಳಿ, ಆಲೂರು ಗ್ರಾಮದಲ್ಲಿ ಸರ್ವೆ ನಂಬರ್ 184/1p ನಲ್ಲಿ 3 ಎಕರೆ 38 ಗುಂಟೆ ಜಮೀನು, ನೀರಾವರಿಗಾಗಿ ಬೋರ್ ವ್ಯವಸ್ಥೆ ಇದ್ದು, ಮುಖ್ಯ ರಸ್ತೆಗೆ ಹೊಂದಿಕೊಂಡಿದೆ. ದಾವಣಗೆರೆಯಿಂದ 14 ಕಿ.ಮೀ. ಹತ್ತಿರದಲ್ಲಿದೆ.
ಮಾಲೀಕರು : ಹೆಚ್.ಎಂ. ಪಾಟೀಲ್
98807 39388

**ಬೇಕಾಗಿದ್ದಾರೆ**
ಹೆಲ್ಪರ್ಸ್/ಸೇಲ್ಸ್‌ಗೆ ಹುಡುಗ/ಹುಡುಗಿಯರು ಬೇಕಾಗಿದ್ದಾರೆ.
ನಾಗಶೇಟಿ ಕಟ್ ಫೀಸ್ ಸೆಂಟರ್
#19/1, ಕಾಳಿಕಾದೇವಿ ರೋಡ್, ದಾವಣಗೆರೆ-1.
81055 53341

**ಸೈಟ್/ಮನೆ ಮಾರಾಟಕ್ಕಿದೆ**
20x30, 30x40, 30x50 ಮನೆ, 20x30, 30x40 30x50 ಸೈಟ್, 20x30 ಕಾರ್ನರ್ ಸೈಟ್, 30x50 ಕಾರ್ನರ್ ಸೈಟ್ ಇವೆ.
80882 92977

**ಮನೆ& ರೂಂಗಳು ಬಾಡಿಗೆ/ಲೀಸ್‌ಗಿವೆ**
ವಿನೋಬನಗರ, 4ನೇ ಮೇನ್, 3ನೇ ಕ್ರಾಸ್‌ನಲ್ಲಿ ಮನೆ ಮತ್ತು ರೂಂಗಳು ಬಾಡಿಗೆ/ಲೀಸ್‌ಗಿವೆ.
98442 41311, 87225 41967

**ಸೈಟ್‌ಗಳು ಮಾರಾಟಕ್ಕಿವೆ**
ದೂಡಾ ಆಪ್ರೂವ್ಡ್ ಸೈಟ್‌ಗಳು ಮಾರಾಟಕ್ಕಿವೆ Rs. 899 Sqft ಹೋಳಿ ಹುಣ್ಣಿಮೆ ಹಬ್ಬದ ಪ್ರಯುಕ್ತ ವಿಶೇಷ ರಿಯಾಯಿತಿಯಲ್ಲಿ
93431 10009, 98441 24217, 86603 11021

**UPS BATTERY & RO PURIFIERS**
Sales & Service
PEACE ENTERPRISES
83100 42490, 99013 18277
98801 56667

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ನೇರ ಪರೀಕ್ಷೆಗಳು**
ಉನ್ನತ ಶಿಕ್ಷಣಕ್ಕೆ ಮತ್ತು ಸರ್ಕಾರಿ ಕೆಲಸಕ್ಕೆ ಉಪಯೋಗ SSLC, PUC, Technical & Non Technical Courses, Pharmacy & BHMS (Government & Private College)
ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್
ಸೋಮ ಮೆಡಿಕಲ್ಸ್ ಮೇಲೆ, ಗಣೇಶ ದೇವಸ್ಥಾನದ ಹಿಂಭಾಗ, ರಾಮ್ & ಕೋ ಸರ್ಕಲ್, ದಾವಣಗೆರೆ.
87490 24789, 87620 58369
94837 64859, 82173 02649

**COMMERCIAL SPACE FOR RENT**
1st, 2nd and 3rd floor, New Building, LIFT Installed, Good 45ft exposure to main road. Beside Royal Enfield showroom, Hadadi Main Road, Davangere.
8660214677

**Required**
PUC or any degree with Basic Computer Knowledge is must and telecaller for male & female
Contact :
Samsung Service Centres
Excellent Electronics
# 2137/1, 4th main, 3rd cross, MCC A block, Davangere.
98865 15100

**ಭೂಮಿಕಾ ಮ್ಯಾಟ್ರಿಮೊನಿ**
ಲಿಂಗಾಯಿತ ವಧು-ವರರ ಕೇಂದ್ರ
H.O : Near coffee day, Nutana collage road, Vidyanagara 2nd main, Davangere
77603 16576
90080 55813

**ಸಾಲಗಳಿಗೆ ಸಂಪರ್ಕಿಸಿ**
(ಬಡ್ಡಿ ದರ ವಾರ್ಷಿಕ 7% ರಿಂದ ಪ್ರಾರಂಭ) ಮನೆ ಕಟ್ಟಲು, ಮನೆ ಖರೀದಿ, ಸೈಟ್ ಖರೀದಿ, ಕಟ್ಟಿರುವ ಮನೆಗೆ ಸಾಲ, ಬೇರೆ ಬ್ಯಾಂಕ್‌ನಲ್ಲಿ ತೆಗೆದುಕೊಂಡಿರುವ ಸಾಲ ವರ್ಗಾವಣೆ ಮತ್ತು ಅಧಿಕ ಸಾಲಕ್ಕಾಗಿ ಸಂಪರ್ಕಿಸಿ. (ಸಂಬಳ ಮತ್ತು ವ್ಯವಹಾರದಾರರಿಗೆ ಮಾತ್ರ)
73385 80345

## ವಿನೋಬನಗರದಲ್ಲಿ ಸ್ವಚ್ಛ ಸರ್ವೇಕ್ಷಣಾ



ದಾವಣಗೆರೆ, ಮಾ.21 - ವಿನೋಬನಗರದ ವಾರ್ಡ್ 16ರಲ್ಲಿ ಸ್ವಚ್ಛ ಸರ್ವೇಕ್ಷಣಾ ಅಭಿಯಾನ ಭಾರತದಾದ್ಯಂತ ಮಾರ್ಚ್ ತಿಂಗಳಲ್ಲಿ ನಡೆಯುತ್ತಿದ್ದು, ಇದರ ಪ್ರಯುಕ್ತ ವಾರ್ಡ್ 16 ವಿನೋಬನಗರದ 1ನೇ ಮುಖ್ಯರಸ್ತೆ ನಾಗರಕಟ್ಟೆ ದೇವಸ್ಥಾನದಿಂದ ಆರಂಭಿಸಲಾಯಿತು.

ಪಾಲಿಕೆ ಸದಸ್ಯರೂ ಆದ ವಿರೋಧ ಪಕ್ಷದ ನಾಯಕ ಎ.ನಾಗರಾಜ್ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಹೆಲ್ತ್ ಆಫೀಸರ್ ಸಂತೋಷ್ ಕುಮಾರ್, ಸೀನಿಯರ್ ಹೆಲ್ತ್ ಇನ್ಸ್ ಪೆಕ್ಟರ್ ಪ್ರಕಾಶ್, ವಾರ್ಡ್ ಹೆಲ್ತ್ ಇನ್ಸ್‌ಪೆಕ್ಟರ್ ಶ್ರೀಧರ್, ನಿಂಗಪ್ಪ, ವಾರ್ಡಿನ ಹಿರಿಯರಾದ ಎಸ್.ರವಿ, ಹೆಚ್. ಸುರೇಶ್, ರಮೇಶ್, ಚಂದ್ರಣ್ಣ, ಮಲ್ಲೇಶಪ್ಪ, ಮಂಜು (ಮಡ್ಡಿ) ವೀರಣ್ಣ, ಮಂಜು, ವಾರ್ಡಿನ ಎಲ್ಲಾ ಪೌರ ಕಾರ್ಮಿಕರು ಭಾಗವಹಿಸಿದ್ದರು.

## ಮಹಾನಗರಪಾಲಿಕೆ ಉಪಚುನಾವಣೆ

## 2 ಸ್ಥಾನಗಳಿಗೆ 7 ಅಭ್ಯರ್ಥಿಗಳು ಕಣದಲ್ಲಿ

ದಾವಣಗೆರೆ, ಮಾ.21- ಮಹಾನಗರ ಪಾಲಿಕೆಯ ವಾರ್ಡ್ ನಂ.20 ಮತ್ತು 22 ರಲ್ಲಿ ರಾಜೀನಾಮೆಯಿಂದ ತೆರವಾಗಿರುವ ಸದಸ್ಯ ಸ್ಥಾನಗಳಿಗೆ ಉಪ ಚುನಾವಣೆ ನಡೆಸಲಾಗುತ್ತಿದ್ದು, 2 ಸ್ಥಾನಗಳಿಗೆ ಒಟ್ಟು 7 ಅಭ್ಯರ್ಥಿಗಳು ಅಂತಿಮ ಕಣದಲ್ಲಿ ಉಳಿದಂತಾಗಿದೆ.

ವಾರ್ಡ್ ಸಂಖ್ಯೆ 20 ರಲ್ಲಿ ಕಾಂಗ್ರೆಸ್ ಹಾಗೂ ಬಿಜೆಪಿ ಅಭ್ಯರ್ಥಿಗಳು ಸೇರಿದಂತೆ ಒಟ್ಟು 2 ಅಭ್ಯರ್ಥಿಗಳು ಚುನಾವಣಾ ಕಣದಲ್ಲಿದ್ದಾರೆ.

ವಾರ್ಡ್ ಸಂಖ್ಯೆ 22 ರಲ್ಲಿ ಅಭ್ಯರ್ಥಿಗಳು ಕಾಂಗ್ರೆಸ್-1, ಬಿಜೆಪಿ-1, ಎ.ಐ.ಎಂ.ಇ.ಐ.ಎಂ-1, ಪಕ್ಷೇತರ-2 ಸೇರಿದಂತೆ, ಒಟ್ಟು 5 ಅಭ್ಯರ್ಥಿಗಳು ಕಣದಲ್ಲಿದ್ದಾರೆ. ಮತದಾನ ಮಾ. 29 ರಂದು ಬೆಳಿಗ್ಗೆ 7 ರಿಂದ ಸಂಜೆ 5 ರವರೆಗೆ ನಡೆಯಲಿದೆ ಎಂದು ಅಪರ ಜಿಲ್ಲಾಧಿಕಾರಿಗಳು ತಿಳಿಸಿದ್ದಾರೆ.

# ಸರ್ಕಾರಿ ಶಾಲಾ-ಕಾಲೇಜುಗಳ ಅಭಿವೃದ್ಧಿಗೆ ಪ್ರಾಮುಖ್ಯತೆ

## ದೊಡ್ಡಬಾತಿ ಗ್ರಾಮದ ಕರ್ನಾಟಕ ಪಬ್ಲಿಕ್ ಶಾಲೆಯ ನೂತನ ಕೊಠಡಿಗಳನ್ನು ಉದ್ಘಾಟಿಸಿದ ಎಸ್ ಎಆರ್, ಜಿಎಂಎಸ್



ದಾವಣಗೆರೆ, ಮಾ.21- ನನ್ನ ಕ್ಷೇತ್ರ ವ್ಯಾಪ್ತಿಯಲ್ಲಿನ ಸರ್ಕಾರಿ ಶಾಲಾ-ಕಾಲೇಜುಗಳ ಅಭಿವೃದ್ಧಿಗೆ ಶಾಸಕರ ಅನುದಾನ ಬಳಕೆಗೆ ಹೆಚ್ಚು ಆದ್ಯತೆ ನೀಡಿರುವುದಾಗಿ ಶಾಸಕ ಎಸ್.ಎ. ರವೀಂದ್ರನಾಥ್ ತಿಳಿಸಿದರು.

ಅವರು, ಇಂದು ತಾಲ್ಲೂಕಿನ ದೊಡ್ಡಬಾತಿ ಗ್ರಾಮದಲ್ಲಿನ ಕರ್ನಾಟಕ ಪಬ್ಲಿಕ್ ಶಾಲೆಯ 59.50 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಲಾಗಿರುವ ನೂತನ 5 ಶಾಲಾ ಕೊಠಡಿಗಳ ಪ್ರಾರಂಭಕ್ಕೆ ಚಾಲನೆ ನೀಡಿ ವೇದಿಕೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಶಾಸಕನಾಗಿ ಆಯ್ಕೆಗೊಂಡ ನಂತರ ನನ್ನ ಅವಧಿಯಲ್ಲಿ ಬೇರೆಯವರಂತೆ ರಸ್ತೆಗೆ ಅನುದಾನವನ್ನು ವಿನಿಯೋಗಿಸದೇ ನಾನು ಶಾಸಕನಾಗಿ ಆಯ್ಕೆಯಾದ ಉತ್ತರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿನ ಸರ್ಕಾರಿ ಶಾಲೆ ಮತ್ತು ಕಾಲೇಜುಗಳನ್ನು ಮೂಲಭೂತ ಸೌಕರ್ಯ ಜೊತೆಗೆ ಸುಸಜ್ಜಿತವಾಗಿ ಅಭಿವೃದ್ಧಿಪಡಿಸುವಲ್ಲಿ ವಿನಿಯೋಗಿಸಿದ್ದೇನೆ. ಮೊದಲಿನಿಂದಲೂ ನಾನು ರಸ್ತೆ ಅಭಿವೃದ್ಧಿಗಿಂತ ಶಾಲಾ-ಕಾಲೇಜುಗಳ ಅಭಿವೃದ್ಧಿಗೆ ಪ್ರಾಮುಖ್ಯತೆ ನೀಡಿ ಅದರಂತೆಯೇ ಕಾರ್ಯ ಪ್ರವೃತ್ತನಾಗಿದ್ದೇನೆ ಎಂದು ಹೇಳಿದರು.

ನಗರದಲ್ಲಿ ಸರ್ಕಾರಿ ಮಹಿಳಾ ಪದವಿ ಕಾಲೇಜಿಗೆ ಬೇಡಿಕೆಯಂತೆ ಅದರ ಪ್ರಾರಂಭಕ್ಕೂ ಒತ್ತು ನೀಡಿದ್ದೆ. ಈಗಲೂ ಸಹ ಆ ಕಾಲೇಜಿನಲ್ಲಿ ಹೆಚ್ಚಿನ ಅಭಿವೃದ್ಧಿಗೆ ಮೂರು ಕೋಟಿ ಅನುದಾನದ ಜೊತೆಗೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ ಏಳು ಕೋಟಿ ಒಟ್ಟು 10 ಕೋಟಿ ರೂ. ವೆಚ್ಚದಲ್ಲಿ ಈ ಎರಡು ಕಾಲೇಜುಗಳ ಅಭಿವೃದ್ಧಿ ಕಾರ್ಯಗಳಿಗೆ ಅನುದಾನ ತಂದಿದ್ದು, ಕಾಮಗಾರಿಯೂ ಸಹ ಪ್ರಗತಿಯಲ್ಲಿದೆ ಎಂದರು.

ನನ್ನ ಕ್ಷೇತ್ರದಲ್ಲಿ ಸರ್ಕಾರಿ ಶಾಲೆಗಳು ಬಹಳಷ್ಟು ಹಳೆಯದಾಗಿದ್ದವಲ್ಲದೇ ಶಿಥಿಲಗೊಂಡಿದ್ದವು. ಅಂತಹ ಹಳೆಯ ಶಾಲಾ ಕಟ್ಟಡಗಳನ್ನು ತೆರವುಗೊಳಿಸಿ, ಹೊಸ ಕಟ್ಟಡಗಳನ್ನು ನಿರ್ಮಿಸಿ ಕೊಡಲಾಗಿದೆ. ಈ ಅಭಿವೃದ್ಧಿ ಕೆಲಸಕ್ಕಾಗಿ ಸಂಸದರ ಅನುದಾನವನ್ನೂ ಸಹ ವಿನಿಯೋಗಿಸಲಾಗಿದೆ ಎಂದರು.

ಕ್ಷೇತ್ರದ ದೊಡ್ಡಬಾತಿ ಗ್ರಾಮಕ್ಕೂ ನನಗೂ ಹೆಚ್ಚು ಒಡನಾಟವಿದ್ದು, ಬಾತಿ ಗುಡ್ಡದಲ್ಲಿ ಹೋರಾಟಗಳನ್ನು ಸಹ ಮಾಡಿದ್ದೇನೆ. ಹೀಗಾಗಿ, ಈ ಭಾಗದ ಜನರ ಸಮಸ್ಯೆಗಳಿಗೆ ಸದಾ ಕಾಲ ಸ್ಪಂದಿಸುತ್ತಿದ್ದೇನೆ. ಮುಂದೆಯೂ ಅಭಿವೃದ್ದಿಗೆ ಶ್ರಮಿಸುತ್ತೇನೆಂದರು.

ಸಂಸದ ಜಿ.ಎಂ. ಸಿದ್ದೇಶ್ವರ ಮಾತನಾಡಿ, ಗ್ರಾಮಗಳ ಅಭಿವೃದ್ಧಿ ಆದಲ್ಲಿ ದೇಶ ಪ್ರಗತಿ ಕಾಣುತ್ತದೆ ಎಂಬ ಆಶಯದೊಂದಿಗೆ ನಾನು ಹಾಗೂ ಶಾಸಕ ಎಸ್.ಎ. ರವೀಂದ್ರನಾಥ್ ಅವರು ಗ್ರಾಮೀಣ ಭಾಗಕ್ಕೆ ಹೆಚ್ಚಿನ ಕೆಲಸ ಮಾಡುತ್ತಿದ್ದೇವೆ. ದೊಡ್ಡಬಾತಿ ಗ್ರಾಮವೂ ಶಾಸಕ ಎಸ್.ಎ. ರವೀಂದ್ರನಾಥ ಅವರಿಗೆ ತವರು ಮನೆಯಂತೆ ಆಗಿದೆ. ಈ ಗ್ರಾಮದ ಮೇಲೆ ವಿಶೇಷ ಪ್ರೀತಿ ಹೊಂದಿರುವ ಅವರು ತಮ್ಮ ಅನುದಾನವನ್ನು ಹೆಚ್ಚಾಗಿ ನೀಡಿದ್ದಾರೆ ಎಂದರು.

ಸರ್ಕಾರದಿಂದ ನಡೆಯುವ ಕಾಮಗಾರಿಗಳು ಉತ್ತಮವಾಗಿರಬೇಕು. ಬಹುಕಾಲ ಅವುಗಳು ಬಾಳಿಕೆ ಬರಬೇಕಿದೆ. ಈ ಶಾಲಾ ಕೊಠಡಿಗಳ ನಿರ್ಮಾಣ ಚೆನ್ನಾಗಿದ್ದು, ಕಾಮಗಾರಿಗಳನ್ನು ನಡೆಸಿದವರು ಉತ್ತಮ ಕೆಲಸ ಮಾಡಿದ್ದಾರೆ ಎಂದು ಪ್ರಶಂಸೆ ವ್ಯಕ್ತಪಡಿಸಿದರು.

ವಿದ್ಯಾವಂತರಾದರೆ ಏನನ್ನಾದರೂ ಸಾಧಿಸಬಹುದಾಗಿದೆ. ಹಾಗಾಗಿ ಚೆನ್ನಾಗಿ ವಿದ್ಯೆ ಕಲಿತು ಭವಿಷ್ಯದಲ್ಲಿ ಪ್ರಗತಿ ಸಾಧಿಸಬೇಕು ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ತಾಲ್ಲೂಕು ಪಂಚಾಯತ್ ಸದಸ್ಯೆ ಆಶಾ ಮುರಳೀಧರ್ ಮಾತನಾಡಿ, ಕೆಲ ಸರ್ಕಾರಿ ಶಾಲೆಗಳು ಶಿಥಿಲಾವಸ್ಥೆಗೆ ತಲುಪಿದ್ದು, ಅಂತಹ ಶಾಲೆಗಳನ್ನು ಗುರುತಿಸಿ ಅಭಿವೃದ್ಧಿಪಡಿಸಬೇಕು. ಶೌಚಾಲಯ ಸೇರಿ ದಂತೆ ಮೂಲಭೂತ ಸೌಲಭ್ಯಗಳನ್ನು ಒದಗಿಸಬೇಕು. ಮುಖ್ಯವಾಗಿ ಪ್ರೌಢಶಾಲೆಗಳಿಗೆ ಅನುದಾನ ತಂದು ಶೌಚಾಲಯದ ವ್ಯವಸ್ಥೆ ಕಲ್ಪಿಸಬೇಕೆಂದರು.

ಇದೇ ವೇಳೆ ಶಾಲೆಯ ಮುಖ್ಯೋಪಾಧ್ಯಾಯಿನಿ ಕೆ. ಎಸ್. ಉಷಾ ಅವರು ಕರ್ನಾಟಕ ಪಬ್ಲಿಕ್ ಶಾಲೆಗೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವಂತೆ ಶಾಸಕ ರವೀಂದ್ರನಾಥ್ ಮತ್ತು ಸಂಸದ ಸಿದ್ದೇಶ್ವರ ಅವರಿಗೆ ಮನವಿ ಮಾಡಿದರು. ಇದಕ್ಕೆ ಸ್ಪಂದಿಸುವುದಾಗಿ ರವೀಂದ್ರನಾಥ, ಸಿದ್ದೇಶ್ವರ ಭರವಸೆ ನೀಡಿದರು.

ಈ ಸಂದರ್ಭದಲ್ಲಿ ದೊಡ್ಡಬಾತಿ ಗ್ರಾಮ ಪಂಚಾಯ್ತಿ ಅಧ್ಯಕ್ಷ ಜೆಸಿಬಿ ಹನುಮಂತಪ್ಪ, ಜಿಲ್ಲಾ ಪಂಚಾಯತ್ ಉಪಾಧ್ಯಕ್ಷೆ ಸಾಕಮ್ಮ ಗಂಗಾಧರ ನಾಯ್ಕ, ಸದಸ್ಯೆ ರೇಣುಕಮ್ಮ ಕರಿಬಸಪ್ಪ, ಉತ್ತರ ವಲಯದ ಕ್ಷೇತ್ರ ಶಿಕ್ಷಣಾಧಿಕಾರಿ ಜಿ. ಕೊಟ್ರೇಶ್, ಗ್ರಾಮ ಪಂಚಾಯತ್ ಸದಸ್ಯರುಗಳಾದ ಬಿ.ಆರ್. ವೀರೇಶ್, ಮಂಜಮ್ಮ ಉಮೇಶ್, ಬಿ. ಸುಲ್ತಾನ್, ಪಂಚಾಯತ್ ರಾಜ್ ಕಾರ್ಯಪಾಲಕ ಅಭಿಯಂತರ ಪರಮೇಶ್ವರಪ್ಪ, ಸಹಾಯಕ ಕಾರ್ಯಪಾಲಕ ಅಭಿಯಂತರ ಬಿ. ಪುಟ್ಟಸ್ವಾಮಿ, ಬಿ.ಸಿ. ಪುರುಷೋತ್ತಮ, ಪ್ರಥಮ ದರ್ಜೆ ಗುತ್ತಿಗೆದಾರ ಬಿ.ಆರ್. ರೇವಣಸಿದ್ದಪ್ಪ, ಬಿ. ಸಿದ್ದಪ್ಪ, ಬಿ.ಜಿ. ಪುಷ್ಪಾವತಿ, ಜಿ.ಆರ್. ನಾಗರಾಜ್, ಹೊನ್ನಪ್ಪ ಸೇರಿದಂತೆ ಇತರರು ಇದ್ದರು.

# ಮಹಿಳಾ ದಿನಾಚರಣೆ : ವಿವಿಧ ಕ್ಷೇತ್ರಗಳ ಸಾಧಕಿಯರಿಗೆ ಸನ್ಮಾನ



ದಾವಣಗೆರೆ, ಮಾ.21- ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ದಾವಣಗೆರೆ ದಕ್ಷಿಣದ ಶಾಸಕ ಡಾ. ಶಾಮನೂರು ಶಿವಶಂಕರಪ್ಪ ಇಂದು ವಿವಿಧ ಕ್ಷೇತ್ರಗಳ ಮಹಿಳಾ ಸಾಧಕಿಯರನ್ನು ಗೌರವಿಸಿದರು.

ಮಾಜಿ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಅವರ ಗೃಹ ಕಛೇರಿ ಶಿವಪಾರ್ವತಿಯಲ್ಲಿ ನಡೆದ ಸರಳ ಸಮಾರಂಭದಲ್ಲಿ ಮಹಿಳಾ ಸಾಧಕಿಯರನ್ನು ಗೌರವಿಸಿದ ಡಾ. ಶಾಮನೂರು ಶಿವಶಂಕರಪ್ಪನವರು ತಮ್ಮ ಕಾರ್ಯಕ್ಷೇತ್ರಗಳಲ್ಲಿ ಇನ್ನಷ್ಟು ಸಾಧನೆ ಮಾಡಲಿ ಎಂದು ಶುಭ ಹಾರೈಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಎಸ್ಸೆಸ್ ಅವರು, 12ನೇ ಶತಮಾನದಲ್ಲಿ ಮಹಿಳೆಯರು ಪುರುಷರಷ್ಟೇ ಸರಿಸಮಾನರು ಎಂಬುದನ್ನು ಪ್ರತಿಪಾದಿಸಿದ ಬಸವಣ್ಣನವರು, ತಮ್ಮ ಅನುಭವ ಮಂಟಪದಲ್ಲಿ ಮಹಿಳೆಯರಿಗೂ ಸ್ಥಾನ ಕಲ್ಪಿಸುವ ಮೂಲಕ ಜಾರಿಗೆ ತಂದರು. ಇಂದು ದೇಶದ ಎಲ್ಲ ಕ್ಷೇತ್ರಗಳಲ್ಲೂ ಮಹಿಳೆಯರು ತಮ್ಮದೇ ಆದ ಸಾಧನೆ ಮೆರೆದಿದ್ದಾರೆ. ರಾಜಕೀಯ ಮತ್ತು ಶೈಕ್ಷಣಿಕವಾಗಿ ಪುರುಷರಷ್ಟೇ ಸಮಾನರಾಗಿರುವ ಮಹಿಳೆಯರಿಗೆ ಸಾಮಾಜಿಕ ಸಮಾನತೆ ಕಲ್ಪಿಸಬೇಕಾಗಿದೆ ಎಂದು ತಿಳಿಸಿದರು.

ದಾವಣಗೆರೆ ವಿಶ್ವವಿದ್ಯಾಲಯದ ಹಣಕಾಸು ಅಧಿಕಾರಿ ಪ್ರಿಯಾಂಕ, ಮಾಧವಿ ಡಿ.ಕೆ. ಗೋಪಾಲಕೃಷ್ಣ, ಉಪನ್ಯಾಸಕಿ ಓಂಕಾರಮ್ಮ ಅವರುಗಳು ಗೌರವ ಪಡೆದು ಮಾತನಾಡಿದರು.

ಶ್ರೀಮತಿ ಶೈಲಜಾ ದಾದಾಪೀರ್ (ಪಿಎಸ್ಐ, ಆಜಾದ್ ನಗರ ಪೊಲೀಸ್ ಠಾಣೆ) ಮಾಧವಿ ಡಿ.ಕೆ. (ಭರತ ನಾಟ್ಯ) ಕಾವ್ಯ ಬಿ.ಕೆ. (ಮಾಧ್ಯಮ ಕ್ಷೇತ್ರ) ಪ್ರಿಯಾಂಕ (ಹಣಕಾಸು ಅಧಿಕಾರಿ, ದಾವಣಗೆರೆ ವಿವಿ) ಓಂಕಾರಮ್ಮ (ಶಿಕ್ಷಣ) ಅನಿತಾ ಮತ್ತು ಸ್ಫೂರ್ತಿ (ವಿದ್ಯಾರ್ಥಿ ಸಮೂಹ) ಆಶಾ ಕಾಂಬ್ಳೆ (ಸೂಪರಿಂ ಟೆಂಡೆಂಟ್ ಸ್ಟಾಫ್ ನರ್ಸ್, ಜಿಲ್ಲಾಸ್ಪತ್ರೆ) ರತ್ನಮ್ಮ ಮತ್ತು ಈರಮ್ಮ (ಪೌರ ಕಾರ್ಮಿಕರು) ಶಾಸಕ ಶಾಮನೂರು ಶಿವಶಂಕರಪ್ಪ ಅವರಿಂದ ಗೌರವ ಪಡೆದ ಮಹಿಳಾ ಸಾಧಕಿಯರು.

ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ. ಶೆಟ್ಟಿ, ಜಿಲ್ಲಾ ಮಹಿಳಾ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀಮತಿ ಅನಿತಾಬಾಯಿ ಮಾಲತೇಶ್, ಕವಿತಾ ಚಂದ್ರಶೇಖರ್, ಉಮಾ ಕುಮಾರ್, ದ್ರಾಕ್ಷಾಯಣಮ್ಮ, ರಾಜೇಶ್ವರಿ, ಆಶಾ ಮುರುಳಿ, ಶುಭಮಂಗಳ, ನಾಗರತ್ನಮ್ಮ, ಶ್ರೀಮತಿ ಲಕ್ಷ್ಮಿಬಾಯಿ ಆವರಗೆರೆ ಅಣ್ಣೇಶ್ ನಾಯ್ಕ, ರಹತಾಜ್ ದಾದಾಪೀರ್, ರುದ್ರಮ್ಮ, ಮಂಗಳಮ್ಮ, ಮಂಜುಳಮ್ಮ, ಗೀತಾ ಚಂದ್ರಶೇಖರ್, ಗೌರಮ್ಮ, ಸಂಗೀತಾ, ಜಯಮ್ಮ, ಸಲ್ಮಾಬಾನು, ಇಂದ್ರಮ್ಮ, ಮಂಗಳಮ್ಮ, ಗೀತಾ, ಕಲಾವತಿ, ಶಿಲ್ಪ, ಜ್ಯೋತಿ, ಕೊಡಪಾನ ದಾದಾಪೀರ್, ಸಾಗರ್ ಎಲ್.ಎಂ.ಹೆಚ್. ಮತ್ತಿತರರು ಉಪಸ್ಥಿತರಿದ್ದರು.

## ನಾಳೆ ಕಟ್ಟಿಗೆಹಳ್ಳಿಯಲ್ಲಿ ತೇರು

ಜಗಳೂರು ತಾಲ್ಲೂಕಿನ ಕಟ್ಟಿಗೆಹಳ್ಳಿಯ ಶ್ರೀ ಬಸವೇಶ್ವರ ಸ್ವಾಮಿಯ ರಥೋತ್ಸವ ನಾಳೆ ದಿನಾಂಕ 23 ರ ಮಂಗಳವಾರ ಸಂಜೆ 5.30 ಕ್ಕೆ ಜರುಗಲಿದೆ.

ರಥೋತ್ಸವದ ಅಂಗವಾಗಿ ಇಂದು ರಾತ್ರಿ ಬಿಲ್ವಾರ್ಚನೆ ನಡೆಯುವುದು. ನಾಳೆ ದಿನಾಂಕ 23 ರ ಮಂಗಳವಾರ ಬೆಳಿಗ್ಗೆ 8 ಗಂಟೆಗೆ ಗಂಗಾ ಪೂಜೆ, 9 ಕ್ಕೆ ಬಸವ ಉತ್ಸವ ನಡೆಯಲಿದ್ದು, ಸಂಜೆ 5.30 ಕ್ಕೆ ಶ್ರೀ ಬಸವೇಶ್ವರ ಸ್ವಾಮಿಯ ಮಹಾರಥೋತ್ಸವ ಜರುಗುವುದು. ರಾತ್ರಿ 7.30 ಕ್ಕೆ ಭಜನೆ, ಶಾಲಾ ಮಕ್ಕಳಿಂದ ಮನರಂಜನೆ ನಡೆಯುವುದು. ದಿನಾಂಕ 24 ರ ಬುಧವಾರ ಮಧ್ಯಾಹ್ನ ಬೆಲ್ಲದ ಬಂಡಿ ಉತ್ಸವ, ರಾತ್ರಿ ನಾಟಕ 'ಪ್ರೀತಿ ಕೊಂದ ಕೊಲೆಗಾತಿ' (ಮಿಡಿದ ಹೃದಯಗಳು) ನಾಟಕ ಪ್ರದರ್ಶನ ಇರುವುದು. ದಿನಾಂಕ 25 ರ ಗುರುವಾರ ಬೆಳಿಗ್ಗೆ 8.30 ಕ್ಕೆ ಓಕಳಿ ಮತ್ತು ಗಂಗಾ ಪೂಜೆ ನಡೆಯುವುದು.

# ಕಾಂಗ್ರೆಸ್ ಅಧಿಕಾರಕ್ಕೆ ತರಲು ಸಂಘಟನೆ

## ಯುವ ಕಾಂಗ್ರೆಸ್ ರಾಜ್ಯಾಧ್ಯಕ್ಷ ರಕ್ಷಾ ರಾಮಯ್ಯ ಕರೆ



ದಾವಣಗೆರೆ, ಮಾ. 21- ಇತ್ತೀಚೆಗೆ ರಾಜ್ಯ ಕಾಂಗ್ರೆಸ್ ಪಕ್ಷದ ಯುವ ಘಟಕದ ಚುನಾವಣೆಯಲ್ಲಿ ವಿಜೇತರಾದ ರಕ್ಷಾ ರಾಮಯ್ಯ ಅವರ ತಂಡ ದಾವಣಗೆರೆಗೆ ಆಗಮಿಸಿ, ದಾವಣಗೆರೆ ಜಿಲ್ಲಾ ಯುವ ಘಟಕದ ಪದಾಧಿಕಾರಿಗಳನ್ನು ಸನ್ಮಾನಿಸುವುದರ ಜೊತೆಗೆ ಕಾಂಗ್ರೆಸ್ ಪಕ್ಷದ ಹಿರಿಯರೊಂದಿಗೆ ಸಮಾಲೋಚನೆ ನಡೆಸಿತು.

ಕರ್ನಾಟಕ ಯುವ ಕಾಂಗ್ರೆಸ್ ರಾಜ್ಯಾಧ್ಯಕ್ಷ ರಕ್ಷಾ ರಾಮಯ್ಯ, ಉಪಾಧ್ಯಕ್ಷೆ ಕೆ.ಆರ್. ಭವ್ಯ ಹಾಗೂ ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಅಖಿಲ್ ಅಹ್ಮದ್, ಪಿ.ವಿಶ್ವನಾಥ, ಕೆ. ಆರಿಫುಲ್ಲಾ. ಹೆಚ್.ಆರ್. ದೀಪಿಕಾ ರೆಡ್ಡಿ, ವಿ. ಚೈತ್ರಾ, ಪಿ.ಟಿ. ಭರತ್ ನಾಯ್ಕ ಆಗಮಿಸಿದ್ದರು.

ಈ ಸಂದರ್ಭದಲ್ಲಿ ಕಾಂಗ್ರೆಸ್ ಪದಾಧಿಕಾರಿಗಳ ಸಭೆಯಲ್ಲಿ ಮಾತಾಡಿದ ರಾಜ್ಯಾಧ್ಯಕ್ಷ ರಕ್ಷಾ ರಾಮಯ್ಯ ರಾಜ್ಯ ಮತ್ತು ಕೇಂದ್ರದಲ್ಲಿ ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತರಲು ಪಕ್ಷ ಸಂಘಟನೆ ಮಾಡಬೇಕು ಹಾಗೂ ಪಕ್ಷದ ಸಂಘಟನೆ ಜೊತೆಗೆ ಸಾಮಾಜಿಕ ಕಾರ್ಯ ಮಾಡಿ ಈಗಿನ ಯುವಕರು ಸಮಾಜಕ್ಕೆ ಮಾದರಿಯಾಗಬೇಕು ಎಂದು ತಿಳಿಸಿದರು.

ಅವರು ಇದೇ ವೇಳೆ ಶಾಸಕ ಶಾಮನೂರು ಶಿವಶಂಕರಪ್ಪ ಹಾಗೂ ಮಾಜಿ ಸಚಿವರಾದ ಎಸ್.ಎಸ್. ಮಲ್ಲಿಕಾರ್ಜುನ್ ಅವರನ್ನು ಭೇಟಿ ಮಾಡಿ ಕಾಂಗ್ರೆಸ್ ಪಕ್ಷದ ಸಂಘಟನೆ ಬಗ್ಗೆ ಚರ್ಚಿಸಿದರು.

ಸಭೆಯಲ್ಲಿ ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿಗಳಾದ ದಿನೇಶ್ ಕೆ. ಶೆಟ್ಟಿ, ಮುದೇಗೌಡ್ರ ಗಿರೀಶ್, ಜಿಲ್ಲಾ ಮಹಿಳಾ ಘಟಕದ ಜಿಲ್ಲಾಧ್ಯಕ್ಷರಾದ ಅನಿತಾಬಾಯಿ ಮಾಲತೇಶ್, ಶ್ರೀಮತಿ ಆಶಾರಾಣಿ ಮುರುಳಿ, ಶ್ರೀಮತಿ ಮಂಗಳಮ್ಮ, ಶ್ರೀಮತಿ ಸುಷ್ಮಾ ಪಾಟೀಲ್, ಶ್ರೀಮತಿ ರುದ್ರಮ್ಮ, ಮಾಜಿ ರಾಷ್ಟ್ರೀಯ ಯುವ ಪ್ರಧಾನ ಕಾರ್ಯದರ್ಶಿ ಇಬ್ರಾಹಿಂ ಖಲೀಲ್ ಉಲ್ಲಾ, ಮಾಜಿ ಜಿಲ್ಲಾಧ್ಯಕ್ಷ ಸೈಯ್ಯದ್ ಖಾಲಿದ್, ಜಿಲ್ಲಾ ಅಧ್ಯಕ್ಷ ನಿಖಿಲ್ ಕೊಂಡಜ್ಜಿ, ಎನ್‌ಎಸ್‌ಯುಐ ಜಿಲ್ಲಾಧ್ಯಕ್ಷ ಅಲಿ ರಹಮತ್ ಪೈಲ್ವಾನ್, ಪ್ರಧಾನ ಕಾರ್ಯದರ್ಶಿಗಳಾದ ರಂಜಿತ್ ಎಚ್ ಎಸ್, ಮೊಹಮ್ಮದ್ ವಾಜೀದ್, ಮೊಹಮ್ಮದ್ ಸಾಧಿಕ್, ವಿನಯ್ ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

## ಆರೋಗ್ಯ ರಕ್ಷಾ ಸಮಿತಿಗೆ ನೇಮಕ



ಮಲೇಬೆನ್ನೂರು, ಮಾ.21- ಪಟ್ಟಣದ ಸಮುದಾಯ ಆರೋಗ್ಯ ಕೇಂದ್ರದ ಆರೋಗ್ಯ ರಕ್ಷಾ ಸಮಿತಿಗೆ ಆರು ಜನರನ್ನು ನೇಮಕ ಮಾಡಲಾಗಿದೆ. ಪಾನಿಪೂರಿ ರಂಗನಾಥ್, ಜಿಗಳೇರ ಹಾಲೇಶಪ್ಪ, ಬೆಳಕೆರೆ ಮಂಜು ನಾಥ್, ಶಶಿಕಲಾ ಶಾಂತಕುಮಾರ್, ಎ.ಕೆ. ನಾಗ ರಾಜ್ ಮತ್ತು ಕೊಮಾರನಹಳ್ಳಿಯ ಐರಣಿ ಮೂರ್ತಿ ಅವರನ್ನು ಅಧಿಕಾರೇತರ ಸದಸ್ಯ ರನ್ನಾಗಿ ಸಂಸದ ಜಿ.ಎಂ. ಸಿದ್ದೇಶ್ವರ್, ಮಾಜಿ ಶಾಸಕ ಬಿ.ಪಿ. ಹರೀಶ್, ಜಿಲ್ಲಾ ಬಿಜೆಪಿ ಅಧ್ಯಕ್ಷ ಹನಗವಾಡಿ ವೀರೇಶ್, ಜಿ. ಪಂ. ಸದಸ್ಯ ಬಿ.ಎಂ. ವಾಗೀಶ್ ಸ್ವಾಮಿ ಶಿಫಾ ರಸ್ಸಿನ ಮೇರೆಗೆ ಸರ್ಕಾರ ನೇಮಕ ಮಾಡಿದೆ.

## ನಗರದಲ್ಲಿ ಇಂದು ಮಹಿಳಾ ದಿನಾಚರಣೆ

ಜಿಲ್ಲಾ ವೀರಶೈವ ಲಿಂಗಾಯತ ಪಂಚಮ ಸಾಲಿ ಮಹಿಳಾ ಘಟಕದ ವತಿಯಿಂದ ಇಂದು ಮಧ್ಯಾಹ್ನ 2.30ಕ್ಕೆ ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯ ಕ್ರಮವನ್ನು ನಗರದ ಪಿ.ಜೆ. ಬಡಾವಣೆಯ ಚೇತನ ಹೋಟೆಲ್ ರಸ್ತೆಯಲ್ಲಿರುವ ಪಂಚಮ ಸಾಲಿ ಸಮಾಜದ ಕಚೇರಿಯಲ್ಲಿ ಹಮ್ಮಿಕೊಳ್ಳ ಲಾಗಿದೆ. ಅಧ್ಯಕ್ಷತೆಯನ್ನು ಮಹಿಳಾ ಘಟಕದ ಜಿಲ್ಲಾ ಅಧ್ಯಕ್ಷರಾದ ರಶ್ಮಿ ನಾಗರಾಜ ಕುಂಕೋದ್ ಹಾಗೂ ನಗರ ಮಹಿಳಾ ಘಟಕದ ಅಧ್ಯಕ್ಷರಾದ ವಾಣಿ ಗುರು ವಹಿಸು ವರು. ಅತಿಥಿಗಳಾಗಿ ಡಾ. ಪುಷ್ಪಲತಾ, ಕಂಚಿಕೇರಿ ಸುಶೀಲಮ್ಮ ಆಗಮಿಸಲಿದ್ದಾರೆ ಎಂದು ಜಿಲ್ಲಾ ಪ್ರಧಾನ ಕಾರ್ಯದರ್ಶಿ ವೀಣಾ ಕೊಟ್ರೇಶ್ ತಿಳಿಸಿದ್ದಾರೆ.

# ಗೋಹತ್ಯೆ ನಿಷೇಧ : ಯು.ಟಿ.ಖಾದರ್ ಹೇಳಿಕೆಗೆ ದಿನೇಶ್ ಕೆ. ಶೆಟ್ಟಿ ಸ್ವಾಗತ

**ಬಿಜೆಪಿ ದ್ವಂದ್ವ ನಿಲುವಿನಿಂದ ಹೊರಬರಲಿ: ಆಹಾರ ಪದ್ದತಿಗೆ ವಿರೋಧಿಸುವುದು ಸಲ್ಲ.**

ದಾವಣಗೆರೆ, ಮಾ.21 - ಗೋಹತ್ಯೆ ನಿಷೇಧ ಕುರಿತಂತೆ ಮಾಜಿ ಸಚಿವ ಯು.ಟಿ.ಖಾದರ್ ವಿಧಾನಸಭೆಯಲ್ಲಿ ನೀಡಿರುವ ಹೇಳಿಕೆಯನ್ನು ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ. ಶೆಟ್ಟಿ ಮತ್ತು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಅಯೂಬ್ ಪೈಲ್ವಾನ್ ಅವರು ಸ್ವಾಗತಿಸಿದ್ದಾರೆ.

ಈ ಕುರಿತು ಮಾತನಾಡಿದ ಅವರು, ಬಿಜೆಪಿ ಪಕ್ಷ ಗೋಹತ್ಯೆ ನಿಷೇಧ ಕುರಿತಂತೆ ಮೊದಲು ದ್ವಂದ್ವ ನಿಲುವಿನಿಂದ ಹೊರಬರಲಿ ಎಂದರು. 'ಒಂದು ರಾಷ್ಟ್ರ, ಒಂದು ತೆರಿಗೆ' ಎನ್ನುವ ಬಿಜೆಪಿ ಗೋವುಗಳ ವಿಷಯದಲ್ಲಿ ಏಕೆ ದ್ವಂದ್ವ ನಿಲುವು ಹೊಂದಿದೆ. ಇಡೀ ದೇಶದಲ್ಲೇ ಗೋ ಹತ್ಯೆ ನಿಷೇಧವನ್ನು ಜಾರಿಗೆ ತರಬೇಕು ಹಾಗೂ ಗೋವುಗಳನ್ನು ಸಾಕಲು ಪ್ರತಿ ಗ್ರಾಮಗಳಲ್ಲೂ ಗೋಶಾಲೆಗಳನ್ನು ಆರಂಭಿಸಬೇಕು ಎಂದು ಒತ್ತಾಯಿಸಿದ್ದಾರೆ. ದೇಶದ ಪ್ರಮುಖ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಜೈನ್ ಸಮಾಜ ದವರು ಗೋಶಾಲೆಗಳನ್ನು ಅತ್ಯುತ್ತಮವಾಗಿ ನಡೆಸುತ್ತಿದ್ದು, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಗೋ ಹತ್ಯೆ ನಿಷೇಧಿಸುವ ಮುನ್ನ ಜೈನ್ ಸಮಾಜದವರು ನಡೆಸುವ ಮಾದರಿಯಲ್ಲಿ ಪ್ರತಿ ಗ್ರಾಮಗಳಲ್ಲೂ ಗೋಶಾಲೆಗಳನ್ನು ತೆರೆಯಬೇ ಕೆಂದು ದಿನೇಶ್ ಕೆ.ಶೆಟ್ಟಿ ಒತ್ತಾಯಿಸಿದ್ದಾರೆ.

## ಕೃಷಿ ವಿಜ್ಞಾನ ಕೇಂದ್ರದಿಂದ ಕಿಸಾನ್ ಮೇಳ



ದಾವಣಗೆರೆ, ಮಾ.21 - ಐಸಿಎಆರ್ ತರಳಬಾಳು ಕೃಷಿ ವಿಜ್ಞಾನ ಕೇಂದ್ರ, ದಾವಣಗೆರೆ ಇವರಿಂದ ನಿಕ್ರಾ ಗ್ರಾಮವಾದ ಅಗಸನಕಟ್ಟೆ ಯಲ್ಲಿ ಕಿಸಾನ್ ಮೇಳ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.


ಡಾ. ಶ್ರೀನಿವಾಸ್ ರೆಡ್ಡಿ, ನೋಡಲ್ ಅಧಿಕಾರಿ, ಅಟಾರಿ, ಬೆಂಗಳೂರು ಇವರು ಕಾರ್ಯಕ್ರಮ ಉದ್ಘಾಟಿಸಿದರು. ನಿಕ್ರಾ ಯೋಜನೆಯ ಸಂಪೂರ್ಣ ಉಪಯೋಗವನ್ನು ಗ್ರಾಮಸ್ಥರು ಪಡೆದುಕೊಂಡರು. ನೀರು ಮತ್ತು ಮಣ್ಣಿನ ಸಂರಕ್ಷಣೆ ಬಗ್ಗೆ ಹೆಚ್ಚು ಮಾಹಿತಿಯನ್ನು ಪಡೆದುಕೊಂಡು ಮುಂದಿನ ದಿನಗಳಲ್ಲಿ ಈ ಕೆಲಸವನ್ನು ಮುಂದುವರೆಸಿಕೊಂಡು ಹೋಗ ಬೇಕೆಂದು ಸಲಹೆ ನೀಡಿದರು. ಕಾರ್ಯ ಕ್ರಮದಲ್ಲಿ ಕೇಂದ್ರದ ಮುಖ್ಯಸ್ಥ ಡಾ. ದೇವರಾಜ್ ಮೆಕ್ಕೆಜೋಳದಲ್ಲಿ ಅಂತರ ಬೆಳೆಯಾಗಿ ತೊಗರಿಯನ್ನು ಬೆಳೆಯುವುದರಿಂದ ರೈತರು ಆದಾಯದ ಜೊತೆಗೆ ಮಣ್ಣಿನ ಫಲವತ್ತತೆಯನ್ನು ಕಾಪಾಡಿಕೊಳ್ಳಬಹುದು ಎಂದರು.

ಕಾರ್ಯಕ್ರಮದಲ್ಲಿ ವಿಸಿಆರ್ ಎಂಸಿ ಅಧ್ಯಕ್ಷ ಚನ್ನಪ್ಪ ಆರ್ಸಿ ನಿಕ್ರಾ ಯೋಜನೆಯಿಂದ ರೈತರಿಗೆ ಬಹಳಷ್ಟು ಅನುಕೂಲವಾಗಿದೆ ಎಂದರು. ಗ್ರಾಮ ಪಂಚಾಯತಿ ಸದಸ್ಯ ಶಿವಕುಮಾರ್, ಬಸವರಾಜ್ ಹಾಗೂ ಪ್ರಗತಿಪರ ರೈತರು, ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಗಳು ಭಾಗವಹಿಸಿದ್ದರು.

## ವಡೆಯರ ಬಸವಾಪುರದಲ್ಲಿ ಸಂಭ್ರಮದ ರಥೋತ್ಸವ



ಮಲೇಬೆನ್ನೂರು, ಮಾ.21- ಸಮೀಪದ ವಡೆಯರ ಬಸವಾಪುರ ಗ್ರಾಮದ ಶ್ರೀ ಬಸವೇಶ್ವರ ದೇವರ ರಥೋತ್ಸವವ ಜರುಗಿತು. ಗ್ರಾಮಸ್ಥರು ಸೇರಿದಂತೆ ಭಕ್ತರು ರಥೋತ್ಸವದಲ್ಲಿ ಪಾಲ್ಗೊಂಡು ಭಕ್ತಿ ಸಮರ್ಪಿಸಿದರು.

ANVAYA
ಅನ್ವಯ ಆಯುರ್ವೇದ ಆಸ್ಪತ್ರೆ
ವಿಳಾಸ : #1981, 10ನೇ ಕ್ರಾಸ್, ಸಾಯಿಬಾಬಾ ದೇವಸ್ಥಾನದ ಹತ್ತಿರ, ಎಂ.ಸಿ.ಸಿ. 'ಎ' ಬ್ಲಾಕ್, ದಾವಣಗೆರೆ.
ಮೊ. : 08192-252228, 8618642929
ಆಸ್ಪತ್ರೆಯಲ್ಲಿ ಲಭ್ಯವಿರುವ ಸೌಲಭ್ಯಗಳು :
✦ ಸುಸಜ್ಜಿತವಾದ ಒಳರೋಗಿಗಳ ಮತ್ತು ಹೊರ ರೋಗಿಗಳ ವಿಭಾಗ
✦ ರಕ್ತ ಮತ್ತು ಮೂತ್ರ ಪರೀಕ್ಷೆ ವಿಭಾಗ
✦ ಬೃಹತ್ ಆಯುರ್ವೇದ ಔಷಧಾಲಯ
✦ ಅಭ್ಯಂಗ ಮತ್ತು ಸ್ವೇದ (ಮಸಾಜ್ ಚಿಕಿತ್ಸೆ)
✦ ಪಂಚಕರ್ಮ ಚಿಕಿತ್ಸೆ (ಗಂಡಸರಿಗೆ ಮತ್ತು ಹೆಂಗಸರಿಗೆ ಪ್ರತ್ಯೇಕ)
✦ ಲೀಚ್ ಚಿಕಿತ್ಸೆ (ದುಷ್ಟ ರಕ್ತದ ಚಿಕಿತ್ಸೆ)
✦ ಸ್ವರ್ಣಬಿಂಧು ಪ್ರಾಶನ (ಪುಷ್ಯ ನಕ್ಷತ್ರದಂದು)
✦ ಗರ್ಭಿಣಿ ಆರೈಕೆ ✦ ಸೂತಿಕ ಆರೈಕೆ
✦ ಮದ್ಯವ್ಯಸನಿಗಳ ಪುನಶ್ಚೇತನ ಕೇಂದ್ರ
✦ ಹಲವು ರೋಗಗಳಿಗೆ ಸಲಹೆ ಮತ್ತು ಶಾಸ್ತ್ರೋಕ್ತ ಚಿಕಿತ್ಸೆ


## ನಗರದಲ್ಲಿ ಇಂದು ಪ್ರತಿಭಟನೆ

ಮುದ್ರಣ ಕಾಗದ ಮತ್ತು ಕಚ್ಚಾ ಸಾಮಗ್ರಿಗಳ ಬೆಲೆ ಏರಿಕೆ ಖಂಡಿಸಿ ಅಖಿಲ ಭಾರತೀಯ ಮುದ್ರಕರ ಒಕ್ಕೂಟವು ಇಂದು ದೇಶಾದ್ಯಂತ 'ಕಪ್ಪು ದಿನ'ವನ್ನಾಗಿ ಆಚರಿಸಲು ಕರೆ ನೀಡಿದ್ದು, ಜಿಲ್ಲೆಯಾದ್ಯಂತ ಮುದ್ರಣ ಮಾಲೀಕರು ಕೈಗೆ ಕಪ್ಪು ಬಟ್ಟೆ ಧರಿಸಿ ಪ್ರತಿಭಟನೆಗೆ ಬೆಂಬಲ ಸೂಚಿಸಿ, ಅವೈಜ್ಞಾನಿಕ ಬೆಲೆ ಏರಿಕೆ ನಿಯಂತ್ರಿಸಲು ಮಧ್ಯ ಪ್ರವೇಶಿಸಲು ಪ್ರಧಾನಿಗೆ ಆಗ್ರಹಿಸಿ ಜಿಲ್ಲಾಧಿಕಾರಿಗಳ ಮೂಲಕ ಮನವಿ ಸಲ್ಲಿಸಲಾಗುವುದು ಎಂದು ಜಿಲ್ಲಾ ಘಟಕದ ಪ್ರಧಾನ ಕಾರ್ಯದರ್ಶಿ ಎಸ್. ರುದ್ರೇಶಿ ತಿಳಿಸಿದ್ದಾರೆ.

## ಸಾರ್ವಜನಿಕ ಪ್ರಕಟಣೆ

**ನನ್ನ ಕಕ್ಷಿದಾರರಾದ ದಾವಣಗೆರೆ ಸಿಟಿ, ಶಾಮನೂರು ವಿಭಾಗದ ವಾಸಿಗಳಾದ ದಿವಂಗತ ದೊಡ್ಡ ಹನುಮಂತಪ್ಪನವರ ಮಕ್ಕಳಾದ (1) ಶ್ರೀ ಹನುಮಂತಪ್ಪ, (2) ಶ್ರೀ ರುದ್ರಪ್ಪ ಮತ್ತು ಲೇಟ್ ಕಲ್ಲಳ್ಳಿ ಸಿದ್ದಪ್ಪನವರ ಮಕ್ಕಳಾದ (3) ಶ್ರೀಮತಿ ಮಂಜಮ್ಮ, (4) ಶ್ರೀಮತಿ ಭಾಗ್ಯಮ್ಮ ಮತ್ತು (5) ಶ್ರೀ ಎಸ್. ನವೀನ್, (ಶ್ರೀ ಹನುಮಂತಪ್ಪ - ಮೊಬೈಲ್ ನಂ.9448438179) ಇವರ ಪರವಾಗಿ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ:**

ಮೇಲ್ಕಂಡ ನಮ್ಮ ಕಕ್ಷಿದಾರರುಗಳು ದಾವಣಗೆರೆ ತಾಲ್ಲೂಕು, ಶಾಮನೂರು ಗ್ರಾಮದ ಸ.ನಂ.28/1, 28/6 & 28/7 ರಲ್ಲಿ ಒಟ್ಟು ವಿಸ್ತೀರ್ಣ 01 ಎಕರೆ 20 ಗುಂಟೆ ಜಮೀನುಗಳಿಗೆ ಪ್ರತ್ಯೇಕವಾಗಿ ಮಾಲೀಕರಾಗಿರುತ್ತಾರೆ. ಸದರಿ ಜಮೀನುಗಳು ಮತ್ತು ಸ.ನಂ. 28/3 ರಿಂದ 5 ರ ಜಮೀನುಗಳಿಗೆ ಸಂಬಂಧಪಟ್ಟಂತೆ ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರ, ದಾವಣಗೆರೆ ಇವರಿಂದ ದಿನಾಂಕ 22.12.2020 ರಂದು ಜಂಟಿ ಅಂತಿಮ ವಸತಿ ವಿನ್ಯಾಸ ಅನುಮೋದನೆಯಾಗಿದ್ದು ಮತ್ತು ಮಹಾನಗರಪಾಲಿಕೆ, ದಾವಣಗೆರೆ ಇವರಿಂದ ದಿನಾಂಕ 04.02.2021 ರಂದು ಸಿ.ಆರ್.ನಂ.83/2020-21 ರಲ್ಲಿ ಡೋರ್ ನಂಬರ್ ನೀಡಿ ಆದೇಶವಾಗಿರುತ್ತದೆ. ಸದರಿ ಜಂಟಿ ಅಂತಿಮ ವಸತಿ ವಿನ್ಯಾಸದ ಬಗ್ಗೆ ಮತ್ತು ಡೋರ್ ನಂಬರ್ ನೀಡಿರುವ ಆದೇಶಗಳ ಬಗ್ಗೆ ನಮ್ಮ ಕಕ್ಷಿದಾರರುಗಳ ತಕರಾರು ಇದ್ದು, ಸದರಿ ಆದೇಶಗಳನ್ನು ರದ್ದುಪಡಿಸುವ ಬಗ್ಗೆ ನಮ್ಮ ಕಕ್ಷಿದಾರರುಗಳು ಮಾನ್ಯ ಆಯುಕ್ತರು, ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರ ಮತ್ತು ಮಾನ್ಯ ಆಯುಕ್ತರು, ಮಹಾನಗರಪಾಲಿಕೆ ಇವರುಗಳಿಗೆ ನೋಟಿಸ್ ನೀಡಿರುತ್ತಾರೆ. ಆ ಕಾರಣ ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ದಾವಣಗೆರೆ ತಾಲ್ಲೂಕು, ಶಾಮನೂರು ಗ್ರಾಮದ ಸ.ನಂ.28/1, 3 ರಿಂದ 7 ರಲ್ಲಿನ ಪೋಡುಗಳಲ್ಲಿ ಆಗಿರುವಂತಹ ವಸತಿ ನಿವೇಶನಗಳ ಬಗ್ಗೆ ಯಾವುದೇ ರೀತಿಯ ಕ್ರಯದ ಖರೀದಿ ಕರಾರು ಪತ್ರವಾಗಲೀ ಅಥವಾ ಕ್ರಯಪತ್ರವಾಗಲೀ ಅಥವಾ ಇನ್ನಾವುದೇ ರೀತಿಯ ಪತ್ರ ವ್ಯವಹಾರ ವನ್ನಾಗಲೀ ಅಥವಾ ಹಣಕಾಸಿನ ವ್ಯವಹಾರವನ್ನಾಗಲೀ ಮಾಡಬಾರದೆಂದು ತಿಳಿಯಪಡಿಸಲಾಗಿದೆ. ಒಂದು ವೇಳೆ ಮೇಲ್ಕಂಡ ಜಮೀನುಗಳಲ್ಲಿ ನಿರ್ಮಾಣಗೊಂಡಿರುವ ನಿವೇಶನಗಳಿಗೆ ಸಂಬಂಧಪಟ್ಟಂತೆ ಯಾವುದೇ ತೆರನಾದ ವ್ಯವಹಾರ ಮಾಡಿದಲ್ಲಿ ನಮ್ಮ ಕಕ್ಷಿದಾರರಿಗೆ ಬಂಧನಕಾರಿಯಾಗಿರುವುದಿಲ್ಲ ಮತ್ತು ಮುಂದೆ ಆಗುವ ತಂಟೆ - ತಕರಾರುಗಳಿಗೆ ನೀವುಗಳೇ ಜವಾಬ್ದಾರರಾಗುತ್ತೀರಿ.

ಸಂಪರ್ಕಿಸಬೇಕಾದ ವಿಳಾಸ :
**ಶ್ರೀ ಎ.ಎಂ. ಹೆಗಡೆ,** ವಕೀಲರು,
# 82/18, ಪಿ.ಬಿ. ರಸ್ತೆ, ಇಂಡಿಯನ್ ಬ್ಯಾಂಕ್ ಹತ್ತಿರ,
ದಾವಣಗೆರೆ. ಮೊ.ನಂ. : 94483 05888

ಸಹಿ/-
**(ಎ.ಎಂ. ಹೆಗಡೆ)**
ವಕೀಲರು

## ಇನ್ನೋವಾ ಮನೆಯಲ್ಲಿದ್ದರೂ ಟೋಲ್‌ನಲ್ಲಿ ಶುಲ್ಕ ಕಟ್ !

ದಾವಣಗೆರೆ, ಮಾ. 21 - ಇನ್ನೋವಾ ವಾಹನ ಮಾಲೀಕನ ಮನೆಯಲ್ಲಿದ್ದರೂ, ಅದು ಹೆಬ್ಬಾಳ್ ಟೋಲ್ ಮೂಲಕ ಹಾದು ಹೋಗಿದೆ ಎಂದು, ಅದಕ್ಕೆ ಸಂಬಂಧಿಸಿದಂತೆ ಫಾಸ್ಟ್‌ಟ್ಯಾಗ್‌ನಿಂದ ರೂ. 60 ಶುಲ್ಕ ವಸೂಲಾತಿ ಮಾಡಲಾಗಿದೆ ಎಂದು ಆರೋಪಿಸಲಾಗಿದೆ.

ಪ್ರಕರಣಕ್ಕೆ ಸಂಬಂಧಪಟ್ಟಂತೆ ಕೆಎ 17 ಎನ್ 6828 ಸಂಖ್ಯೆಯ ಇನ್ನೋವಾ ವಾಹನ ಮಾಲೀಕರಾದ ನ್ಯಾಯವಾದಿ ಆವರಗೆರೆಯ ಎಸ್. ಪರಮೇಶ್ ಅವರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಲಿಖಿತ ಮೂಲಕ ದೂರು ಸಲ್ಲಿಸಿ, ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಕೇಳಿಕೊಂಡಿದ್ದಾರೆ. ಇದೇ ದಿನಾಂಕ 19ರ ರಾತ್ರಿ 11.14ರ ಸಮಯದಲ್ಲಿ ತಾನು ಮನೆಯಲ್ಲಿದ್ದೆ, ವಾಹನ ಕೂಡ ಮನೆಯ ವಠಾರದಲ್ಲಿತ್ತು. ಆದರೂ, ಟೋಲ್ ಮೂಲಕ ವಾಹನ ಹಾದು ಹೋಗಿದೆ ಎಂದು ಫಾಸ್ಟ್‌ಟ್ಯಾಗ್‌ನಿಂದ ಶುಲ್ಕ ವಸೂಲಾತಿ ಮಾಡಿರುವುದು ತನಗೆ ಅಚ್ಚರಿಯನ್ನುಂಟು ಮಾಡಿದೆ ಎಂದು ಪರಮೇಶ್ ಅವರು ದೂರಿನಲ್ಲಿ ಹೇಳಿದ್ದಾರೆ.

## ಸ್ಥಾಯಿ ಸಮಿತಿ ಅಧ್ಯಕ್ಷ ಗೋಣೆಪ್ಪ ಅವರಿಂದ ಇಂದು ಅಧಿಕಾರ ಸ್ವೀಕಾರ



ದಾವಣಗೆರೆ ಮಹಾನಗರ ಪಾಲಿಕೆ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಎಲ್.ಡಿ. ಗೋಣಪ್ಪ ಅವರ ಕಚೇರಿ ಉದ್ಘಾಟನಾ ಸಮಾರಂಭವು ಪಾಲಿಕೆ ಕಚೇರಿಯಲ್ಲಿ ಇಂದು ಮಧ್ಯಾಹ್ನ 12 ಕ್ಕೆ ನಡೆಯಲಿದೆ. ತಮ್ಮ ಕಚೇರಿಯನ್ನು ಸರಳ ಪೂಜಾ ಕಾರ್ಯಕ್ರಮದೊಂದಿಗೆ ಪ್ರಾರಂಭಿಸುವುದರ ಮೂಲಕ ಗೋಣಪ್ಪ ಅವರು ಸ್ಥಾಯಿ ಸಮಿತಿ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಲಿದ್ದಾರೆ. ಮಹಾಪೌರರಾದ ಎಸ್.ಟಿ. ವೀರೇಶ್, ಉಪ ಮಹಾಪೌರರಾದ ಶ್ರೀಮತಿ ಶಿಲ್ಪಾ ಜಯಪ್ರಕಾಶ್, ಜಿಲ್ಲಾ ಬಿಜೆಪಿ ನಿಕಟಪೂರ್ವ ಅಧ್ಯಕ್ಷ ಯಶವಂತರಾವ್ ಜಾಧವ್ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

# ರಾಜ್ಯದಲ್ಲಿ ದಾವಣಗೆರೆ ಮುಸ್ಲಿಂ ಹಾಸ್ಟೆಲ್ ನಂ.1 ಸ್ಥಾನಕ್ಕೇರಲಿ

### ಮುಸ್ಲಿಂ ಹಾಸ್ಟೆಲ್‌ನ 86ನೇ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ವಕ್ಫ್ ಬೋರ್ಡ್‌ನ ರಾಜ್ಯ ಸದಸ್ಯ ಅನ್ವರ್ ಬಾಷ ಸದಾಶಯ



ದಾವಣಗೆರೆ, ಮಾ.20- ರಾಜ್ಯದಲ್ಲಿ ಮೈಸೂರಿನ ಮುಸ್ಲಿಂ ಹಾಸ್ಟೆಲ್ ಮೊದಲ ಸ್ಥಾನದಲ್ಲಿದ್ದರೆ, ದಾವಣಗೆರೆಯ ಮುಸ್ಲಿಂ ಹಾಸ್ಟೆಲ್ 2ನೇ ಸ್ಥಾನದಲ್ಲಿದೆ. ಮುಂದಿನ ದಿನಗಳಲ್ಲಿ ದಾವಣಗೆರೆ ಮುಸ್ಲಿಂ ಹಾಸ್ಟೆಲ್ ಮೊದಲ ಸ್ಥಾನ ಪಡೆಯಲಿ ಎಂದು ವಕ್ಫ್ ಬೋರ್ಡ್ ನ ರಾಜ್ಯ ಸದಸ್ಯ ಅನ್ವರ್ ಬಾಷ ಸದಾಶಯ ವ್ಯಕ್ತಪಡಿಸಿದರು.

ಅವರು, ಇಂದು ಸಂಜೆ ನಗರದ ಪಿ.ಜೆ. ಬಡಾವಣೆಯಲ್ಲಿರುವ ಮುಸ್ಲಿಂ ಎಜುಕೇಷನ್ ಫಂಡ್ ಅಸೋಸಿಯೇಷನ್ ನ ಮುಸ್ಲಿಂ ಹಾಸ್ಟೆಲ್ ಆವರಣದಲ್ಲಿ ಹಾಸ್ಟೆಲ್ ನ 86ನೇ ವಾರ್ಷಿಕೋತ್ಸವ, ನೂತನ ಗ್ರಂಥಾಲಯ ಕಟ್ಟಡ ಮತ್ತು ಆಡಳಿತ ಕಚೇರಿಯ ಉದ್ಘಾಟನಾ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಮಾತನಾಡಿದರು.

ಜಿಲ್ಲೆಯಿಂದ ನೀವು ಸಮಾಜದ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗೆ, ಸಮಾಜದ ಯಾವುದೇ ಕಾರ್ಯಕ್ರಮಗಳ ಆಯೋಜಿಸಿದರೂ ನಾನು ಸಹಕಾರ ನೀಡುವೆ. ಯಾವ ಸಂದರ್ಭದಲ್ಲಾದರೂ ಕರ್ತವ್ಯ ನಿಷ್ಠೆಯಿಂದ ಕೆಲಸ ಮಾಡಲು ಸಿದ್ಧನಿದ್ದೇನೆಂದರು.

ಹಾಸ್ಟೆಲ್ ನ ಪ್ರತಿ ಲೆಕ್ಕಾಚಾರವೂ ಅಚ್ಚುಕಟ್ಟಾಗಿರಲಿ. ಒಂದು ರೂಪಾಯಿ ಖರ್ಚು ಮಾಡಿದರೂ ಅದು ಪಕ್ಕಾ ಇರಬೇಕು. ಲೆಕ್ಕಚಾರ ಸರಿಯಾಗಿಟ್ಟುಕೊಂಡು ಆಯವ್ಯಯದಲ್ಲಿ ಆಡಿಟ್ ಮಾಡಿಸಿದರೆ ಅದು ಮುಂದೆ ಯಾವುದೇ ತೊಂದರೆಗಳು ಸಂಭವಿಸುವುದಿಲ್ಲ. ಅಲ್ಲದೇ ನಿಮಗೇ ಗೌರವವೂ ಸಿಗಲಿದೆ. ನಿಮ್ಮ ಆಡಳಿತವೂ ಸುಗಮವಾಗಿ ಸಾಗಲು ಅನುಕೂಲ ವಾಗಲಿದೆ. 1914ರ ಲೀಸ್ ರೂಲ್ಸ್ ಪ್ರಕಾರ ಅಗ್ರಿಮೆಂಟ್ ಮಾಡಿಸಿಕೊಳ್ಳಿ. ಆಗ ಅದು ಲೆಕ್ಕಾಚಾರಕ್ಕೂ ಪೂರಕವಾಗಲಿದೆ ಎಂದು ಕಿವಿಮಾತು ಹೇಳಿದರು.

ಮುಖ್ಯ ಅತಿಥಿಗಳಾಗಿದ್ದ ಮಾತನಾಡಿ, ಪ್ರತಿಯೊಬ್ಬ ಮಕ್ಕಳಲ್ಲೂ ಪ್ರತಿಭೆ, ಬುದ್ಧಿವಂತಿಕೆ ಅಡಗಿರಲಿದ್ದು, ಅದನ್ನು ಗುರುತಿಸಿ ಪ್ರೋತ್ಸಾಹಿಸುವ ಕೆಲಸವನ್ನು ಪೋಷಕರು ಗುರುತಿಸಬೇಕು. ನಮ್ಮಿಂದ ಸಾಧ್ಯವಾದಷ್ಟು ಸಮಾಜಕ್ಕೆ ಉತ್ತಮ ಕೊಡುಗೆಗಳನ್ನು ನೀಡಿದಾಗ ನಮ್ಮ ಮರಣದ ನಂತರವೂ ಹೆಸರು ಚಿರವಾಗಿ ಉಳಿಯಲಿದೆ ಎಂದರು.

ನೂತನ ಗ್ರಂಥಾಲಯ ಕಟ್ಟಡ ಉದ್ಘಾಟಿಸಿ ಮಾತನಾಡಿದ ಮಾಜಿ ಎಂಎಲ್‌ಸಿ ಅಬ್ದುಲ್ ಜಬ್ಬಾರ್, ಸಮಾಜದ ಇಂತಹ ಅಭಿವೃದ್ಧಿ ಚಟುವಟಿಕೆಗಳ ಯಶಸ್ವಿಗೆ ಸಮಾಜದ ಬಾಂಧವರು ಪಾಲ್ಗೊಳ್ಳುವಿಕೆ, ಪ್ರೋತ್ಸಾಹ ಬಹಳ ಮುಖ್ಯವಾಗಲಿದೆ. ಈ ಹಾಸ್ಟೆಲ್ ನಲ್ಲಿ ವಿದ್ಯೆ ಕಲಿತು ಉನ್ನತ ಸ್ಥಾನ ಪಡೆದ ಮೇಲೆ ತಮ್ಮಂತೆಯೇ ಇತರೆ ವಿದ್ಯಾರ್ಥಿಗಳು ಸಹ ವಿದ್ಯೆ ಕಲಿತು ಭವಿಷ್ಯ ರೂಪಿಸಿಕೊಳ್ಳುವಂತಾಗಲು ಉತ್ತಮ ಕೊಡುಗೆ ನೀಡಲು ಮುಂದಾಗಬೇಕು. ಇಲ್ಲಿ ವಿದ್ಯೆ ಕಲಿತದ್ದನ್ನು ಮರೆಯಬಾರದೆಂದರು.

ಮುಖಂಡ ಸೈಯದ್ ಸೈಫುಲ್ಲಾ ಮಾತನಾಡಿ, ಸಮಾಜದ ಯುವ ಸಮೂಹವು ಉನ್ನತ ಶಿಕ್ಷಣ ಪಡೆದು ಉನ್ನತ ಹುದ್ದೆ ಅಲಂಕರಿಸುವತ್ತ ಆಸಕ್ತಿ ತೋರಬೇಕೆಂದರು.


ಸಮಾರಂಭದಲ್ಲಿ ಪಾಲ್ಗೊಂಡ ಶಾಸಕ ಡಾ. ಶಾಮನೂರು ಶಿವಶಂಕರಪ್ಪ ಅವರು ಹಾಸ್ಟೆಲ್‌ನ ಆಡಳಿತ ಕಚೇರಿ ಉದ್ಘಾಟಿಸಿದರು.

ಇದೇ ವೇಳೆ ಹಾಸ್ಟೆಲ್ ಗೆ ಜಾಗವನ್ನು ದಾನವಾಗಿ ನೀಡಿದ ದಾನಿಗಳೂ ಆದ ಹಾಸ್ಟೆಲ್ ನ ಸಂಸ್ಥಾಪಕ ಅಬ್ದುಲ್ ಅಜೀಜ್ ಸಾಹೇಬ್ ಅವರ ಕುಟುಂಬದ ಸದಸ್ಯರಿಬ್ಬರಿಗೆ ಸನ್ಮಾನಿಸಿ ಗೌರವಿಸಲಾಯಿತು.

ಸಮಾರಂಭದಲ್ಲಿ ಮುಸ್ಲಿಂ ಹಾಸ್ಟೆಲ್ ನ ಅಧ್ಯಕ್ಷ ಬಾಷಾ ಪೈಲ್ವಾನ್ ಅಧ್ಯಕ್ಷತೆ ವಹಿಸಿದ್ದರು. ಪಾಲಿಕೆ ಸದಸ್ಯ ಕಬೀರ್ ಅಹ್ಮದ್, ವಕ್ಫ್ ಮಂಡಳಿ ಮಾಜಿ ಅಧ್ಯಕ್ಷ ಸಿರಾಜ್ ಅಹಮ್ಮದ್, ಮುಖಂಡರುಗಳಾದ ಸಾಧಿಕ್ ಪೈಲ್ವಾನ್, ನಸೀರ್ ಅಹಮ್ಮದ್, ಚಮನ್ ಸಾಬ್, ಜೆ. ಅಮಾನುಲ್ಲಾ ಖಾನ್, ಟಾರ್ಗೆಟ್ ಅಸ್ಲಾಂ, ಎಸ್.ಹೆಚ್. ಅನ್ವರ್ ಸಾಬ್ ಸೇರಿದಂತೆ ಇತರರು ಇದ್ದರು.

# ಅಧ್ಯಯನ ಅಭಿರುಚಿಯಿಂದ ಯಶಸ್ಸು ಸಾಧ್ಯ

### 'ಮಲ್ಲಿಗೆ' - 'ದಾಸವಾಳ' ಕೃತಿಗಳ ಲೋಕಾರ್ಪಣೆ ಸಮಾರಂಭದಲ್ಲಿ ಬಸವಪ್ರಭು ಶ್ರೀ



ದಾವಣಗೆರೆ, ಮಾ. 21 – ಗ್ರಂಥಗಳ ಅಧ್ಯಯನದ ಅಭಿರುಚಿ ಬೆಳೆಸಿಕೊಂಡರೆ ಯಶಸ್ಸು ದೊರೆಯುವ ಜೊತೆಗೆ, ಸಂಕಟ ಹಾಗೂ ಕಷ್ಟಗಳು ಬಂದಾಗ ಎದುರಿಸುವ ಸಾಮರ್ಥ್ಯವೂ ದೊರೆಯುತ್ತದೆ ಎಂದು ವಿರಕ್ತಮಠದ ಶ್ರೀ ಬಸವಪ್ರಭು ಸ್ವಾಮೀಜಿ ಅಭಿಪ್ರಾಯ ಪಟ್ಟಿದ್ದಾರೆ.

ನಗರದ ಕುವೆಂಪು ಕನ್ನಡ ಭವನದಲ್ಲಿ ಆಯೋಜಿಸಲಾಗಿದ್ದ ಜೆಂಬಿಗಿ ಮೃತ್ಯುಂಜಯ ಅವರ 'ಮಲ್ಲಿಗೆ' ಮತ್ತು 'ದಾಸವಾಳ' ಕೃತಿಗಳ ಲೋಕಾರ್ಪಣೆ ಸಮಾರಂಭದ ಸಾನ್ನಿಧ್ಯ ವಹಿಸಿ ಅವರು ಮಾತನಾಡುತ್ತಿದ್ದರು.

ಧೀಮಂತರು ಗ್ರಂಥಗಳ ಅಧ್ಯಯನ, ಕೌಶಲ್ಯ ವೃದ್ಧಿ ಹಾಗೂ ಧ್ಯಾನಗಳಂತಹ ಕೆಲಸಗಳಲ್ಲಿ ತೊಡಗುತ್ತಾರೆ. ಸಮಯ ಸದುಪಯೋಗ ಮಾಡಿಕೊಳ್ಳುತ್ತಾರೆ. ಮತ್ತೊಂದೆಡೆ ಮೂರ್ಖರು ಜೂಜು, ಕುಡಿತ, ಮೋಜು, ಮಸ್ತಿಗಳಲ್ಲಿ ಸಮಯ ಹಾಳು ಮಾಡುತ್ತಾರೆ. ಇಂತಹ ವ್ಯಸನಗಳಲ್ಲಿ ಕಾಲ ಕಳೆಯುವವರ ಜೀವನ ಪೂರ್ತಿ ಹಾಳಾಗುತ್ತದೆ, ಅಧೋಗತಿಗೆ ಹೋಗುತ್ತದೆ ಎಂದು ಶ್ರೀಗಳು ಎಚ್ಚರಿಸಿದರು.

ಪುಸ್ತಕ ಅಧ್ಯಯನ ಹಾಗೂ ಧ್ಯಾನದಲ್ಲಿ ತೊಡಗುವುದರಿಂದ ಪರಮಾನಂದ ಸಿಗುತ್ತದೆ. ಬಾಯಿ ರುಚಿ ಕ್ಷಣಿಕ. ಅಧ್ಯಯನ ರುಚಿ ಬೆಳೆಸಿಕೊಂಡರೆ, ಜೀವನ ಉದ್ಧಾರವಾಗುತ್ತದೆ. ಮನಸ್ಸಿಗೆ ಸಂತೋಷ ಸಿಗುವ ಜೊತೆಗೆ ಯಶಸ್ಸು ಮತ್ತು ಧ್ಯಾನವೂ ಪ್ರಾಪ್ತವಾಗುತ್ತದೆ ಎಂದವರು ಹೇಳಿದರು.

'ದಾಸವಾಳ' ಕೃತಿಯನ್ನು ಬಿಡುಗಡೆ ಮಾಡಿ ಮಾತನಾಡಿದ ಶಾಸಕ ಡಾ. ಶಾಮನೂರು ಶಿವಶಂಕರಪ್ಪ, ಮಲೇಷಿಯಾಗೆ ತೆರಳಿದ ಸಂದರ್ಭದಲ್ಲಿ ಜೆಂಬಿಗಿ ಮೃತ್ಯುಂಜಯ ಅವರು ಅಲ್ಲಿನ ರಾಷ್ಟ್ರ ಪುಷ್ಪವಾದ ದಾಸವಾಳದಿಂದ ಸ್ಫೂರ್ತಿ ಪಡೆದು ತಮ್ಮ ಕೃತಿಗೆ ಅದೇ ಹೆಸರಿಟ್ಟಿದ್ದಾರೆ. ಅವರು ಇನ್ನಷ್ಟು ಕೃತಿಗಳನ್ನು ಜನರಿಗೆ ತಲುಪಿಸಲಿ ಎಂದು ಆಶಿಸಿದರು.

ವೈದ್ಯ ಸಾಹಿತಿ ಡಾ. ಶಶಿಕಲಾ ಕೃಷ್ಣಮೂರ್ತಿ ಮಾತನಾಡಿ, ಬರವಣಿಗೆಯ ಕಲೆಯನ್ನು ಎಲ್ಲರೂ ಕಲಿಯಬಹುದು. ಕನಿಷ್ಠ ದಿನಚರಿಯಿಂದಾದರೂ ಬರವಣಿಗೆ ಆರಂಭಿಸಬೇಕು. ಇದು ವ್ಯಕ್ತಿತ್ವ ಬೆಳವಣಿಗೆಗೆ ಸಹಕಾರಿ ಎಂದರು.

ಹಿರಿಯ ಪತ್ರಕರ್ತ ಹೆಚ್.ಬಿ. ಮಂಜುನಾಥ್ ಮಾತನಾಡಿ, ಕಾವ್ಯದಿಂದ ಮನಸ್ಸು ಆರೋಗ್ಯಕರವಾಗುತ್ತದೆ. ಸಂವೇದನೆ ಇದ್ದಾಗ ಮನಸ್ಸು ಮೌಲ್ಯಯುತವಾಗುತ್ತದೆ. ಜೀವನದ ಅನುಭವದಿಂದ ಸಾಹಿತ್ಯವಾಗುತ್ತದೆ ಎಂದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಬಾಪೂಜಿ ವಿದ್ಯಾಸಂಸ್ಥೆ ಶೈಕ್ಷಣಿಕ ನಿರ್ದೇಶಕ ಡಾ. ಎಂ.ಜಿ. ಈಶ್ವರಪ್ಪ ಮಾತನಾಡಿ, ವಿಶಾಲವಾದ ಪ್ರಪಂಚ ಆಧುನಿಕ ತಂತ್ರಜ್ಞಾನದಿಂದ ಕಿರಿದಾಗುತ್ತಿದೆ. ಅದೇ ರೀತಿ ಸಾಹಿತ್ಯವೂ ಬದಲಾಗುತ್ತಿದೆ. ಮುಂದಿನ ದಿನಗಳಲ್ಲಿ ಪುಸ್ತಕಗಳೆಲ್ಲಾ ಮರೆಯಾಗಿ 'ಇ – ಪುಸ್ತಕ'ಗಳೇ ಉಳಿಯಬಹುದು ಎಂದು ಹೇಳಿದರು.

ಲೆಕ್ಕಪರಿಶೋಧಕ ಅಥಣಿ ಎಸ್. ವೀರಣ್ಣ, ಅವರು 'ಮಲ್ಲಿಗೆ' ಕವನ ಸಂಕಲನ ಬಿಡುಗಡೆ ಮಾಡಿದರು. ರಾಜ್ಯ ಅರಣ್ಯ ಕೈಗಾರಿಕಾ ನಿಗಮದ ನಿರ್ದೇಶಕಿ ಭಾರತಿ ಕುಮಾರ್ ಜೆಂಬಿಗಿ, ಪ್ರಾಧ್ಯಾಪಕ ಡಾ. ಪ್ರಕಾಶ್ ಹಲಗೇರಿ ಉಪಸ್ಥಿತರಿದ್ದರು. ಕೃತಿಕಾರ ಜೆಂಬಿಗಿ ಮೃತ್ಯುಂಜಯ ಪ್ರಾಸ್ತಾವಿಕವಾಗಿ ಮಾತನಾಡಿದರು. ದಾನಮ್ಮ ಮೃತ್ಯುಂಜಯ ಪ್ರಾರ್ಥಿಸಿದರೆ, ಜೆಂಬಿಗಿ ಕೊಟ್ರೇಶ್ ಸ್ವಾಗತಿಸಿದರು. ಕೆ.ಎನ್. ಸ್ವಾಮಿ ನಿರೂಪಿಸಿದರೆ, ಜೆ.ವಿ. ಕರಿಬಸಮ್ಮ ವಂದಿಸಿದರು.

# ಸಾಹಿತ್ಯದಲ್ಲಿ ಮಹಿಳೆಯರ ವಿಶೇಷ ದೃಷ್ಟಿಕೋನ



ಲೇಖಕಿಯರ ಸಂಘದ ರಾಜ್ಯಾಧ್ಯಕ್ಷೆ ವನಮಾಲ ಸಂಪನ್ನಕುಮಾರ್

ದಾವಣಗೆರೆ, ಮಾ. 20 - ಮಹಿಳೆಯು ಕೌಟುಂಬಿಕ ವ್ಯವಸ್ಥೆ ಹಾಗೂ ಇತಿ ಮಿತಿಗಳ ನಡುವೆಯೂ ಸಾಹಿತ್ಯದಲ್ಲಿ ಪುರುಷರಿಗೆ ಸಮನಾದ ಹಾಗೂ ವಿಶೇಷ ದೃಷ್ಟಿಕೋನದ ಆಲೋಚನೆ ಮತ್ತು ಅನುಭವ ಹೊಂದಿರುವುದಾಗಿ ಕರ್ನಾಟಕ ಲೇಖಕಿಯರ ಸಂಘದ ರಾಜ್ಯಾಧ್ಯಕ್ಷೆ ವನಮಾಲ ಸಂಪನ್ನಕುಮಾರ್ ಅಭಿಪ್ರಾಯ ಪಟ್ಟಿದ್ದಾರೆ.

ಕರ್ನಾಟಕ ಲೇಖಕಿರ ಸಂಘದ ಜಿಲ್ಲಾ ಶಾಖೆ ವತಿಯಿಂದ ನಗರದ ಕುವೆಂಪು ಕನ್ನಡ ಭವನದಲ್ಲಿ ಆಯೋಜಿಸಲಾಗಿದ್ದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ, 'ಪೌರ್ಣಿಮೆ' ಕವನ ಸಂಕಲನ ಮತ್ತು 'ಮಲೆನಾಡಿನ ಮಡಿಲಲ್ಲಿ - ಹೊರನಾಡಿನ ಹೊನಲಲ್ಲಿ' ಕೃತಿಗಳ ಲೋಕಾರ್ಪಣೆ ಸಮಾರಂಭ ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ಸಾಹಿತ್ಯವನ್ನು ರಚಿಸುವುದಷ್ಟೇ ಅಲ್ಲದೇ, ಓದುವುದರಿಂದ ವಿಚಾರಧಾರೆ ಸ್ಪಷ್ಟವಾಗುತ್ತದೆ. ಜೀವನ ಪ್ರೀತಿ - ಪ್ರಕೃತಿ ಪ್ರೀತಿ ಸಾಹಿತ್ಯದಿಂದ ಸಾಧ್ಯ ಎಂದು ತಿಳಿಸಿದರು.

ಮಹಿಳೆಗೆ ಈಗ ವಿದ್ಯೆ ಹಾಗೂ ಉದ್ಯೋಗ ದೊರೆತಿದೆ. ಮಕ್ಕಳನ್ನು ಪಾಲಿಸಿ, ಕೌಟುಂಬಿಕ ವ್ಯವಸ್ಥೆಯನ್ನು ನಿರ್ವಹಿಸುತ್ತಲೇ ಮಹಿಳೆ ಮುಂದುವರೆಯುತ್ತಿರುವುದರಿಂದ, ಸಮಾಜಕ್ಕೆ ಪುರುಷರಿಗಿಂತ ಹೆಚ್ಚು ಕೊಡುಗೆ ನೀಡುತ್ತಿದ್ದಾಳೆ ಎಂದವರು ಹೇಳಿದರು.


ಗಂಡು ಹಾಗೂ ಹೆಣ್ಣಿನ ನಡುವೆ ದೇಹ ರಚನೆ ಹಾಗೂ ಮಾನಸಿಕ ಭಿನ್ನತೆ ಇದೆ. ಹೀಗಾಗಿ ಉಭಯರು ಪರಸ್ಪರ ಅನುಸರಿಸಬೇಕಿಲ್ಲ. ಆದರೆ, ಸಾಮರಸ್ಯ ಹೊಂದಬೇಕಿದೆ. ವಿರೋಧಾಭಾಸದ ಬದಲು ವಿಶೇಷತೆಯನ್ನು ಪೋಷಿಸಬೇಕಿದೆ ಎಂದು ವನಮಾಲ ಅಭಿಪ್ರಾಯ ಪಟ್ಟರು.

ಲೇಖಕಿ ವೀಣಾ ಕೃಷ್ಣಮೂರ್ತಿ ಅವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

ಮುಖ್ಯ ಅತಿಥಿಗಳಾಗಿ ದಾವಣಗೆರೆ ವಿ.ವಿ. ಸಿಂಡಿಕೇಟ್ ಸದಸ್ಯೆ ವಿಜಯಲಕ್ಷ್ಮಿ ಹಿರೇಮಠ್, ಜಿಲ್ಲಾ ಅಧ್ಯಕ್ಷ ಡಾ. ಹೆಚ್.ಎಸ್. ಮಂಜುನಾಥ ಕುರ್ಕಿ, ಸಾಹಿತಿ ಅರುಂಧತಿ ರಮೇಶ್, ವನಿತಾ ಸಾಹಿತ್ಯ ವೇದಿಕೆ ಅಧ್ಯಕ್ಷೆ ಮಲ್ಲಮ್ಮ ನಾಗರಾಜ್, ಜಿಲ್ಲಾ ವರದಿಗಾರರ ಕೂಟದ ಅಧ್ಯಕ್ಷ ಜಿ.ಎಂ.ಆರ್. ಆರಾಧ್ಯ ಉಪಸ್ಥಿತರಿದ್ದರು.

ಕುಸುಮ ಲೋಕೇಶ್ ಸ್ವಾಗತಿಸಿದರೆ, ಸುನಿತಾ ಪ್ರಕಾಶ್ ನಿರೂಪಿಸಿದರು. ಶೈಲಜಾ ಪಾಟೀಲ್ ವಂದಿಸಿದರು.

## ನಾಳೆಯಿಂದ ಮೂರು ದಿನ ಶಾಮನೂರಿನ ಆಂಜನೇಯ ಸ್ವಾಮಿ ರಥೋತ್ಸವ : ಸರಳ ಆಚರಣೆಗೆ ಸೂಚನೆ



ದಾವಣಗೆರೆ, ಮಾ. 21- ಶಾಮನೂರು ಗ್ರಾಮದ ಆಂಜನೇಯ ಸ್ವಾಮಿ ರಥೋತ್ಸವವನ್ನು ನಾಡಿದ್ದು ದಿನಾಂಕ 23 ರಿಂದ 25 ರವರೆಗೆ ನಡೆಸಲು ಗ್ರಾಮಸ್ಥರು ನಿರ್ಧರಿಸಿದ್ದು, ಕೊರೊನಾ ನಿಯಂತ್ರಣದ ನಿಟ್ಟಿನಲ್ಲಿ ಸರ್ಕಾರ ನೀಡಿರುವ ನಿರ್ದೇಶನಕ್ಕೆ ಅನುಗುಣವಾಗಿ ರಥೋತ್ಸವದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಜನರು ಭಾಗವಹಿಸದೆ, ಸರಳವಾಗಿ ಜರುಗಿಸಬೇಕು ಎಂದು ತಹಸಿಲ್ದಾರ್ ಬಿ.ಎನ್. ಗಿರೀಶ್ ಮನವಿ ಮಾಡಿದ್ದಾರೆ.

ಸರ್ಕಾರದ ನಿರ್ದೇಶನದಂತೆ ಕೋವಿಡ್ ಪ್ರಕರಣಗಳ ನಿಯಂತ್ರಣಕ್ಕಾಗಿ ಧಾರ್ಮಿಕ ಆಚರಣೆಗಳ ಸಮಾರಂಭಗಳಿಗೆ ತೆರೆದ ಪ್ರದೇಶದಲ್ಲಿ 500 ಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ಜನರು ಭಾಗವಹಿಸುವಂತಿಲ್ಲ. ಸಾಮಾಜಿಕ ಅಂತರ ಕಾಯ್ದುಕೊಳ್ಳುವುದು ಕಡ್ಡಾಯವಾಗಿರುತ್ತದೆ ಎಂದು ಅವರು ತಿಳಿಸಿದ್ದಾರೆ.

## ಐದನೇ ವರ್ಷದ ಪುಣ್ಯಸ್ಮರಣೆ

**ದಿ|| ಸೌಮ್ಯ ಕೆ.ಎನ್**

ಸ್ಟಾಫ್ ನರ್ಸ್,
ಎಸ್.ಎಸ್. ಹೈಟೆಕ್ ಆಸ್ಪತ್ರೆ.



ದಿ|| ಸೌಮ್ಯ ಕೆ.ಎನ್

ನೀವು ನಮ್ಮನ್ನಗಲಿ ಇಂದಿಗೆ ಐದು ವರ್ಷಗಳಾದವು. ಸದಾ ನಿಮ್ಮ ಸ್ಮರಣೆಯಲ್ಲಿರುವ, ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ,

✦ ಪತಿ : ಗಿರಿಧರ ಎನ್.ಆರ್. ✦ ಮಗಳು : ಮೊನಾಲಿ ಎನ್.ಜಿ., ✦ ಶ್ರೀಮತಿ ತುಳಸಿ ✦ ಎನ್.ಆರ್., ಊರ್ಮಿಳಾ, ✦ ಶ್ರೀಮತಿ ಭಾನು ಶ್ರೀ ರವೀಂದ್ರ ✦ ಶೀಥಲ್ ಎನ್.ಆರ್.
ಭಾವ : ರಾಜೇಶ್ ಎನ್.ಆರ್. ಮತ್ತು ಬಂಧು-ಮಿತ್ರರು.









JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte